ಗೌ
ರಿ

ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

04 ಮೇ 2016 ಪುಟ 20 ರೂ. 15/-

ಜಾತಿ ಪುರಾಣ
ಜಾತಿ ಸಂಘರ್ಷ



ಎಚ್ಚೆತ್ತುಕೊಳ್ಳಿ ಸಿದ್ದು




ಗಾರ್ಮೆಂಟ್ಸ್ ಕಿಚ್ಚಿಗೆ ಯಾರು ಹೊಣೆ?



ಉತ್ತರಕನ್ನಡ
ಶಾನ್ ದೇಶಪಾಂಡೆಗೆ
ವಾದಿ ಹೆಬ್ಬಾರ್ ಹೊಡೆತ


ದಾವಣಗೆರೆ
ಶಾಮನೂರು ದಣಿಯ ಮುಪ್ಪಿನ ರಾಜಕಾರಣ





ಪ(ಂಗ)ನಾಮಾ ಪೇಪರ್ಸ್

ಪಿಯು ಉಪನ್ಯಾಸಕರ ಮುಷ್ಕರ ಎಷ್ಟು ಸಮರ್ಥನೀಯ



ಡಾ. ವಾಸು ಎಚ್.ವಿ.

ಕಳೆದೊಂದು ತಿಂಗಳಿಂದ ಪಿಯುಸಿ ಪರೀಕ್ಷೆಗಳು, ಅದನ್ನು ಬರೆವ ವಿದ್ಯಾರ್ಥಿಗಳು ಮತ್ತು ಅವರ ಪೋಷಕರನ್ನಷ್ಟೇ ಕಾಡುತ್ತಿಲ್ಲ, ಸಾರ್ವಜನಿಕ ವಲಯದಲ್ಲಿ ಅದೊಂದು ದೊಡ್ಡ ಚರ್ಚೆಯಾಗಿದೆ. ಮೊದಲನೆಯ ಕಾರಣ ಎರಡು ಬಾರಿ ರಸಾಯನಶಾಸ್ತ್ರ ಪ್ರಶ್ನೆಪತ್ರಿಕೆ ಸೋರಿಕೆಯಾದದ್ದು, ಎರಡನೆಯದ್ದು ಪಿಯುಸಿ ಉಪನ್ಯಾಸಕರ ಮುಷ್ಕರದ್ದು. ಈಗ ಹೇಗೋ ರಸಾಯನಶಾಸ್ತ್ರ ಪರೀಕ್ಷೆ ಮುಗಿದಿದೆ. ಇನ್ನೊಮ್ಮೆ ಸೋರಿಕೆಯಾದರೆ ರಾಜೀನಾಮೆ ಕೊಡುತ್ತೇನೆ ಎಂದಿದ್ದ ಕಿಮ್ಮನೆಯವರ ಸಚಿವ ಪದವಿ ಉಳಿದುಕೊಂಡಿದೆ. ಆದರೆ, ಮುಷ್ಕರ ಮುಗಿದಿಲ್ಲ. ಹಲವು ದಿನಗಳ ಹಿಂದೆ ಪ್ರತಿಭಟನೆ ನಡೆಯುತ್ತಿರುವ ಫ್ರೀಡಂ ಪಾರ್ಕ್‌ನಲ್ಲಿ ಒಂದು ಘೋಷಣೆಯಾಯಿತು, 'ಶುಭ ಸುದ್ದಿ ಬರುತ್ತದೆ. ಕೇಳಿಕೊಂಡು ಹೋಗಿ' ಎಂದು ಮನೆಯ ಕಡೆ ಮುಖ ಮಾಡಿದ್ದ ಹೋರಾಟನಿರತರಿಗೆ ಹೇಳಲಾಯಿತು. ಆದರೆ, ಯಾವ ಶುಭ ಸುದ್ದಿಯೂ ಬರಲಿಲ್ಲ. ಹಾಗಾಗಿ, ಈ ದಿನದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಮುಗಿಸಿಕೊಂಡು ಮತ್ತೆ ಹೋರಾಟ ಮುಂದುವರೆಸಲು ತೀರ್ಮಾನಿಸಿದ್ದಾರೆ. ಇದು ಎಲ್ಲಿಯವರೆಗೆ ಹೋಗಿನಿಲ್ಲುತ್ತದೆ ಎಂಬುದು ಗೊತ್ತಿಲ್ಲ. ಪಿಯುಸಿ ಉಪನ್ಯಾಸಕರ ನ್ಯಾಯಯುತ ಬೇಡಿಕೆಗಳು ಈಡೇರಲಿ, ಅವರು ತಮ್ಮ ಕೆಲಸಕ್ಕೆ ಮರಳಲಿ ಎಂದು ಆಶಿಸೋಣ.

ಆದರೆ, ಈ ಸಂದರ್ಭದಲ್ಲಿ ಕೇಳಿಕೊಳ್ಳಲೇಬೇಕಾದ ಕೆಲವು ಪ್ರಶ್ನೆಗಳಿವೆ. ಪಿಯುಸಿ ಉಪನ್ಯಾಸಕರ ಮುಷ್ಕರ ಎಷ್ಟು ಸಮರ್ಥನೀಯ ಎಂಬ ಪ್ರಶ್ನೆ. 10 ವರ್ಷದ ಹಿಂದೆ ಪಶುವೈದ್ಯರು, ತಹಸೀಲ್ದಾರ್‌ಗಳು ಮತ್ತು ಪಿಯು ಉಪನ್ಯಾಸಕರ ವೇತನಶ್ರೇಣಿ ಇತ್ಯಾದಿಗಳು ಒಂದೇ ಆಗಿದ್ದವು. ನಂತರ ಎರಡು ಹಂತಗಳಲ್ಲಿ (ಎರಡು ವೇತನ ಆಯೋಗದ ಶಿಫಾರಸ್ಸುಗಳನ್ನು ಜಾರಿ ಮಾಡುವಾಗ) ಉಳಿದವರ ವೇತನ ಹೆಚ್ಚಾಗುತ್ತಾ ಹೋಯಿತು., ಪಿಯು ಉಪನ್ಯಾಸಕರ ವೇತನ ಹಿಂದೆ ಬಿದ್ದಿತು. ಇದು ಮೂಲವೇತನದಲ್ಲೇ ಇರುವ ತಾರತಮ್ಯವಾಗಿರುವುದರಿಂದ, ಅದಕ್ಕನುಗುಣವಾಗಿ ಕೈಗೆ ಪಡೆಯುವ ವೇತನವೂ ಕಡಿಮೆಯಾಗಿಬಿಡುತ್ತದೆ. ಈಗ ಇನ್ನೊಂದು ವೇತನ ಆಯೋಗದ ಅವಧಿ ಸಮೀಪಿಸಿದೆ. ಹಾಗಾಗಿ ಈ ಸಾರಿ ತಾರತಮ್ಯವೂ ಮತ್ತಷ್ಟು ಹೆಚ್ಚಾಗಲಿದೆ ಎನ್ನುವ ಆತಂಕ ಪಿಯು ಉಪನ್ಯಾಸಕರದ್ದಾಗಿರುತ್ತದೆ. ಇದೇ ಅವಧಿಯಲ್ಲಿ ಪದವಿ ಕಾಲೇಜಿನಲ್ಲಿ ಯುಜಿಸಿ ವೇತನಶ್ರೇಣಿ ಪಡೆಯುತ್ತಿರುವ ಅಧ್ಯಾಪಕರಿಗೂ, ಪಿಯು ಉಪನ್ಯಾಸಕರಿಗೂ ವೇತನದಲ್ಲಿ ದೊಡ್ಡ ವ್ಯತ್ಯಾಸ ಉಂಟಾಗಿದೆ. ಒಂದೂವರೆ ದಶಕದ ಹಿಂದೆ ಅದೆಷ್ಟೋ ಕಾಲೇಜುಗಳಲ್ಲಿ ಪಿಯುಸಿ ಮತ್ತು ಪದವಿ ಕೋರ್ಸುಗಳೆರಡೂ ಒಟ್ಟಿಗೇ ನಡೆಯುತ್ತಿದ್ದವು. ಉಪನ್ಯಾಸಕರುಗಳು ಎರಡೂ ಕಡೆಗೆ ಅವರೇ ಇರುತ್ತಿದ್ದರು. ಆದರೆ, ಅವೆರಡನ್ನೂ ಪ್ರತ್ಯೇಕಿಸಿದ ನಂತರ ವೇತನಶ್ರೇಣಿ ಮಾತ್ರವಲ್ಲದೇ ಬಡ್ತಿ, ಪದನಾಮಗಳಲ್ಲೂ (ಲೆಕ್ಚರರ್, ಸೀನಿಯರ್ ಲೆಕ್ಚರರ್, ಅಸಿಸ್ಟೆಂಟ್ ಪ್ರೊಫೆಸರ್ ಇತ್ಯಾದಿ) ಸಾಕಷ್ಟು ವ್ಯತ್ಯಾಸ ಉಂಟಾಯಿತು. ಹಾಗಾಗಿ ತಮಗೆ ಅನ್ಯಾಯವಾಗಿದೆ ಎಂಬ ಪಿಯು ಉಪನ್ಯಾಸಕರ ಅನಿಸಿಕೆ ತರ್ಕರಹಿತವಾದದ್ದಲ್ಲ.

ಇವನ್ನು ಒಂದು ಮಟ್ಟಿಗೆ ನಿವಾರಿಸುವ ಕುಮಾರ್‌ನಾಯಕ್ ಶಿಫಾರಸ್ಸುಗಳನ್ನು ಜಾರಿ ಮಾಡಬೇಕು ಎಂಬುದು ಪಿಯು ಉಪನ್ಯಾಸಕರ ಹಕ್ಕೊತ್ತಾಯವಾಗಿದೆ. ಸರ್ಕಾರವು ಮೂಗು ಹಿಡಿದಾಗ ಮಾತ್ರ ಬಾಯಿ ಬಿಡುತ್ತದಾದ್ದರಿಂದ, ಮುಷ್ಕರ ಮಾಡಲು ಮೌಲ್ಯಮಾಪನದ ಸಮಯಕ್ಕಿಂತ ಸೂಕ್ತವಾದ ಸಮಯ ಇನ್ನಾವುದಿರಲು ಸಾಧ್ಯ? ಅದನ್ನೇ ಅವರು ಮಾಡುತ್ತಿದ್ದಾರೆ. ಈಗ ಮೌಲ್ಯಮಾಪನ ಮಾಡಿಬಿಡಿ, ನಂತರ ನೋಡಿಕೊಳ್ಳೋಣ ಎಂದು ಹೇಳುವ ಸರ್ಕಾರವು ನಂಬಲರ್ಹವಲ್ಲ ಎನ್ನುವುದಕ್ಕೆ ಬೇಕಾದಷ್ಟು ನಿದರ್ಶನಗಳಿವೆ. ಈ ರೀತಿಯಲ್ಲಿ ಪಿಯು ಉಪನ್ಯಾಸಕರ ಮುಷ್ಕರ ಸಮರ್ಥನೀಯವಾದುದಾಗಿದೆ.

ಜೊತೆಗೆ ಇನ್ನೂ ಒಂದು ಮುಖ್ಯ ಅಂಶವನ್ನು ಪರಿಗಣಿಸಬೇಕು. ಸರ್ಕಾರೀ ಕಾಯಂ ನೌಕರರ ವೇತನಗಳು ಬಹಳ ಹಿಂದೆ ಇಷ್ಟೊಂದು ಇರಲಿಲ್ಲ. ಸಾಫ್ಟ್‌ವೇರ್ ಇಂಜಿನಿಯರ್‌ಗಳೂ ಒಳಗೊಂಡಂತೆ, ಇನ್ನೂ ಹಲವು ಕ್ಷೇತ್ರಗಳಲ್ಲಿ ದಿಢೀರನೆಂದು ಭಾರೀ ಸಂಬಳ ಪಡೆಯುವುದು ಆರಂಭವಾದ ನಂತರ, ಸರ್ಕಾರೀ ನೌಕರರ ಸಂಬಳವೂ ಹಿಂದೆಂದೂ ಇಲ್ಲದ ಪ್ರಮಾಣಕ್ಕೆ ಏರಿಬಿಟ್ಟಿತು. ಅದರಲ್ಲೂ ಕಾಲೇಜು ಉಪನ್ಯಾಸಕರ ಸಂಬಳ ಮಿಕ್ಕವರಿಗಿಂತ ಇನ್ನೂ ಒಂದು ತೂಕ ಹೆಚ್ಚಿತು. ಆದರೂ, ಇವತ್ತಿಗೂ ಕೆಲವು ಕ್ಷೇತ್ರಗಳ ಇಂಜಿನಿಯರ್‌ಗಳು ಮತ್ತು ಖಾಸಗಿ ವೈದ್ಯರುಗಳು ಸಂಪಾದನೆಗೂ ಉಪನ್ಯಾಸಕರ ವೇತನಕ್ಕೂ ತಾಳೆಯೇ ಇಲ್ಲ. ಯಾವುದೇ ಸಮಾಜದಲ್ಲಿ ಶಿಕ್ಷಕರಿಗೇ ಅತ್ಯುತ್ತಮ ವೇತನ, ಸವಲತ್ತುಗಳು ಮತ್ತು ಸ್ವಾಯತ್ತತೆ ಇರಬೇಕಾದುದು ನ್ಯಾಯ. ಅವರು ಕೆಲಸದ ಅಭದ್ರತೆಯಾಗಲೀ, ಜೀವನ ನಿರ್ವಹಣೆಯ ಕಷ್ಟಗಳಾಗಲೀ ಇಲ್ಲದೇ ಸಂಪೂರ್ಣವಾಗಿ ಶೈಕ್ಷಣಿಕ ಕ್ಷೇತ್ರದ ಮೇಲೆಯೇ ಕೇಂದ್ರೀಕರಿಸುವಂತಾಗಬೇಕು. ಆ ಮೂಲಕ ರಾಷ್ಟ್ರ ನಿರ್ಮಾಣದ ಕೆಲಸವಾದ ಶಿಕ್ಷಣ ಕ್ಷೇತ್ರದಲ್ಲಿ ತನ್ಮಯತೆಯಿಂದ ತೊಡಗಿಸಿಕೊಳ್ಳಬೇಕು ಎಂಬುದು ಇದರ ಹಿಂದಿನ ಉದ್ದೇಶ.

ಇವೆಲ್ಲಾ ಒಂದು ಮುಖ. ಇದಕ್ಕೆ ಇನ್ನೂ ಒಂದು ಮುಖವಿದೆ. ಈ ನಕಾರಾತ್ಮಕ ಸಂಗತಿಯನ್ನು ಈ ಸಂದರ್ಭದಲ್ಲಿ ಹೇಳುವುದು ಸರಿಯೇ ಎಂಬ ಪ್ರಶ್ನೆಯನ್ನು ಕೇಳಿಕೊಂಡಿದ್ದೇನೆ. ಏಕೆಂದರೆ, ತಾರತಮ್ಯಕ್ಕೆ, ಅನ್ಯಾಯಕ್ಕೆ ಒಳಗಾದ ಸಮುದಾಯವೊಂದು ತನ್ನ ಹಕ್ಕಿನ ಪ್ರಶ್ನೆಯನ್ನು ಮುಂದಿಡುವಾಗ, (ಎಲ್ಲಾ ಕ್ಷೇತ್ರಗಳಲ್ಲೂ ಇರುವಂತೆ) ಅದರ



ನಕಾರಾತ್ಮಕ ಅಂಶಗಳನ್ನು ಮುಂದಿಡುವುದು ಸರಿಯಲ್ಲ. ಅದರಿಂದ, ಯಾರು ಇವರನ್ನು ಶೋಷಿಸುತ್ತಿರುತ್ತಾರೋ ಅವರಿಗೇ ಅನುಕೂಲವಾಗುತ್ತದೆ. ಉದಾಹರಣೆಗೆ ಬಿಕ್ಕಟ್ಟಿನಲ್ಲಿರುವ ರೈತರು ಹೋರಾಟ ಮಾಡುವಾಗ ಅವರ ಸೋಮಾರಿತನ, ದುಂದುವೆಚ್ಚದ ಕುರಿತು ಮಾತನಾಡುವುದು, ಸಂಕಷ್ಟದಲ್ಲಿರುವ ಕಾರ್ಮಿಕರು ಹೋರಾಟ ಮಾಡುವಾಗ ಅವರ ಅಶಿಸ್ತಿನ ಕುರಿತು ಮಾತನಾಡುವುದು ನಿಜಕ್ಕೂ ಅನ್ಯಾಯ. ಏಕೆಂದರೆ, ಸೋಮಾರಿತನ, ದುಂದುವೆಚ್ಚ ಅಶಿಸ್ತು ಒಟ್ಟಾರೆ ವಿದ್ಯಮಾನದ ಸಣ್ಣ ಭಾಗ ಅಷ್ಟೇ. ಪ್ರಧಾನವಾದ ಅಂಶ ಸದರಿ ದುಡಿಯುವ ಸಮುದಾಯದ ಮೇಲಾಗುತ್ತಿರುವ ದಬ್ಬಾಳಿಕೆ ಹಾಗೂ ಶೋಷಣೆಗಳದ್ದೇ ಆಗಿರುತ್ತದೆ. ಹಾಗಾಗಿ ನಮ್ಮ ಅಡ್ಡ ಮಾತುಗಳನ್ನು ತಾತ್ಕಾಲಿಕವಾಗಿ ಅಮಾನತ್ತಿನಲ್ಲಿಟ್ಟು, 'ಆಂತರಿಕ'ವಾಗಿ ವಿಮರ್ಶೆಗಳನ್ನು ಹೇಳುವುದು ಸರಿಯಾದ ವಿಧಾನವಾಗಿರುತ್ತದೆ.

ಆದರೆ, ಸರ್ಕಾರದ ಮೂಗು ಹಿಡಿದು ಬಾಯಿ ತೆರೆಸಲು ಶಕ್ತವಾಗಿರುವ, ಸುಶಿಕ್ಷಿತ ಸಮುದಾಯವಾದ ಪಿಯು ಉಪನ್ಯಾಸಕರ ವಿಚಾರದಲ್ಲಿ ಸ್ವಲ್ಪ ಧೈರ್ಯ ಮಾಡಿ ಮಾತನಾಡುವುದು ದೊಡ್ಡ ಸಮಸ್ಯೆಯಲ್ಲ ಎನಿಸುತ್ತದೆ. ಮೇಲಾಗಿ ಈ ಒಂದು ಲೇಖನದಿಂದ ಅಂತಹ ಪರಿಣಾಮವೇನೂ ಆಗದು. ಹೀಗಾಗಿ ಸುಶಿಕ್ಷಿತರೆನಿಸಿಕೊಂಡವರ ತಪ್ಪುಗಳ ಕುರಿತು ಸಾಂದರ್ಭಿಕವಾದ ಪ್ರಶ್ನೆಗಳನ್ನು ಮುಂದಿಡಬಹುದೆಂದು ಭಾವಿಸಿ ಇದನ್ನು ಬರೆದಿದ್ದೇನೆ.

ಯುಜಿಸಿ ಅಧ್ಯಾಪಕರ ವೇತನ ಮತ್ತು ಇತರ ಸವಲತ್ತುಗಳ ಕುರಿತು ಆಕ್ಷೇಪ ಮತ್ತು ಲೇವಡಿಗಳನ್ನು ನಾವೆಲ್ಲಾ ಕೇಳುತ್ತಿರುತ್ತೇವೆ. ಇಷ್ಟೊಂದು ಸಂಬಳ ಅವರಿಗೆ ಕೊಡುವುದು ಸರಿಯೇ ಎಂದಷ್ಟೇ ಅಲ್ಲದೇ, ಅವರಿಗಿರುವ ಇತರ ಸವಲತ್ತುಗಳ ಪ್ರಮಾಣ ನೋಡಿದರೆ, ಸರ್ಕಾರವು 'ಅನಗತ್ಯವಾಗಿ ಕೊಬ್ಬಿಸುತ್ತಿರುವ' ಸಮುದಾಯವಿದು ಎಂದು ಕೆಲವರು ಕೊಂಕು ನುಡಿಯುತ್ತಾರೆ. ಆದರೆ, ಮೇಲೆ ಹೇಳಿದ ಕಾರಣಗಳಿಂದ ಉನ್ನತ ಶಿಕ್ಷಣದಲ್ಲಿನ ಶಿಕ್ಷಕರಿಗೆ ಅಷ್ಟು ಕೊಡುವುದು ಸಮರ್ಥನೀಯವಾದುದೇ. ಅವರಿಗೆ, ವಾರಕ್ಕೆ 16 ಗಂಟೆಗಳ ಬೋಧನಾ ಅವಧಿಯನ್ನು 22 ಗಂಟೆಗಳಿಗೆ ಏರಿಸಿದಾಗಲೂ ನಾವೆಲ್ಲರೂ ಆಕ್ಷೇಪಿಸಿದೆವು. ಏಕೆಂದರೆ, ಶಿಕ್ಷಕರ ಕೆಲಸ, ಅದರಲ್ಲೂ ಪದವಿ ಹಾಗೂ ಸ್ನಾತಕೋತ್ತರ ಕೋರ್ಸುಗಳಲ್ಲಿ ಪಾಠ ಮಾಡುವ ಶಿಕ್ಷಕರ ಕೆಲಸವೆಂದರೆ ಅದು ತರಗತಿಯಲ್ಲಿ ಮಕ್ಕಿಕಾಮಕ್ಕಿ ಕಕ್ಕುವ ಕೆಲಸವಲ್ಲ, ಅದೊಂದು ಸೃಜನಶೀಲ ಪ್ರಕ್ರಿಯೆಯೂ ಹೌದು. ಅದಕ್ಕೆ ತಯಾರಿಯ ಅಗತ್ಯವಿದೆ. ಪಾಠ ಮಾಡುವವರೂ ಸಾಕಷ್ಟು ಓದಿಕೊಂಡು ತಯಾರಾಗಬೇಕು. ಪಾಠ ಮಾಡುವುದಲ್ಲದೇ ಇನ್ನೂ ಎಷ್ಟೋ ಬಗೆಯ ಪೂರಕ ಚಟುವಟಿಕೆಗಳಿಗೂ ಅವರು ಸಮಯ ಎತ್ತಿಡಬೇಕು. ಹಾಗಾಗಿ, ಬೋಧನಾ ಅವಧಿಯನ್ನು 22 ಗಂಟೆಗಳಿಗೆ ಏರಿಸುವುದು ಎಂದರೆ, ಶಿಕ್ಷಕರನ್ನು ಹಿಂಡುವುದು ಮತ್ತು ಶಿಕ್ಷಣದ ಗುಣಮಟ್ಟವನ್ನು ಕಡಿತಗೊಳಿಸುವುದು ಎಂದೇ ಅರ್ಥ.

ಇವೆಲ್ಲಾ ಮಾತಾಡುವಾಗ, ಈ ಯುಜಿಸಿ ಅಧ್ಯಾಪಕರುಗಳು 16 ಗಂಟೆ ಪಾಠ ಮಾಡಿ ಮಿಕ್ಕುಳಿವ ಸಂದರ್ಭದಲ್ಲಿ ನಿಜಕ್ಕೂ ತಯಾರಿಯನ್ನು, ಸಂಶೋಧನೆಯನ್ನು, ಪಠ್ಯಪೂರಕ ಸಮಾಜಮುಖಿ ಕೆಲಸಗಳನ್ನು ಮಾಡಬೇಕೆಂಬ ಅಪೇಕ್ಷೆ ನಮ್ಮದಾಗಿರುತ್ತದೆ. ಅದನ್ನು ಎಷ್ಟು ಪ್ರಮಾಣದ ಅಧ್ಯಾಪಕರುಗಳು ಮಾಡುತ್ತಿದ್ದಾರೆ? ಯಾವ ಬಗೆಯ ಅಕ್ಯಾಡೆಮಿಕ್ ವಾತಾವರಣ ಇಂದು ನಮ್ಮ ಪದವಿ ಕಾಲೇಜುಗಳಲ್ಲಿದೆ, ವಿಶ್ವವಿದ್ಯಾಲಯಗಳಲ್ಲಿದೆ? ಅವರ ಸಂಶೋಧನೆಯ ಗುಣಮಟ್ಟವೇನು? ಈ ಪ್ರಶ್ನೆಗಳಿಗೆ ಉತ್ತರ ನಮ್ಮಲ್ಲಿ ನಿರಾಶೆಯನ್ನೂ, ಆತಂಕವನ್ನೂ ಹುಟ್ಟಿಸುವ ರೀತಿಯಲ್ಲಿದೆ. ಸಂಶೋಧನೆ, ಕ್ರಿಯಾಶೀಲ ತೊಡಗಿಕೊಳ್ಳುವಿಕೆ, ಸಮಾಜ ಪರಿವರ್ತನೆ ಹಾಗೂ ಪ್ರಜಾತಂತ್ರದ ವಿಸ್ತರಣೆ ಇವುಗಳಿಗೆ ಒಂದು ಸಮುದಾಯವಾಗಿ ಅಧ್ಯಾಪಕ ವರ್ಗದ ಕೊಡುಗೆ ದಿನೇದಿನೇ ಕ್ಷೀಣಿಸುತ್ತದೆ. ಕನಿಷ್ಠ ಅಕ್ಯಾಡೆಮಿಕ್ ಶಿಸ್ತು ಮತ್ತು ಬದ್ಧತೆಗಳಿಲ್ಲದವರದ್ದೇ ಮೆಜಾರಿಟಿಯಾಗಿದೆ. ಶಿಕ್ಷಣದ ಮೂಲಭೂತ ಉದ್ದೇಶ ಜ್ಞಾನ, ಸೃಜನಶೀಲತೆ ಮತ್ತು ನೆಮ್ಮದಿಯನ್ನು ವಿಸ್ತರಿಸುತ್ತಾ ಹೋಗುವ, ಬಹುತ್ವವನ್ನು ಗೌರವಿಸುವ ಮತ್ತು ಬೆಳೆಸುವ, ಮಾನವೀಯವಾದ ಸಮಾಜ ನಿರ್ಮಾಣದ ಕೆಲಸ ಎಂಬ ಉದಾತ್ತ ವ್ಯಾಖ್ಯಾನಗಳಿಗೆ ಪೂರಕವಾಗಿ ನಮ್ಮ ಶೈಕ್ಷಣಿಕ - ಸಮುದಾಯ ದುಡಿಯುತ್ತಿದೆಯೇ? ಇಂದಿಗೂ ಇವೆಲ್ಲಕ್ಕೂ ನ್ಯಾಯ ಸಲ್ಲಿಸುತ್ತಿರುವ ಗಣನೀಯ ಸಂಖ್ಯೆಯ ಶಿಕ್ಷಕರು ಪ್ರಾಥಮಿಕ ಮಟ್ಟದಿಂದ ವಿಶ್ವವಿದ್ಯಾಲಯದ ಮಟ್ಟದವರೆಗೆ ಇದ್ದಾರೆ. ಆದರೆ, ಈ 'ಗಣನೀಯ ಸಂಖ್ಯೆ'ಯ ಶಿಕ್ಷಕರು, ತಮ್ಮ ಶಾಲೆ, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳೊಳಗೆ ಅತ್ಯಂತ ಅಲ್ಪಸಂಖ್ಯಾತರಾಗಿದ್ದಾರೆ.

ಆದ್ದರಿಂದಲೇ ಯುಜಿಸಿ ಶಿಕ್ಷಕರ ಕುರಿತು ಅಪಹಾಸ್ಯ ಅಸೂಯೆ, ತಿರಸ್ಕಾರ ಅಲ್ಲಲ್ಲಿ ವ್ಯಕ್ತವಾಗುತ್ತಲೇ ಇರುತ್ತದೆ. ಇಂದು ಅವರು ಪಡೆಯುತ್ತಿರುವ ವೇತನ ಮತ್ತು ಸವಲತ್ತುಗಳನ್ನು (ವಾಸ್ತವದಲ್ಲಿ ಇನ್ನೂ ಹೆಚ್ಚನ್ನು) ಪಡೆಯಲು ಅರ್ಹವಾಗಿರುವ ಸಮುದಾಯವೊಂದು ತನ್ನದೇ ಸೋಮಾರಿತನ ಮತ್ತು ಬೇಜವಾಬ್ದಾರಿತನಗಳ ಕಾರಣಕ್ಕೆ ಲೇವಡಿಗೊಳಗಾಗುವ ಸನ್ನಿವೇಶಕ್ಕೆ ಬಂದು ನಿಂತಿದೆ. ಹಾಗಾಗಿ ಶಿಕ್ಷಣ ಇಲಾಖೆಯಲ್ಲಿ ಮೇಲೆ ಕೂತಿರುವ ಅಪ... ಐಎಎಸ್ ಅಧಿಕಾರಿಗಳ ಬೇಕಾಬಿಟ್ಟಿ ಕ್ರಮಗಳಿಗೂ ... ಸಿಕ್ಕಿಬಿಡುತ್ತದೆ.

ತಮ್ಮ ವೇತನ, ಸವಲತ್ತುಗಳನ್ನು ... ಹೆಚ್ಚಿಸಬೇಕೆಂದು ಬೇಡಿಕೆ ಮುಂದಿಡುವ ... ಅಧ್ಯಾಪಕರುಗಳು, ತಮ್ಮದೇ ಸಹೋದ್ಯೋಗಿಗಳಾದ ... ಉಪನ್ಯಾಸಕರ ಹಕ್ಕೊತ್ತಾಯಗಳ ಕುರಿತು ಯಾವ ನಿ... ಹೊಂದಿದ್ದಾರೆ? ಅವರನ್ನು ಹೇಗೆ ನಡೆಸಿಕೊಳ್ಳುತ್ತಾರೆ?' ಹೋರಾಟದ ಜೊತೆಗೆ ಎಷ್ಟರಮಟ್ಟಿಗೆ ನಿಲ್ಲುತ್ತಾರೆ? ನಿಕೃಷ್ಟ ರೀತಿಯಲ್ಲಿ ಬದುಕುತ್ತಿರುವ ಸಮಾಜದ ... ಸಮುದಾಯಗಳ ಹಕ್ಕುಗಳ ವಿಚಾರದಲ್ಲಿ ಯಾವ ಧ... ಹೊಂದಿದ್ದಾರೆ? ಸಮಸ್ತ ಸಮಾಜದ ಕುರಿತು ... ಚಿಂತನೆ ಹಾಗೂ ಕ್ರಿಯೆಯನ್ನು ಉಳಿದ ಯಾರಿಂದ ... ಮಾಡದಿದ್ದರೂ ಪರವಾಗಿಲ್ಲ, ಈ ಸುಶಿಕ್ಷಿತ ಶ್ರೇ... ಸಮುದಾಯದಿಂದಂತೂ ನಿರೀಕ್ಷೆ ಮಾಡಲೇಬೇಕು. ತಕ್ಕುದಾಗಿ ಪಾಠ ಹೇಳುವ ಮಂದಿ ನ... ಕೊಳ್ಳುತ್ತಿಲ್ಲವೆಂಬುದು ಮಾತ್ರ ದುರಂತ.

ತಮ್ಮ ವೇತನ ಹೆಚ್ಚಳ ಇತ್ಯಾದಿಗಳನ್ನು ಮುಂದಿ... ಸಂದರ್ಭದಲ್ಲಿ ಅಧಿಕಾರಸ್ಥರನ್ನು ಕರೆದು ಬೆಳ್ಳಿ ... ಕಾರುಗಳಂತಹ ಉಡುಗೊರೆಗಳನ್ನೂ ಶಿಕ್ಷಕರು ... ನೀಡಿದ್ದಾರೆ. ಒಂದಿಡೀ ಬ್ಯಾಚ್‌ನ ನೌಕರರು ಬಡ್ತಿ ... ಇನ್ನೇನನ್ನೋ ಪಡೆದುಕೊಳ್ಳಲು ತಲಾ ಇಂತಿಷ್ಟು ... (ಈಗ ಲಕ್ಷ) ಹಣ ಎಂದು ನಿಗದಿ ಮಾಡಿ, ... ಎಲ್ಲರಿಂದ ಸಂಗ್ರಹಿಸಿ ವಿಧಾನಸೌಧಕ್ಕೆ ತಲುಪಿಸುವ ಪ... ಇಟ್ಟುಕೊಂಡಿದ್ದಾರೆ. ಮಿಕ್ಕ ಇಲಾಖೆಗಳಲ್ಲೂ ... ನಡೆಯುತ್ತವೆ; ಶಿಕ್ಷಣ ಕ್ಷೇತ್ರವೂ ಹೊರತಾಗಿಲ್ಲ ...

ಮಿಕ್ಕ ಯಾರಿಂದಲೂ ಇಲ್ಲದ ನಿರೀಕ್ಷೆಯನ್ನು ... ನಿರೀಕ್ಷೆಯ ಹೊರೆಯನ್ನು ಶಿಕ್ಷಕ ಸಮುದಾಯದ ... ಮಾತ್ರ ಹೊರಿಸಬಾರದೆಂದು ಕೆಲವರು ಹೇಳುತ್ತಾರೆ. ಸಮಾಜವೇ ಕೆಟ್ಟಿರುವಾಗ ನೀವು ಕೇವಲ ವೈದ್ಯ... ದೂರುತ್ತೀರಿ, ವಕೀಲರನ್ನೇಕೆ ದೂರುತ್ತೀರಿ, ಪತ್ರಕರ್ತ... ದೂರುತ್ತೀರಿ ಎಂದು ಆಯಾ ವಿಭಾಗದವರು ಕೇಳುತ್ತಿ... ಇದೇ ಮಾತನ್ನು ರಾಜಕಾರಣಿಗಳು, ಅಧಿಕಾರಿ... ಹೇಳುತ್ತಾರೆ. ಅಲ್ಲಿಗೆ ಯಾರೂ ಯಾರನ್ನೂ ಕೇಳುವ ... ಎಂದಾಗಿಬಿಡುತ್ತದೆ.

ಮೇಲಿನ ಹೆಚ್ಚಿನ ಮಾತುಗಳು ಪದವಿ ... ವಿಶ್ವವಿದ್ಯಾಲಯಗಳ ಶಿಕ್ಷಕರಿಗೆ ಸಂಬಂಧಿಸಿದ್ದಾಗಿದೆ. ಇನ್ನಾವುದೋ ಮಟ್ಟದಲ್ಲಿ ಪಿಯು ಉಪನ್ಯಾಸಕ... ಅನ್ವಯಿಸುತ್ತದೆ. ಯುಜಿಸಿ ವೃಂದವು ಪಿಯು ಉಪನ್ಯಾ... ನೋಡಿದಂತೆಯೇ, ಪಿಯು ಉಪನ್ಯಾಸಕರು, ತಮ... ಕೆಳಗಿರುವ ಹೈಸ್ಕೂಲ್ ಮತ್ತು ಪ್ರಾಥಮಿಕ ಶಾ... ಶಿಕ್ಷಕ ವೃಂದ, ತಮ್ಮದೇ ಕಾಲೇಜುಗಳಲ್ಲಿ ... ಮಾಡುತ್ತಿರುವ ಬೋಧಕೇತರ ಸಿಬ್ಬಂದಿಯನ್ನು ನೋಡು... ಅಲ್ಲಿನ್ನೂ ಅಷ್ಟು ದೊಡ್ಡ ಪ್ರಮಾಣದಲ್ಲಿ ... ಉಪನ್ಯಾಸಕರು ಇಲ್ಲ. ನಂತರದ ದಿನಗಳಲ್ಲಿ ಬಂ... ಅವರ ಕುರಿತ ಧೋರಣೆಯು ಪದವಿಯ ಯು... ಬೋಧಕರಿಗಿಂತ ಬೇರೆ ಆಗಿರುವುದಿಲ್ಲ. ಈ ತ... ಪಿಯು ಉಪನ್ಯಾಸಕರ ಒತ್ತಾಯವು ಯುಜಿಸಿಗೆ ಸಮಾ... ವೇತನ ಶ್ರೇಣಿ ಕೊಡಿ ಎಂಬುದಾಗಿಲ್ಲದಿದ್ದರೂ, ಸಾರಾಂ... ಕಣ್ಣು ಆ ಕಡೆಗೇ ಇದೆ. ತನ್ನಂತೆ ತಾನೇ ಅದರಲ್ಲಿ ತಪ್ಪ... ಇಲ್ಲ. ಕೆಳಗಿನ ಹಂತದ ಶಿಕ್ಷಕರಿಗೇ ಹೆಚ್ಚಿನ ... ಕೊಡಬೇಕೆಂಬ ಮಾತೂ ಇದೆ. ಆದರೆ, ಈ ... ಜವಾಬ್ದಾರಿಗಳ ಜೊತೆಜೊತೆಗೇ ಮುಂದಿ... ಹಕ್ಕೊತ್ತಾಯಗಳ ಪಟ್ಟಿಯೂ ಬೆಳೆಯಬೇಕೆಂಬ ... ಇಟ್ಟುಕೊಳ್ಳುವುದು ತಪ್ಪೇ? ಪಿಯುಸಿಯಲ್ಲಿ ... ಬೋಧಿಸುವ ಉಪನ್ಯಾಸಕರುಗಳು ಕಾಲೇಜು ಪಾಠ... ನಿರ್ಲಕ್ಷಿಸಿ ಮನೆಪಾಠದ ಹಿಂದೆ ಬಿದ್ದಿರುವುದು 'ಟ್ಯೂ... ಮಾಫಿಯಾ' ಎಂಬ ಹೆಸರಿನಲ್ಲಿ ಚಲಾವಣೆಗೆ ಬ... ಸರ್ಕಾರೀ ವೈದ್ಯರುಗಳು ಖಾಸಗಿ ಪ್ರಾಕ್ಟೀಸ್ ಮಾ... ರೀತಿಯ ವಿದ್ಯಮಾನವಿದು. ಒಂದು ಸಮುದಾಯ... ಪಿಯು ಉಪನ್ಯಾಸಕ ವೃಂದ ಎದುರಿಸಬೇಕಾದ ಪ್ರಶ್ನೆ...

ಇಷ್ಟೆಲ್ಲಾ ಹೇಳಿದ ನಂತರವೂ ಹೇಳಬೇಕಾದ ... ಮಾತಿದೆ. ಪಿಯುಸಿ ಉಪನ್ಯಾಸಕರುಗಳು ತಮ್ಮ ... ಕಾಲೇಜು ಸಹೋದ್ಯೋಗಿಗಳಿಗಿಂತ ಒಂದು ತೂಕ ... ಶ್ರಮ ಹಾಕಿ ದುಡಿಯುತ್ತಾರೆ. ಅದರಲ್ಲೂ ಗ್ರಾ... ಭಾಗದ ಕಾಲೇಜುಗಳಲ್ಲಿ, ವಿದ್ಯಾರ್ಥಿಗಳ ಜೊತೆ ... ನಿಕಟ ಸಂಬಂಧ, ಸಂಪರ್ಕ ಇಟ್ಟುಕೊಂಡು ಕೆಲಸ ಮಾ... ಅದೆಷ್ಟೋ ಶಿಕ್ಷಕರಿದ್ದಾರೆ. ಅವರ ತಕ್ಷಣದ ಹಕ್ಕೊತ್ತಾಯ... ನ್ಯಾಯಯುತವಾಗಿವೆ. ಅವರನ್ನು ಬೆಂಬಲಿಸಬೇಕು. ... ಜೊತೆಗೇ ಪ್ರಶ್ನೆಗಳನ್ನೂ ಕೇಳಬೇಕು.

ಪ್ರೀತಿಗೆ ಜಾತಿ, ಧರ್ಮ ಅಡ್ಡಿಯಲ್ಲ




• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಅಶಿತಾ ಮತ್ತು ಶಕೀಲ್ ಮದುವೆ ಚೆಡ್ಡಿಗಳನ್ನು ಇನ್ನಿಲ್ಲದಂತೆ ಉರಿಸಿದೆ. ಮದುವೆಯ ಮುನ್ನ ಮಂಡ್ಯದಲ್ಲಿರುವ ಅಶಿತಾಳ ಮನೆ ಮುಂದೆ ಹತ್ತಕ್ಕೂ ಕಮ್ಮಿ ಜನ ಗಂಟಲು ಹರಿದುಹೋಗುವಂತೆ ಚೀರಾಡಿದ್ದರೆ ಈಗಲೂ ಸಾಮಾಜಿಕ ಜಾಲತಾಣಗಳಲ್ಲಿ ಅದೆಲ್ಲೆಲ್ಲೋ ಕೂತಿರುವ ನೂರಾರು ಹಿಂದೂ ಧರ್ಮ ರಕ್ಷಕರು ಆಕೆಯ ವಿರುದ್ಧ ಮತ್ತು ಆಕೆಯ ಪರ ನಿಂತ ಎಲ್ಲರ ವಿರುದ್ಧ ಕೆಂಡಕಾರುತ್ತಿದ್ದಾರೆ.

ಅಶಿತಾ ಯಾಕೆ ಇಸ್ಲಾಮ್ ಧರ್ಮಕ್ಕೆ ಮತಾಂತರಗೊಳ್ಳ ಬೇಕಿತ್ತು? ಯಾಕೆ ಆಕೆ ತನ್ನ ಹೆಸರನ್ನು ಬದಲಾಯಿಸಿದಳು? ಆಕೆ ಮತಾಂತರಗೊಳ್ಳುವ ಬದಲು ಶಕೀಲನೇ ಯಾಕೆ ಹಿಂದೂ ಧರ್ಮಕ್ಕೆ ಮತಾಂತರ ಗೊಳ್ಳಲಿಲ್ಲ? ಈ ತರಹದ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಇಂತಹವರ ಪ್ರಶ್ನೆಗಳನ್ನಾದರೂ ಓದಬಹುದು. ಆದರೆ ಕಟ್ಟರ್ ಚೆಡ್ಡಿಗಳು ಅದೆಷ್ಟು ಅಶ್ಲೀಲವಾಗಿ ಪ್ರತಿಕ್ರಿಯಿಸಿದ್ದಾರೆಂದರೆ ಅದನ್ನು ಇಲ್ಲಿ ಮತ್ತೆ ಹೇಳಲು ಸಾಧ್ಯವೇ ಇಲ್ಲ.

ಹೌದು, ನನ್ನ ಪ್ರಕಾರ ಆಕೆ ಮತಾಂತರಗೊಳ್ಳಬೇಕಿರಲಿಲ್ಲ. ಆಕೆ ಹಿಂದೂ ಆಗಿಯೂ ಆತ ಮುಸಲ್ಮಾನನಾಗಿಯೂ ತಮ್ಮ ದಾಂಪತ್ಯಜೀವನಕ್ಕೆ ಕಾಲಿಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಆದರೆ ಅದು ನನ್ನ ಅಭಿಪ್ರಾಯ ಮತ್ತು ಆಶಯ. ಅದನ್ನು ಪಾಲಿಸಲು ಅಶಿತಾ ನನ್ನ ಮಗಳೂ ಅಲ್ಲ, ಸಂಬಂಧಿಯೂ ಅಲ್ಲ, ಪರಿಚಿತಳೂ ಅಲ್ಲ. ಆಕೆಯನ್ನು "ನೀನು ಯಾಕೆ ಮತಾಂತರಗೊಂಡೆ?" ಎಂದು ನಾನು ಪ್ರಶ್ನಿಸಲಿಲ್ಲ. ಆದರೆ ಅದಕ್ಕೆ ಕಾರಣ ಆಕೆ ಮಾಧ್ಯಮಗಳ ಮುಂದೆ "ನಾನು ಸಂಪ್ರದಾಯದಂತೆ ಮದುವೆಯಾದ ನಂತರ ಹೇಗೆ ನನ್ನ ಗಂಡನ ಹೆಸರನ್ನು, ಆತನ ಮನೆಯ ಆಚಾರವಿಚಾರಗಳನ್ನು ನನ್ನದಾಗಿಸಿಕೊಳ್ಳುತ್ತೇನೋ ಹಾಗೆ ಆತನ ಧರ್ಮವನ್ನೂ ಸ್ವೀಕರಿಸುತ್ತೇನೆ" ಎಂದು ಹೇಳಿದ್ದೇ ಆಕೆ ಮತಾಂತರ ಗೊಂಡಿದ್ದಕ್ಕೆ ಕಾರಣವೂ ಇರಬಹುದು. ಜೊತೆಗೆ ಇನ್ನೂ ಎರಡು ಕಾರಣಗಳು ಇದ್ದಿರಲಿಕ್ಕೂ ಸಾಕು. ಮೊದಲನೆ ಕಾರಣ ಆಕೆ ಮತ್ತು ಶಕೀಲ್ ರಿಜಿಸ್ಟರ್ ಮದುವೆ ಮಾಡಿ ಕೊಳ್ಳಲು ಇಚ್ಛಿಸಿದ್ದರೆ ಅದಕ್ಕೆ ಒಂದು ತಿಂಗಳ ಕಾಲ ಕಾಯಬೇಕಿತ್ತು. ಹಾಗೆ ಮಾಡಿದ್ದರೆ ಆ ಅವಧಿಯಲ್ಲಿ



ಚೆಡ್ಡಿಗಳಿಗೆ ತಮ್ಮ ಕುತಂತ್ರವನ್ನು ಹೆಚ್ಚು ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಂತಾಗುತ್ತಿತ್ತು.

ಕಾನೂನು ಪ್ರಕಾರ ಮದುವೆ ಆಗಲು ನಿರ್ಧರಿಸಿದ್ದರೆ ಇನ್ನೊಂದು ಜೋಡಿಗೆ ಆದ ದುರ್ಗತಿಯೇ ಅಶಿತಾ ಮತ್ತು ಶಕೀಲ್‌ಗೂ ಆಗಬಹುದಿತ್ತು. ಯಾಕೆಂದರೆ ಕೆಲವು ದಿನಗಳ ಹಿಂದೆ ಮಂಡ್ಯದ ಹತ್ತಿರ ಇರುವ ಮದ್ದೂರಿನಲ್ಲಿ ಓರ್ವ ಒಕ್ಕಲಿಗ ಯುವತಿ ಮತ್ತು ಓರ್ವ ಮುಸಲ್ಮಾನ ಯುವಕ ರಿಜಿಸ್ಟರ್ ಮದುವೆಯಾಗಲು ನಿರ್ಧರಿಸಿ ತಮ್ಮ ಅರ್ಜಿಯನ್ನು ಸಲ್ಲಿಸಿದ್ದರು. ಆದರೆ ಅವರಿಬ್ಬರಿಗೆ ಅಶಿತಾ ಮತ್ತು ಶಕೀಲನಿಗೆ ಇದ್ದಂತಹ ಹೆತ್ತವರ ಬೆಂಬಲವಿರಲಿಲ್ಲ. ಜತೆಗೆ ಅವರು ಅಶಿತಾ ಮತ್ತು ಶಕೀಲನಂತೆ ಉಳ್ಳವರೂ ಅಲ್ಲ. ಬದಲಾಗಿ ಸಣ್ಣ ಪುಟ್ಟ ಕೆಲಸ ಮಾಡುತ್ತಾ ಹೊಟ್ಟೆ ತುಂಬಿಸಿಕೊಳ್ಳು ವವರು. ನಿಯಮದ ಪ್ರಕಾರ ಅವರಿಬ್ಬರು ಮದುವೆ ಆಗಲಿರುವ ಮಾಹಿತಿಯನ್ನು ಇಲಾಖೆಯ ನೋಟಿಸ್ ಬೋರ್ಡ್ ಮೇಲೆ ಹಾಕಲಾಗಿತ್ತು. ಅದು ಅದ್ಯಾವ ಪುಣ್ಯಾತ್ಮನ ಕಣ್ಣಿಗೆ ಬಿತ್ತೋ, ಆತ ಆ ನೋಟಿಸ್‌ನಲ್ಲಿದ್ದ ಆ ಒಕ್ಕಲಿಗ ಯುವತಿಯ ಅಡ್ರೆಸ್ ಪಡೆದು ತನ್ನ ಚೆಡ್ಡಿ ಪಟಾಲಂನೊಂದಿಗೆ ಆಕೆಯ ಮನೆಗೆ ಮುತ್ತಿಗೆ ಹಾಕಿದ.


ಅತ್ತ ಆರ್ಥಿಕ ಶಕ್ತಿಯೂ ಇಲ್ಲದೆ, ಇತ್ತ ಅಪ್ಪ-ಅಮ್ಮನ ಬೆಂಬಲವೂ ಇಲ್ಲದೆ, ಇನ್ನೊಂದು ಕಡೆಯಿಂದ ಈ ಕೋಮು ವಾದಿಗಳ ಬೆದರಿಕೆ ಎದುರಿಸಬೇಕಾದ ಅನಿವಾರ್ಯತೆ... ಇದೆಲ್ಲದರ ನಡುವೆ ಜರ್ಜರಿತರಾದ ಅವರಿಬ್ಬರೂ ಪರಸ್ಪರ ಮದುವೆ ಆಗುವ ನಿರ್ಧಾರವನ್ನೇ ಕೈಬಿಟ್ಟರು.


ಎರಡನೆಯದಾಗಿ, ಅಶಿತಾ ಮತಾಂತರಗೊಳ್ಳದಿದ್ದರೆ ಇನ್ನೊಂದು ಸಮಸ್ಯೆಯೂ ಎದುರಾಗುತ್ತಿತ್ತು. ಮುಸ್ಲಿಮ್ ಸಮುದಾಯದಲ್ಲಿ ಮದುವೆ ಎಂಬುದು ಗಂಡು ಮತ್ತು ಹೆಣ್ಣಿನ ನಡುವಿನ ಕಾಂಟ್ರಾಕ್ಟ್. ಅದನ್ನು ದೃಢೀಕರಿಸುವುದು ಮಸೀದಿಯ ಮೌಲ್ವಿ. ವಧು ಮತ್ತು ವರ ಇಬ್ಬರೂ ಮುಸಲ್ಮಾನರಾಗಿದ್ದರೆ ಮಾತ್ರ ಅವರ ಮದುವೆಯನ್ನು ಮೌಲ್ವಿ ಅಧಿಕೃತಗೊಳಿಸಲು ಸಾಧ್ಯ. ಈ ತೊಂದರೆಯನ್ನು ನಿವಾರಿಸಿಕೊಳ್ಳಲೆಂದೇ ಅಶಿತಾ ಮತಾಂತರಗೊಂಡಿರಲೂಬಹುದು.

ಅಶಿತಾಳಿಗೆ ಈಗ 28ರ ಹರೆಯ. ಓದಿರುವವಳು. ಆಕೆಗೆ ಯಾರನ್ನು ಮದುವೆಯಾಗಬೇಕೆಂದು ನಿರ್ಧರಿಸುವ ಸ್ವಾತಂತ್ರ್ಯ ಇರುವಂತೆ ಮತಾಂತರಗೊಳ್ಳಬೇಕೋ, ಬೇಡವೋ ಎಂದು ನಿರ್ಧರಿಸುವ ಸ್ವಾತಂತ್ರ್ಯವೂ ಆಕೆಗೆ ಇದ್ದೇ ಇದೆ. "ನೀನು ಬೇರೆ ಧರ್ಮದವನನ್ನು ಮದುವೆ ಆಗಕೂಡದು" ಎಂದು ಆದೇಶಿಸುವ ಹಕ್ಕು ಹೇಗೆ ಯಾರಿಗೂ ಇಲ್ಲವೋ ಹಾಗೆಯೇ "ಯಾಕೆ ಮತಾಂತರಗೊಂಡೆ?" ಎಂದು ಪ್ರಶ್ನಿಸುವ ಹಕ್ಕು ಕೂಡ ಯಾರಿಗೂ ಇಲ್ಲ.

ಇನ್ನು ಶಕೀಲನೇ ಯಾಕೆ ಹಿಂದೂ ಧರ್ಮಕ್ಕೆ ಮತಾಂತರ ಗೊಳ್ಳಲಿಲ್ಲ ಎಂಬ ಪ್ರಶ್ನೆ. ಚೆಡ್ಡಿಗಳು ಇತ್ತೀಚೆಗೆ ಶುರು ಹಚ್ಚಿಕೊಂಡಿರುವ 'ಘರ್ ವಾಪಸಿ' ಎಂಬ ವಂಚನಾ ತಂತ್ರದ ಹೊರತಾಗಿ ಹಿಂದೂ ಧರ್ಮಕ್ಕೆ ಮತಾಂತರಗೊಳ್ಳುವ ಯಾವ ಪರಿಪಾಠವೂ ಇಲ್ಲ. ಲಿಂಗಾಯತರು ಲಿಂಗ ದೀಕ್ಷೆ ಕೊಟ್ಟು ಮತಾಂತರ ಮಾಡಿಸುತ್ತಾರಾದರೂ, ಲಿಂಗಾಯತರು (ಸಂಶೋಧಕ ಕಲಬುರ್ಗಿ ಅವರು ಹೇಳುತ್ತಿದ್ದಂತೆ) ಹಿಂದೂಗಳಲ್ಲವಾದ್ದರಿಂದ ಶಕೀಲನಿಗೆ ಹಿಂದೂ ಆಗಿ ಮತಾಂತರಗೊಳ್ಳುವ ಅವಕಾಶಗಳೇ ಇಲ್ಲ. ಯಾಕೆಂದರೆ ನಮ್ಮ ಅತಿ ಶ್ರೇಷ್ಠ ಹಿಂದೂ ಗುರುಗಳಾದ ಪೇಜಾವರ ಶ್ರೀಗಳು ಶಕೀಲನಿಗೆ ಮಾಧ್ವ ಬ್ರಾಹ್ಮಣನಾಗುವ ಅವಕಾಶವನ್ನೇನೂ ನೀಡುವುದಿಲ್ಲ. ಹಾಗೆಯೇ ಒಕ್ಕಲಿಗರ ಮಹಾನ್ ಗುರು ಶ್ರೀ ನಿರ್ಮಲಾನಂದನಾಥ ಸ್ವಾಮಿಗಳೂ ಆತನಿಗೆ ನಾಥ ಪರಂಪರೆಯ ದೀಕ್ಷೆ ಕೊಟ್ಟು ಒಕ್ಕಲಿಗನಾಗಿ ಸ್ವೀಕರಿಸುವ ಸಾಧ್ಯತೆಗಳೂ ಇಲ್ಲ. ಈ ಎಲ್ಲ ಕಾರಣಗಳಿಗೆ ಅಶಿತಾ ವಿಧಿ ಇಲ್ಲದೆ ಇಸ್ಲಾಮ್ ಧರ್ಮಕ್ಕೆ ಮತಾಂತರ ಆಗಲು ನಿರ್ಧರಿಸಿರಬಹುದು.

ಅಂದಹಾಗೆ ಇವತ್ತು ನಮ್ಮ ಮಿತ್ರ ಮೈಸೂರು ಮೋಹನ್ ಹಲವು ಫೋಟೋಗಳನ್ನು ಕಳುಹಿಸಿದರು. ಅದರಲ್ಲಿ ಅಶಿತಾಳಿಗೆ ಆಕೆಯ ತಂದೆ, ತಾಯಿ, ಸಹೋದರ ಮತ್ತು ಸಂಬಂಧಿಕರು ವಧು ಓರ್ವಳಿಗೆ ಮಾಡುವ ಹಿಂದೂ ಸಂಪ್ರದಾಯದ ಗೌರಿ ಪೂಜೆ ಇತ್ಯಾದಿಗಳನ್ನು ಮಾಡುತ್ತಿರುವ ದೃಶ್ಯಗಳಿವೆ. ಆ ಫೋಟೋಗಳನ್ನು ನೋಡಿದಾಗ ನನಗನ್ನಿಸಿದ್ದೇನೆಂದರೆ ಜಾತಿ ಅಥವಾ ಧರ್ಮದಲ್ಲಿ ಅಷ್ಟೇನು ನಂಬಿಕೆ ಇಲ್ಲದ ಅಶಿತಾಳ ತಂದೆ ಡಾ.





ನರೇಂದ್ರ ಬಾಬು ಮತ್ತು ತಾಯಿ ಉಮಾದೇವಿ ಅವರು ಇತ್ತ ಸ್ವಲ್ಪಮಟ್ಟಿಗೆ ಹಿಂದೂ ಸಂಪ್ರದಾಯಗಳನ್ನು ಪಾಲಿಸಿ, ಅತ್ತ ಮಗಳನ್ನು ಇಸ್ಲಾಮ್ ಧರ್ಮದ ಪ್ರಕಾರ ಮದುವೆ ಮಾಡಿಕೊಡುವ ಮೂಲಕ ಎರಡೂ ಸಮುದಾಯಗಳನ್ನು ಬೆಸೆದಿದ್ದಾರೆ. ಅದು ಸಂತೋಷದ ವಿಷಯ.

ಅದೇನೇ ಇರಲಿ, ಕಳೆದ ಭಾನುವಾರ ಮೈಸೂರಿನಲ್ಲಿ ಜರುಗಿದ ಅಶಿತಾ ಮತ್ತು ಶಕೀಲನ ಮದುವೆ ತುಂಬಾ ಚೆನ್ನಾಗಿತ್ತು. ಕೆ.ಎಸ್.ವಿಮಲಾ, ಕೆ. ನೀಲಾ ಮತ್ತು ನಾನು ಆ ಮದುವೆಗೆ ಹೋಗಿದ್ದೆವು. ಒಂದು ದೊಡ್ಡ ಹಾಲ್‌ನಲ್ಲಿ ತನ್ನ ಹೆಸರನ್ನು ಈಗ ಶಯಿಸ್ತಾ ಎಂದು ಬದಲಾಯಿಸಿಕೊಂಡ ಅಶಿತಾಳನ್ನು ಕೂರಿಸಲಾಗಿತ್ತು. ಅಲ್ಲಿ ನೆರೆದಿದ್ದ ಮಹಿಳೆಯರಲ್ಲಿ ಅರ್ಧದಷ್ಟು ಜನ ಹಿಂದೂ ಮಹಿಳೆಯರು ಎಂದು ಅವರ ಹಣೆಯ ಮೇಲಿದ್ದ ಕುಂಕುಮದಿಂದ ಹೇಳಬಹುದಿತ್ತು. ಹಾಗೆಯೇ ಅಲ್ಲಿದ್ದ ಇನ್ನರ್ಧ ಮುಸ್ಲಿಮ್ ಮಹಿಳೆಯರಲ್ಲಿ ಒಂದಷ್ಟು ಜನ ಮಾತ್ರ ಬುರ್ಖಾ ತೊಟ್ಟಿದ್ದರು. ಅಶಿತಾಳ ತಾಯಿ

⇨11

ಉದ್ಯೋಗ ಎಲ್ಲಿ ಹೇಗೆ

ಮಿತ್ರರೆ,

ನಿಮ್ಮೆಲ್ಲರಿಗೆ ಗೊತ್ತಿರುವಂತೆ ನಮ್ಮ ಸಂಸ್ಥೆಯ ವತಿಯಿಂದ 'ಜಾಬ್ ನ್ಯೂಸ್' ಎಂಬ ಪಾಕ್ಷಿಕ ಹೊರಬರುತ್ತಿತ್ತು. ಇನ್ನು ಮುಂದೆ ನಾವು ಅದನ್ನು ಪ್ರಕಟಿಸುವುದಿಲ್ಲ.


ಅದರ ಬದಲಾಗಿ 'ಉದ್ಯೋಗ ಎಲ್ಲಿ ಹೇಗೆ' ಎಂಬ ಪಾಕ್ಷಿಕವನ್ನು ಬರುವ ಮೇ 5 ರಿಂದ ನಮ್ಮ ಲಂಕೇಶ್ ಬಳಗ ಆರಂಭಿಸುತ್ತಿದೆ. ಸಕಾಲಿಕ ಉದ್ಯೋಗ ಮಾಹಿತಿ, ಮಾರ್ಗದರ್ಶನ, ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ವಿವರಗಳು ಎಲ್ಲವೂ 'ಉದ್ಯೋಗ ಎಲ್ಲಿ ಹೇಗೆ' ಪಾಕ್ಷಿಕದಲ್ಲಿ ಇರುತ್ತವೆ. ಇನ್ನುಳಿದಂತೆ ಎಲ್ಲ ಅಂಕಣಗಳನ್ನು ನಮ್ಮ ಸಿಬ್ಬಂದಿ ಮುಂದುವರಿಸಲಿದ್ದಾರೆ. ಗಿರೀಶ್ ತಾಳಿಕಟ್ಟೆ ನಮ್ಮ ಹೊಸ ಪಾಕ್ಷಿಕದ ಸಂಪಾದಕರಾಗಿ ಕಾರ್ಯ ನಿರ್ವಹಿಸಲಿದ್ದಾರೆ.


ಏಜೆಂಟರು ಮತ್ತು ಓದುಗರು ಸಹಕರಿಸಬೇಕೆಂದು ನಮ್ರವಾಗಿ ವಿನಂತಿಸಿಕೊಳ್ಳುತ್ತೇನೆ.


- ಗೌರಿ ಲಂಕೇಶ್


ಉತ್ತರ ಕನ್ನಡ


ಡಾನ್ ದೇಶಪಾಂಡೆಗೆ ದಾಡಿ ಹೆಬ್ಬಾರ್ ಹೊಡೆತ!!



ದೇಶಪಾಂಡೆ


ಶಿವರಾಂ ಹೆಬ್ಬಾ


ಭೀಮಣ್ಣ ನಾಯ್ಕ್


ಸತೀಶ್ ಸೈಲ್


ಶಾರದ ಶೆಟ್ಟಿ


ಘೋಟನೇಕರ್

ಉತ್ತರ ಕನ್ನಡದ ರಾಜಕಾರಣ ಸಾವಕಾಶ ಹೆಜ್ಜೆ ಬದಲಿಸುತ್ತಿದೆ. ಗೆಜ್ಜೆ ಕಟ್ಟಿ ಕೊಂಡವರೆಲ್ಲ ತಂತಮ್ಮ ತುಂಡುಗುಪ್ಪಳದ ಸದ್ದಿಗೇ ಬೆಚ್ಚಿಬೀಳುತ್ತಿದ್ದಾರೆ. ಮೂರೂ ಪಕ್ಷದ ಪುಢಾರಿಗಳು ಒಂಥರಾ ಅಕಾಲಿಕ ಚುನಾವಣಾ ಮೂಡಿಗೆ ಬಿದ್ದಂತೆ ಒದ್ದಾಡುತ್ತಿದ್ದಾರೆ. ಆಡಳಿತಾರೂಢ ಕಾಂಗ್ರೆಸ್‌ನ ಶಾಸಕರ ಸಿಂಡಿಕೇಟ್ ದೊರೆ ದೇಶಪಾಂಡೆಗೆ ಕತ್ತಿ ಹಿರಿದು ತೋರಿಸುತ್ತಿದ್ದರೆ, ಅತ್ತ ರಾಜ್ಯ ಬಿಜೆಪಿಗೆ ಬ್ರಷ್ಟಾಗ್ರೇಸ ಯಡ್ಡಿ ಯಜಮಾನನಾಗುತ್ತಿದ್ದಂತೆಯೇ ಇತ್ತ ಶಾಸಕ ಕಾಗೇರಿ ಮಾಣಿ ಮತ್ತು ಅನಂತ್ಮಾಣಿಗಳ ಕಾಲೆಳೆವ ಕಸರತ್ತಿಗೆ ಹೊಸ ಖದರು ಬಂದುಬಿಟ್ಟಿದೆ. ಈ ರೌದ್ರ-ಭೀಕರ ಪ್ರಹಸನದಲ್ಲಿ ತಿಳಿಹಾಸ್ಯದಂತೆ ಸೋಗಲಾಡಿ ಸಂತ ರಾಘು ಅಳಿದುಳಿದ ಜೆಡಿಎಸ್‌ನ ಒಳಜಗಳ ಸುಧಾರಿಸಲು ಹೆಣಗುತ್ತಿದ್ದಾನೆ.

ಕಳೆದ ಮೂರು ದಶಕದಿಂದ ನತದೃಷ್ಟ ಉತ್ತರ ಕನ್ನಡದ ಪಾಲಿಗೆ ಧಡಪ್‌ಶಾಹಿ ದೇಶಪಾಂಡೆಯೇ ಅನಭಿಷಕ್ತ ಸಾಮ್ರಾಟ! ಯಾವ ಪಾರ್ಟಿಯಲ್ಲೇ ಇರಲಿ ಆತನ ಅಟ್ಟಹಾಸದ್ದೇ ಅಬ್ಬರ. ರಾಣೆ, ಜೈವಂತ್, ಶಿವಾನಂದ ನಾಯ್ಕ, ಕಾಗೇರಿಗಳು ಮಂತ್ರಿ ಮಾಂಡಲೀಕರಾಗಿದ್ದಾಗಲೂ ದೇಶಪಾಂಡೆಯ ಆ್ಯಂಟಿ ಹೀರೋಯಿಸಮ್ ಮುಂದೆ ಸಪ್ಪೆ-ಸಪ್ಪೆಯಾಗಿದ್ದರು. ಅಷ್ಟು ಸರ್ವಶಕ್ತನಂತೆ ಕಂಗೆಡಿಸುತ್ತಿದ್ದ ದೇಶಪಾಂಡೆ ಈಗೀಗ ಏಕೋ ಡಲ್ ಹೊಡೆಯುತ್ತಿದ್ದಾರೆ. ಉತ್ತರ ಕನ್ನಡದ ರಾಜಕಾರಣದ ಪಡಸಾಲೆಯಲ್ಲಿ ಬಚ್ಚಾಗಳಂತೆ ಕೈಕಟ್ಟಿಕೊಂಡು ನಿಲ್ಲುತ್ತಿದ್ದ ಯಲ್ಲಾಪುರದ ಶಾಸಕ ಶಿವರಾಮ ಹೆಬ್ಬಾರ್, ಕಾರವಾರದ ಸತೀಶ್ ಸೈಲ್, ಕುಮಟೆಯ ಶಾರದಾ ಶೆಟ್ಟಿ ಮತ್ತು ದೇಶಪಾಂಡೆ ದಯೆಯಿಂದಲೇ ಎಮ್ಮೆಲ್ಸಿಯಾಗಿರುವ ಶ್ರೀಕಾಂತ ಘೋಟನೇಕರ್ ಇವತ್ತು ದೇಶಪಾಂಡೆಗೇ ಆವಾಜು-ಸವಾಲು ಹಾಕುತ್ತಿದ್ದಾರೆ. "ದೇಶಪಾಂಡೇನ ಮಂತ್ರಿಗಿರಿಯಿಂದ ತೆಗೀರಿ...." ಎಂದು ಸಿಎಂ ಸಿದ್ದು ಎದುರು ವಾದ ಮಂಡಿಸುವಷ್ಟು "ಸಾಹಸಿ"ಗಳಾಗಿದ್ದಾರೆ!

ಕಳೆದ ಲೋಕಸಭಾ ಚುನಾವಣೆಯಲ್ಲಿ ದೇಶಪಾಂಡೆಯ ಕುಲಕಂಠೀರವ ಪ್ರಶಾಂತ ದೇಶಪಾಂಡೆ ಹೀನಾಯವಾಗಿ ನೆಲಕಚ್ಚಿದ್ದನಲ್ಲ, ಆಗಲೇ ಡಾನ್ ದೇಶಪಾಂಡೆಯ ದುರಹಂಕಾರದ ಯುಗದ ಅಂತ್ಯದ ಆರಂಭದ ಸಂಕೇತಗಳು ಬಿತ್ತರಿಸಿದ್ದವು. ಆದರೂ ದೇಶಪಾಂಡೆ ಎಚ್ಚೆತ್ತುಕೊಳ್ಳಲಿಲ್ಲ. ಜಿಲ್ಲೆಯ ಜನರ ನಾಡಿ ಮಿಡಿತ ಅರ್ಥಮಾಡಿಕೊಳ್ಳುವ ವ್ಯವಧಾನ ಬೆಳೆಸಿಕೊಳ್ಳಲಿಲ್ಲ; ಬಹುಸಂಖ್ಯಾತ ಹೈಗರು, ದೀವರು, ಸಾಬರು, ಹಾಲಕ್ಕಿಗಳನ್ನೆಲ್ಲ ಒಡೆದು ಆಳುತ್ತಲೇ ಸಾಗಿದ ದೋಷಪಾಂಡೆ ಸ್ವ-ಜಾತಿ ಕೊಂಕಣಿಗರಲ್ಲಿನ ಠಕ್ಕರನ್ನು ಬಿಟ್ಟು ಬೇರ್‍ಯಾವ ಜನಾಂಗವನ್ನು ಕಾಳಜಿಯಿಂದ ಕಾಣಲೇ ಇಲ್ಲ. ಜೊತೆಗೆ ಸ್ವ-ಪಕ್ಷದ ಶಾಸಕರನ್ನೇ ಮುರಿದುಮುಕ್ಕುವ ರಾಕ್ಷಸ ರಾಜಕಾರಣ ತುಂಬ ನವಿರಾಗಿ- ವ್ಯವಸ್ಥಿತವಾಗಿ ಶುರುವಿಟ್ಟುಕೊಂಡುಬಿಟ್ಟರು!

ದೇಶಪಾಂಡೆಯ ಈ ಮೂರು ದಶಕದ ದಾದಾಗಿರಿ ರಾಜಕಾರಣಕ್ಕೆ ಈ ಬಾರಿ ಪ್ರಬಲ ಪ್ರತಿರೋಧ ಎದುರಾಗಿದೆ. ದಿಲ್ಲಿ ದೊರೆಸಾನಿಯ ಅಂತಃಪುರದ ಪರಿಚಾರಿಕೆಯಾಗಿದ್ದ ಮ್ಯಾಗಿಯಂಥ ಮ್ಯಾಗಿಯನ್ನೇ ಮಣಿಸಿದ್ದ ದೇಶಪಾಂಡೆಗೆ ಈಗ ಯಲ್ಲಾಪುರದ ಶಾಸಕ ಶಿವರಾಜ ಹೆಬ್ಬಾರ್, ಕುಮಟಾದ ಶಾರದಾ ಶೆಟ್ಟಿ, ಕಾರವಾರದ ಸತೀಶ್ ಸೈಲ್‌ನಂಥ ಸಬ್ ಜೂನಿಯರ್‌ಗಳನ್ನೇ ನಿಭಾಯಿಸಲು ಆಗುತ್ತಿಲ್ಲ. ದೇಶಪಾಂಡೆಯ ಸೊಕ್ಕು ಮುರಿಯಲೆಂದೇ ಈ ಮೂವರು ಶಾಸಕರು ಪಾರ್ಲಿಮೆಂಟ್ ಚುನಾವಣೆಯಲ್ಲಿ ಆತನ ಮಗನ ಸೋಲಿಸಲು ಸಾಧ್ಯವಿರುವುದೆಲ್ಲ ಮಾಡಿದ್ದರು. ಮಗ ದೊಡ್ಡ ಅಂತರದಲ್ಲೇ ಸೋತರೂ ಪಾಠ ಕಲಿಯದ ದೇಶಪಾಂಡೆ ಸ್ವಪಕ್ಷದ ಶಾಸಕರ ಸೊಂಟ ಮುರಿಯಲು ಸ್ಕೆಚ್ ಹಾಕಿದರು. ಜಿಲ್ಲಾಧಿಕಾರಿ, ಜಿಲ್ಲಾ ಎಸ್‌ಪಿ, ಜಿಪಂ ಮುಖ್ಯ ಕಾರ್ಯದರ್ಶಿಯಿಂದ ಹಿಡಿದು ತಹಸೀಲ್ದಾರ್, ಪಿಎಸ್‌ಐವರೆಗಿನ ಅಧಿಕಾರಿಗಳನ್ನು ಮಂತ್ರಿಗಿರಿ ಬಲದಿಂದ ಒಟ್ಟುಗೂಡಿಸಿಕೊಂಡು ವಿರೋಧಿ ಶಾಸಕರ ಮೇಲೆ ಛೂಬಿಡತೊಡಗಿದರು. ಸ್ವಕ್ಷೇತ್ರದಲ್ಲಿ ದೇಶಪಾಂಡೆಯ ಚಿತಾವಣೆಯಿಂದ ಮುಖಭಂಗಿತರಾಗತೊಡಗಿದ ಶಾಸಕರು ಅನಿವಾರ್ಯವಾಗಿ "ದೈತ್ಯ" ಸಂಹಾರಕ್ಕೆ ಶಸ್ತ್ರಸನ್ನದ್ಧರಾಗಬೇಕಾಯ್ತು.

ಈ ದಮನಿತ ಶಾಸಕರ ತಂಡದ ಮುಖಂಡತ್ವ ವಹಿಸಿಕೊಂಡಾತ ಯಲ್ಲಾಪುರದ ಗಾಡಿ ಹೆಬ್ಬಾರ್ ಯಾನೆ ದಾಡಿ ಹೆಬ್ಬಾರ್ ಉರುಫ್ ಆದಿರು ಕಳ್ಳ ಶಿವರಾಮ ಹೆಬ್ಬಾರ್! ಈ ಚಾಲಾಕಿ ವಿಪ್ರೋತ್ತಮ ಅದೇನು ಮೋಡಿ ಮಾಡಿದ್ದಾನೋ ಏನೋ? ಸಾಕ್ಷಾತ್ ಸಿಎಂ ಸಿದ್ದುವನ್ನೇ ಒಲಿಸಿಕೊಂಡು ಸಮಯ ಸಿಕ್ಕಾಗೆಲ್ಲ ದೇಶಪಾಂಡೆಗೆ ಟಾಂಗ್ ಕೊಡತೊಡಗಿದ. ಮಜಾ ಎಂದರೆ, ದೇಶಪಾಂಡೆ[...] ಕೃಪಾಶ್ರಯದಲ್ಲೇ ಬೆಳೆದು ಎಮ್ಮೆಲ್ಸಿಯೂ ಆಗ[...] ಹಳಿಯಾಳದ ಘೋಟನೇಕರ್‌ನೂ ಗುರುವಿಗೆ ತಿರುಗಿಬಿ[...] ಶಿವರಾಮ ಹೆಬ್ಬಾರನ ಗ್ಯಾಂಗ್ ಸೇರಿಕೊಂಡುಬಿ[...] ದೇಶಪಾಂಡೆಯನ್ನು ಮಣಿಸಲು ಸಮಯ ಸಾಧಿಸುತ್ತಿ[...] ಹೆಬ್ಬಾರ್ ಬಣಕ್ಕೆ ಸಿಕ್ಕ ಮೊದಲ ಅವಕಾಶವೇ ಸಫಲವಾಯ[...] ಕೆಡಿಸಿಸಿ ಬ್ಯಾಂಕ್ ಅಧ್ಯಕ್ಷರಾಯ್ಕೆ ಹೊತ್ತಲ್ಲಿ ದೇಶಪಾಂ[...] ಅಭ್ಯರ್ಥಿ ವಿರುದ್ಧ ಎಮ್ಮೆಲ್ಸಿ ಘೋಟನೇಕರ್‌ನನ್ನು ಕಣಕ್ಕಿ[...] ಗೆಲ್ಲಿಸಿಕೊಂಡ ವಿರೋಧಿ ಪಡೆ ಅಷ್ಟಕ್ಕೆ ಸುಮ್ಮನಾಗಲಿ[...] ಅಪೆಕ್ಸ್ ಬ್ಯಾಂಕ್‌ಗೆ ಕೆಡಿಸಿಸಿಯಿಂದ ಹೆಬ್ಬಾರ್‌ನೇ ಪ್ರತಿನಿ[...]ಯಾಗಿ ಹೋದರು. ಅಲ್ಲೂ ದೇಶಪಾಂಡೆ ಶಿಷ್ಯನಿ[...] ಅವಮಾನಕರ ಸೋಲಾಯ್ತು.

ಆನಂತರ ದೇಶಪಾಂಡೆ ಮತ್ತು ಹೆಬ್ಬಾರ್ ಹಿಂದ[...] ಬೀದಿಕಾಳಗವೇ ಆರಂಭವಾಗಿಹೋಯ್ತು. ಹಸಿ-ಹ[...] ಹುಂಬನಂತಿರುವ ಜಿಲ್ಲಾಧಿಕಾರಿ ಅತುಲ್‌ಕುಮಾ[...] ಘೋಷ್‌ನನ್ನು ಅಸ್ತ್ರ ಮಾಡಿಕೊಂಡ ದೇಶಪಾಂಡೆ ಅಡಿಗಡಿ[...] ವಿರೋಧಿ ಶಾಸಕರಿಗೆ ಅಡ್ಡಗಾಲು ಹಾಕುತ್ತಾ ಬಂದರ[...] ಅಧಿಕಾರಿಗಳ ಮೂಲಕ ಕಿತಾಪತಿ ಮಾಡುವ ದೇಶಪಾಂಡೆ[...] ಕಿರುಕುಳ ಅದ್ಯಾವ ಪರಿ ಹೆಚ್ಚತೆಂದರೆ, ಅಧಿಕಾರಿಗ[...] ಆಡಿದ್ದೇ ಆಟ, ಹೇಳಿದ್ದೇ ಕಾನೂನು ಎಂಬಂತಾ[...] ಹೋಯಿತು. ಅಧಿಕಾರಿಗಳ ಹುಚ್ಚಾಟದ ಬಿಸಿಗೆ ದೇಶಪಾಂ[...]ಯ ಏಕೈಕ ಆಪ್ತ ಶಾಸಕನೆಂದು ಭಾವಿಸಲಾಗಿದ್ದ ಭಟ್ಕಳ[...] ಮಂಕಾಳು ವೈದ್ಯನೂ ಪತರುಗುಟ್ಟಿಹೋದ! ದೇಶಪಾಂ[...] ತನ್ನನ್ನು ಬೇಕಾದಾಗ ಬಳಸಿಕೊಂಡು ಬಿಸಾಕಿದ್ದಾ[...] ಹಾಗಾಗಿಯೇ ಅಧಿಕಾರಿಗಳು ತನ್ನ ಮಾತು ಕೇಳುತ್ತಿ[...] ಎಂಬ ದೃಢನಿರ್ಧಾರಕ್ಕೆ ಬಂದ ಮಂಕಾಳು ಒಂದು ಶು[...] ಗಳಿಗೆಯಲ್ಲಿ ಹೆಬ್ಬಾರ್ ಗ್ಯಾಂಗ್‌ನ ದೀ[...] ಪಡೆದುಕೊಂಡುಬಿಟ್ಟ!

ಜನಪ್ರತಿನಿಧಿಗಳೆಂದರೆ ಮೂಗು ಮುರಿಯು[...] ಗುಣಧರ್ಮ ಡಿಸಿ ಅತುಲ್ ಘೋಷ್ ಸಾಹೇಬರದ[...] ಇದಕ್ಕೆ ಸರಿಯಾಗಿ ಜಿಲ್ಲಾ ಮಂತ್ರಿ ದೇಶಪಾಂಡೆಯ ಕುಮ್ಮಕ್[...] ಸಿಕ್ಕಿಬಿಟ್ಟಿತು. ಜಿಲ್ಲಾಡಳಿತ ಮತ್ತು ಶಾಸಕರ ನಡುವಿ[...] ಕಿತ್ತಾಟ ಕ್ಲೈಮಾಕ್ಸ್ ತಲುಪಿಬಿಟ್ಟಿತು. ಡಿಸಿಯನ್ನು ವ[...] ಮಾಡುವಂತೆ ಬಂಡುಕೋರ ಎಮ್ಮೆಲ್ಲೆಗಳು ಸಿಎಂ ಎದುರ[...] ಹಠ ಹಿಡಿದು ಕೂತರು. ಹೆಬ್ಬಾರ್ ಹೇಳುವ ಯಾ[...] ಕೆಲಸವೂ ಡಿಸಿ ಸಾಹೇಬ ಮಾಡಲೇ ಇಲ್ಲ, ಕುಮಟೆಯ[...] ಶಾಸಕಿ ಶಾರದಾ ಶೆಟ್ಟಿಗೆ ಉಪವಿಭಾಗಾಧಿಕಾರಿಯ[...] ಶೋಭಾ ಸೆಡ್ಡೆ ಹೊಡೆದುನಿಂತರು. ಕಾರವಾರದಲ್ಲಿ ಶಾಸ[...] ಸೈಲ್‌ಗೆ ಡಿಸಿ ತೊಂದರೆಯಿಂದ ಜನರ ಕೆಲಸ ಮಾಡಲ[...]ಗುತ್ತಿಲ್ಲ ಎಂದು ಗೋಗರೆಯುವುದೇ ನಿತ್ಯ ಕರ್ಮದಂತಾ[...] ಹೋಯ್ತು. ಎಮ್ಮೆಲ್ಸಿ ಘೋಟನೇಕರ್, ಎಮ್ಮೆಲ್ಲೆ ಸೈ[...] ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾ[...] ರಾಮಪ್ರತಾಪ್ ಮನೋಹರ್ ತಮಗೆ ಕಿಮ್ಮತ್ತ[...] ಕೊಡುವುದಿಲ್ಲ.... ತಮ್ಮ ಫೋನೂ ಸ್ವೀಕರಿಸುವುದಿಲ್ಲ ಎಂದ[...] ದೇಶಪಾಂಡೆ ಕರೆದ ಮೀಟಿಂಗ್‌ನಲ್ಲೇ ತರಾಟೆ[...] ತೆಗೆದುಕೊಂಡು ಹಾರಾಡಿದರು. ಒಂದು ಸಭೆಯಿಂದ ಶಾಸ[...] ಸೈಲ್ ಜಿಎಂ ಸೀಇಒನ ಉದ್ಧಟತನ ಮತ್ತು ಆತ[...] ಸಮರ್ಥಿಸುವ ದೇಶಪಾಂಡೆಯ ಅಧಿಕಪ್ರಸಂಗ ಧಿಕ್ಕರಿ[...] ಹೊರನಡೆದ ಹೈಡ್ರಾಮಾನೂ ನಡೆದು ಹೋಯ್ತು!

ಅಧಿಕಾರಿಗಳು ಮತ್ತು ಜಿಲ್ಲಾಡಳಿತದ ಸಂಘರ್ಷ[...] ಅದೆಲ್ಲಿಗೆ ಬಂದು ತಲುಪಿತೆಂದರೆ, ವಿಧಾನಸಭೆಯ[...] ಅಧಿವೇಶನದಲ್ಲೇ ಶಾಸಕ ಹೆಬ್ಬಾರ್ ಡಿಸಿ ವಿರುದ್ಧ ದೂರ[...] ಹೇಳಿದರೆ, ಶಾಸಕಿ ಎಸಿಯಿಂದಾಗಿಯೇ ತನ್ನ ಕ್ಷೇತ್ರದ[...] ಕುಡಿವ ನೀರಿನ ಸಮಸ್ಯೆ ಎಂದು ಬೊಬ್ಬಿರಿದರ[...] ಕೆಂಡಮಂಡಲವಾದ ಸ್ಪೀಕರ್ ಕಾಗೋಡು ತಿಮ್ಮಪ್ಪ [...] ಕಿರಿಕ್ ಅಧಿಕಾರಿಗಳನ್ನು ವರ್ಗಾಯಿಸುವಂತೆ ಕಂದಾಯ[...] ಮಂತ್ರಿಗೇ ಆರ್ಡರ್ ಮಾಡಿಬಿಟ್ಟರು! ಇಷ್ಟಾದರೂ[...] ಪವರ್‌ಫುಲ್ ಮಂತ್ರಿ ದೇಶಪಾಂಡೆ ತನ್ನ ಸಾರ್ವಭೌಮತ್ವ[...] ಸವಾಲು ಹಾಕುತ್ತಿರುವ ಶಾಸಕರ ಶತ್ರುಗಳಾ[...] ಅಧಿಕಾರಿಗಳನ್ನು ಜಿಲ್ಲೆಯಲ್ಲೇ ಇಟ್ಟುಕೊಂಡು[...] ಪೋಷಿಸುತ್ತಿದ್ದಾರೆ. ಧನಬಲದಿಂದ ಹಳಿಯಾಳ್ ಟು ದಿ[...] ರಾಜಕಾರಣ ಮಾಡುತ್ತಿರುವ ದೇಶಪಾಂಡೆ ಹೆಬ್ಬಾರ್[...] ಸೈಲ್-ಶಾರದಾ ಶೆಟ್ಟಿಗೆ ತಾನೆಂಥ ಶಕ್ತಿವಂತನೆಂಬುದ[...]


ಜೆಡಿಎಸ್-ಬಿಜೆಪಿಯಲ್ಲಿ ಪಲ್ಲಟ

ಕಾಂಗ್ರೆಸ್ ಕಿಂಗ್ ದೇಶಪಾಂಡೆಯಂತೆಯೇ ಬಿಜೆಪಿಯ ತೋಲಾಂಡ ನಾಯಕದ್ವಯರಾದ ಕಾಗೇರಿ ಹೆಗಡೆ, ಅನಂತಕುಮಾರ್ ಹೆಗಡೆ ಮತ್ತು ಅಳಿದುಳಿದ ಜೆಡಿಎಸ್ ಜಗಜಟ್ಟಿ ದಿನಕರ ಶೆಟ್ಟಿಗಳಿಗೂ ತಂತಮ್ಮ ಪಕ್ಷದಲ್ಲಿ ಪತನದ ಭೀತಿ ಬಾಧಿಸುತ್ತಿದೆ. ಯಡ್ಡಿ ರಾಜ್ಯ ಬಿಜೆಪಿ ಬಾಸ್ ಆಗುತ್ತಲೇ ಕಾಗೇರಿ ತತ್ತರಿಸಿ ಹೋಗಿದ್ದಾರೆ. ಕೇಂದ್ರ ಮಂತ್ರಿ ಅನಂತಕುಮಾರ್, ಧಾರವಾಡ ಸಂಸದ ಪ್ರಹ್ಲಾದ ಜೋಶಿ ವಗೈರೆ ಹಾರವ ಗ್ಯಾಂಗಿನ ಸರದಾರರಲ್ಲಿ ಕಾಗೇರಿಯೂ ಒಬ್ಬ. ಹಾಗಂತ ಈ ಗ್ಯಾಂಗಿಗೆ ಕೆನರಾ ಸಂಸದ ಅನಂತ್ಮಾಣಿ ಕಂಡರಾಗದು. ಹೀಗಾಗಿ ಆತ ಯಡ್ಡಿ ಕ್ಯಾಂಪ್‌ಗೆ ಜಂಪ್ ಆಗಿದ್ದಾನೆ.


ಯಡ್ಡಿಯ ಆತ್ಮಾಪ್ತ ಮಾಜಿ ಮಂತ್ರಿ-ಭಟ್ಕಳದ ಶಿವಾನಂದ ನಾಯ್ಕರ ಆರೋಗ್ಯ-ವರ್ಚಸ್ಸು ಎರಡೂ ಹಾಳಾಗಿದೆ. ಚಲಾವಣೆ ಕಳೆದುಕೊಂಡಿರುವ ಶಿವಾನಂದ ನಾಯ್ಕರಿಗಿಂತ ಆತನ ಕಡುವೈರಿ ಅನಂತ್ಮಾಣಿಯೇ ಉತ್ತರ ಕನ್ನಡದ ತನ್ನ ಗ್ಯಾಂಗ್ ಲೀಡರಿಗೆ ಯೋಗ್ಯ "ಬೆಂಕಿ ನವಾಬ"ನಾಗಿ ಯಡ್ಡಿಗೆ ಕಾಣಿಸಿದ್ದಾನೆ. ಅನಂತ್ಮಾಣಿಗೆ ಕಾಗೇರಿ ತಲೆ ಕಂಡರಾಗದು. ಮುಂದಿನ ಬಾರಿ ಪಾರ್ಲಿಮೆಂಟ್‌ಗೆ ಸ್ಪರ್ಧಿಸುವ ಇರಾದೆ ಈತನಿಗಿಲ್ಲ. ಅದಕ್ಕಿಂತಲೂ ಮೊದಲು ಅನಂತಕುಮಾರ್-ಪ್ರಹ್ಲಾದ್ ಜೋಶಿ ಪಡೆ ಈತನಿಗೆ ಮತ್ತೆ ಎಂಪಿ ಟಿಕೆಟ್ ಸಿಗದಂತೆ ಮಾಡುವ ಪಣ ತೊಟ್ಟಿದೆ. ವಿಫಲ ಎಂಪಿ ಎಂಬ ಬ್ಲಾಕ್ ಲಿಸ್ಟ್‌ಗೆ ಬಿಜೆಪಿಗರು ಅನಂತ್ಮಾಣಿಯನ್ನು ಸೇರಿಸಿಟ್ಟಿದ್ದಾರೆ. ಆತನ ಅಧಿಕ ಪ್ರಸಂಗ, ಐಷಾರಾಮಿ, ಅಕ್ರಮ ಆಸ್ತಿ ಅರಣ್ಯ ಸ್ವಾಹಾ ಮತ್ತು ಜನದ್ರೋಹದಿಂದ ಪಾರ್ಟಿಗೆ ದೊಡ್ಡ ಡ್ಯಾಮೇಜಾಗಿದೆ ಎಂಬ ಅಭಿಪ್ರಾಯ ಚಡ್ಡಿ ವಲಯದಲ್ಲಿದೆ. ಇವೆಲ್ಲ ಅರ್ಥಮಾಡಿಕೊಂಡಿರುವ ಕಾಗೇರಿ ತನಗೆ ಶಿರಸಿ ಅಸೆಂಬ್ಲಿ ಟಿಕೆಟ್ ಕೊಡಿಯೆಂದು ಈಗಲೇ ವರಾತ ಹಚ್ಚಿದ್ದಾನಂತೆ; ಕಾಗೇರಿಗೆ ಎಂಪಿ ಮಾಡಿ ಎನ್ನುತ್ತಿದ್ದಾನಂತೆ.

ಯಡ್ಡಿಗೂ ಕಾಗೇರಿ ಎಮ್ಮೆಲ್ಲೆಯಾಗಿ ಮಂತ್ರಿಯಾಗೋದು ಅಪಥ್ಯವೇ. ಬದಲಿಗೆ ಅನಂತ್ಮಾಣಿ ಎಂಬ ಬ್ರಾಹ್ಮಣನನ್ನು ಆತ ಕಾಗೇರಿಗೆ ಬದಲಿಯಾಗಿ ಬೆಳೆಸುವ ಪ್ಲಾನ್‌ನಲ್ಲಿದ್ದಾರೆ. ಇದು ಕಾಗೇರಿಯ ನಿದ್ದೆಗೆಡಿಸಿದೆ. ಕಾಗೇರಿಗೆ ಶಿರಸಿ ಟಿಕೆಟ್ ತಪ್ಪಿಸುವುದು ಕಷ್ಟವಾದರೆ ಕುಮಟಾದಿಂದಾದರೂ ಅನಂತ್ಮಾಣಿ ಶಾಸಕನಾಗಬೇಕು ಎಂಬ ಆಸೆ ಯಡ್ಡಿಯದು. ಅನಂತ್ಮಾಣಿ ಕಣ್ಣೀಗ ಕುಮಟೆ ಮೇಲೆ ಬಿದ್ದಿದೆ. ಬೆನ್ನುನೋವು- ನರ ದೌರ್ಬಲ್ಯದಿಂದ ಬಳಲುತ್ತಿರುವ ಅನಂತ್ಮಾಣಿ ಜನಸಾಮಾನ್ಯರಿಗೆ ಸದಾ ನಾಟ್‌ರೀಚೇಬಲ್; ಆದರೂ ಈ ಕರ್ಮಗೇಡಿಗೆ ಮಂತ್ರಿಗಿರ ತೆವಲು.

ಜಿಲ್ಲೆಯಲ್ಲಿ ಜೆಡಿಎಸ್ ಬೇರಿರುವುದು ಶಿರಸಿ ಬಿಟ್ಟರೆ ಕುಮಟೆಯಲ್ಲಿ. ಶಿರಸಿಯಲ್ಲಿ ರಾಮಕೃಷ್ಣ ಹೆಗಡೆ ಮೊಮ್ಮಗ ಶಶಿಭೂಷಣ ಹೆಗಡೆ ಮತ್ತು ಕುಮಟೆಯಲ್ಲಿ ಮಾಜಿ ಶಾಸಕ ದಿನಕರ ಶೆಟ್ಟಿ ವೈಯಕ್ತಿಕ ತಾಕತ್ತಿನಿಂದ ಜೆಡಿಎಸ್ ಜೀವ ಉಳಿಸಿದ್ದಾರೆ. ಆದರೆ ಜೆಡಿಎಸ್‌ನಿಂದ ನಿಂತರೆ ಗೆಲ್ಲೋದು ಕಷ್ಟವೆಂಬ ಭಯ ಈಗ ಶೆಟ್ಟಿಯನ್ನು ಕಾಡುತ್ತಿದೆ. ಹೀಗಾಗಿ ಆತ ಬಿಜೆಪಿ ಸೇರುವ ತವಕದಲ್ಲಿದ್ದಾರೆ. ಯಡ್ಡಿ-ಸದಾನಂದ ಗೌಡರ ಕೃಪಾಕಟಾಕ್ಷ ನಂಬಿದ್ದಾರೆ. ಆದರೆ ಕಾರ್ಕಳದ ಶಾಸಕ ಸುನಿಲ್‌ಕುಮಾರ್ ಯುವ ಕೋಟಾದಲ್ಲಿ ತನ್ನ ತಾಯಿ ಜಾತಿಗೆ ಸೇರಿದ ದೀವರ ಪೋರ ಸೂರಜ್ ನಾಯ್ಕ್ ಪರ ವಕಾಲತ್ತು ನಡೆಸಿದ್ದಾರೆ. ಕಳೆದ ಬಾರಿ ದೊಡ್ಡ ಅಂತರದಲ್ಲಿ ಸೋತಿರುವ ಸೂರಜ್‌ಗೆ ಬಿಜೆಪಿಯೊಳಗಿನ ವಿಪ್ಲವ-ಪಲ್ಲಟ ಕಂಗೆಡಿಸಿದೆ. ಸೂರಜ್ ಅಥವಾ ಅನಂತ್ಮಾಣಿಗೆ ಬಿಜೆಪಿ ಕುಮಟೆ ಟಿಕೆಟ್ ಕೊಡಬೇಕಾದ ಸಂದಿಗ್ಧ ಎದುರಾದರೆ ಶೆಟ್ಟಿಗೆ ಹಳೆ ಗಂಡನ ಪಾದವೇ ಗತಿ.ಆದರೆ ಜೆಡಿಎಸ್‌ನಲ್ಲಿ ಆತನಿಗೆ ಪ್ರತಿಸ್ಪರ್ಧಿಯೊಬ್ಬ ಹುಟ್ಟಿಕೊಂಡು ಸತಾಯಿಸುತ್ತಿದ್ದಾನೆ. ಆತನೇ ಜಿಪಂ ಸದಸ್ಯ- ಕಳ್ಳ ಚಿಪ್ಪಿ ಉದ್ಯಮಿ ಪ್ರದೀಪ್ ನಾಯಕ್. ರಾಮಚಂದ್ರಾಪುರ ಮಠದ ರಾಘವೇಶ್ವರ ಸ್ವಾಮಿಯ ಕಟ್ಟಾ ಬೆಂಬಲಿಗನಾದ ಈ ಹಣಬಲ-ತೋಳ್ಬಲಗಳ ತೋಲಾಂಡ ನಾಯಕ ಜೆಡಿಎಸ್‌ನಿಂದ ಎಮ್ಮೆಲ್ಲೆಯಾಗುವ ಕನಸು ಕಾಣುತ್ತಿದ್ದಾನೆ. ಮೊನ್ನೆ ಜಿಪಂ ಎಲೆಕ್ಷನ್‌ನಲ್ಲೇ ಬರೋಬ್ಬರಿ ಒಂದು ಕೋಟಿ ಕರಗಿಸಿ ಗೆದ್ದಿರುವ ಪ್ರತೀತಿಯ ಪ್ರದೀಪ್ ನಾಯಕ್‌ನ ಕಪ್ಪು ಹಣದ ಮಹಿಮೆ ಹೇಳತೀರದು. ಪ್ರದೀಪ್ ರಾಘವೇಶ್ವರ ಸ್ವಾಮಿಗೆ ತೋಳ್ಬಲದ ರಕ್ಷಣೆ ನೀಡಿದರೆ, ಸ್ವಾಮಿ ಆತನ ಕಪ್ಪು ಚಿಪ್ಪಿ ಉದ್ಯಮ ಕಾಪಾಡುತ್ತಾರೆ. ಇದು ಗುರು-ಶಿಷ್ಯರ ಅಂಟ ನಂಟಿನ ಗುಟ್ಟು.


ಮಂಕಾಳ್ ವೈದ್ಯ


ಪ್ರದೀಪ್ ನಾಯಕ್


ದಿನಕರ್ ಶೆಟ್ಟಿ


ಸೂರಜ್ ನಾಯಕ್


ನಾಗರಾಜ್ ನಾಯಕ್

ಹಾಗಂತ ಸ್ವಾಮಿಗೆ ದಿನಕರ ಶೆಟ್ಟರ ಬಗ್ಗೂ ಪ್ರೀತಿಯಿದೆ. ಸಂಕಷ್ಟದ ದಿನಗಳಲ್ಲಿ ನೆರವಾದ ಋಣವಿದೆ. ಹಾಗಾಗಿ ಸ್ವಾಮಿ ಶೆಟ್ಟಿ-ನಾಯಕ್ ನಡುವೆ ಸಣ್ಣದೊಂದು ಒಪ್ಪಂದ ಮಾಡಿಸಿ ರಾಜಿ ಮಾಡಿದ್ದಾರೆಂಬ ಸುದ್ದಿ ಕುಮಟೆಯಾದ್ಯಂತ ಹಬ್ಬಿದೆ. ಈ ಬಾರಿ ದಿನಕರಶೆಟ್ಟಿಗೆ ಜೆಡಿಎಸ್ ಟಿಕೆಟ್. ಅದಕ್ಕೆ ಪ್ರದೀಪ್ ನಾಯಕ್ ಅಡ್ಡಿಪಡಿಸಬಹುದು. ಮುಂದಿನ ಬಾರಿ ಪ್ರದೀಪ್‌ಗೆ ದಿನಕರ ಶೆಟ್ರು ಸೀಟು ಬಿಟ್ಟುಕೊಡಬೇಕು. ಇದು ರಾಘು ಸ್ವಾಮಿ ರಾಜಕೀಯ!

ಬಿಜೆಪಿ ಟಿಕೆಟ್‌ಗಾಗಿ ಅನಂತ ಹೆಗಡೆ, ಸೂರಜ್ ನಾಯ್ಕ್, ದಿನಕರ ಶೆಟ್ಟಿ, ವಗೈರೆ ಅರ್ಧ ಡಜನ್ ಮಂದಿ ಕಣ್ಣಿಟ್ಟಿದ್ದಾರೆ. ಕೆಜೆಪಿಯಲ್ಲಿದ್ದು ಬಿಜೆಪಿಗೆ ಬಂದಿರುವ ಯಡ್ಡಿ ಶಿಷ್ಯ-ಜಿಪಂ ಸದಸ್ಯೆ ಗಾಯತ್ರಿಗೌಡರೂ ತುಂಬ ದಿನದಿಂದ ಶಾಸಕಿಯಾಗುವ ಕನಸು ಕಾಣುತ್ತಿದ್ದಾರೆ. ಇವರೆಲ್ಲರಿಗಿಂತಲೂ ಹೆಚ್ಚು ಪ್ರಯತ್ನ ಹೊಸಪೇಟೆ ಅರಣ್ಯಾಧಿಕಾರಿ ನಾಗರಾಜ್ ನಾಯಕ್ ತೋರ್ಕೆ ಮಾಡುತ್ತಿದ್ದಾನೆ. ಈತ ಅರಣ್ಯ ಇಲಾಖೆಯಲ್ಲಿ ಅದ್ಯಾವ ಪರಿ ಲೂಟಿ ಮಾಡಿದ್ದಾನೆಂದರೆ ಎರಡೆರಡು ಸಾಫ್ಟ್‌ವೇರ್ ಕಂಪನಿ ಬೇನಾಮಿಯಾಗಿ ನಡೆಸುತ್ತಿದ್ದಾನೆ. ಹಾಸನದಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿದ್ದಾಗ ಉದ್ಯೋಗ ಖಾತ್ರಿಯ ಅಕ್ಕಿ ಕದ್ದು ತಿಂಗಳುಗಟ್ಟಲೆ ಜೈಲು ಪಾಲಾಗಿದ್ದ 'ಕೀರ್ತಿ' ಈ ತೋರ್ಕೆ ನಾಯಕನದು. ನಾಗರಾಜ ನಾಯಕ್‌ಗೆ ಕಳ್ಳ ಹಣ ವಿಧಾನಸೌಧದ ತೆವಲು ತುಂಬ ನಿದ್ದೆಗೆಡಿಸುತ್ತಿದೆ. ಈತ ಈಗಾಗಲೇ ಕುಮಟಾ ಏರಿಯಾದಲ್ಲಿ ಕ್ರೀಡೆ, ಮದುವೆ, ಮುಂಜಿ, ಪುಸ್ತಕ, ಹಣ ಹಂಚಲು ಶುರು ಮಾಡಿರುವುದು ಮಜಾ ಆಗಿದೆ.

ತೋರಿಸುವ ಹಠಕ್ಕೆ ಬಿದ್ದಿದ್ದಾರೆ.

ಹಾಗಂತ ಹೆಬ್ಬಾರ್ ತಂಡವೇನೂ ಕೈಚೆಲ್ಲಿ ಕೂತಿಲ್ಲ; ದೇಶಪಾಂಡೆಗೆ ಬೆದರಿ ಮಸ್ಕಾ ಹೊಡೆಯುತ್ತಿಲ್ಲ, ಹೇಗಾದರೂ ಮಾಡಿ ದೇಶಪಾಂಡೆಯ ಸೊಕ್ಕು ಅಡಗಿಸಬೇಕೆಂದು ತಂತ್ರಗಾರಿಕೆ ಮಾಡುತ್ತಲೇ ಇದೆ. ಬೆಂಗಳೂರಲ್ಲಿ ನಡೆದ ಸಮಾನ ಮನಸ್ಕ ಶಾಸಕರ ಸಭೆಗೂ ಹೆಬ್ಬಾರ್ ಅಂಡ್ ಗ್ಯಾಂಗ್ ಹೋಗಿಬಂದಿದೆ. ಅಲ್ಲಿ ದೇಶಪಾಂಡೆಯಿಂದಾಗುತ್ತಿರುವ ಕಿರುಕುಳ, ದೇಶಪಾಂಡೆ ಮಾತುಕೇಳಿ ಅಧಿಕಾರಿಗಳು ತಮ್ಮ ಜನಪರ ಬೇಡಿಕೆಯ ಫೈಲ್ ಬದಿಗೆ ತಳ್ಳುತ್ತಿರುವ ತಳಮಳದ ಕತೆಯನ್ನೆಲ್ಲ ವಿವರಿಸಿದ್ದಾರೆ. ದೇಶಪಾಂಡೆಯನ್ನು ಮಂತ್ರಿಗಿರಿಯಿಂದ ತೆಗೆಯುವುದೇ ಜಿಲ್ಲಾ ಕಾಂಗ್ರೆಸ್ ಬಚಾವಾಗುವುದಕ್ಕೆ ಏಕೈಕ ದಾರಿ ಎಂದು ವಾದಿಸಿದ್ದಾರೆ. ಹಾಗೊಮ್ಮೆ ಪ್ರಬಲ ದೇಶಪಾಂಡೆಯನ್ನು ಮಾಜಿ ಮಂತ್ರಿ ಮಾಡಲು ಸಾಧ್ಯವಾಗದಿದ್ದರೆ, ಜಿಲ್ಲೆಯಿಂದ ಮತ್ತೊಬ್ಬನನ್ನು ಸಚಿವನಾಗಿಸಬೇಕೆಂಬ ತೂಕದ ಬೇಡಿಕೆ ಇಟ್ಟಿದ್ದಾರೆ.

ಈ ಹರಕುಬಾಯಿ ಹೆಬ್ಬಾರ ತಾನು ಬೆಂಗಳೂರಿನ ಸಮಾನ ಮನಸ್ಕ ಎಮ್ಮೆಲ್ಲೆಗಳ ಸಭೆಯಲ್ಲಿ ಮಾಡಿದ ಸಾಹಸ ಮುಂಡಗೋಡದಲ್ಲಿ ಹೇಳಿಕೊಂಡು ಬುಷಿಪಟ್ಟಿದ್ದಾನೆ. ಕಾಂಗ್ರೆಸ್ ಕಾರ್ಯಕರ್ತರು ಮತ್ತು ಪತ್ರಕರ್ತರ ಎದುರು ದೇಶಪಾಂಡೆಗೆ ಪರೋಕ್ಷವಾಗಿ ಮೂದಲಿಸಿದ್ದಾನೆ. "ಜಿಲ್ಲೆಯಲ್ಲಿ ನಿರೀಕ್ಷಿತ ಅಭಿವೃದ್ಧಿ ಕಾರ್ಯಗಳು ಆಗುತ್ತಿಲ್ಲ.... ನಮ್ಮದೇ ಪಕ್ಷದ ಸರ್ಕಾರ ಇದ್ರೂ ಈ ಪಾಡು.... ಇದಕ್ಕೆ ಜಿಲ್ಲಾ ಮಂತ್ರಿಯ ಕಾರ್ಯವೈಖರಿಯೇ ಕಾರಣ.... ದೇಶಪಾಂಡೆಯ ಕೆಲಸ-ಕಾರ್ಯ ತೃಪ್ತಿಕರವಾಗಿಲ್ಲ... ಹೀಗಾಗಿ ಜಿಲ್ಲೆಗೆ ಮತ್ತೊಂದು ಮಂತ್ರಿಗಿರಿ ಬೇಕೆಂಬ ಬೇಡಿಕೆ ಇಟ್ಟಿದ್ದೇವೆ..." ಎಂದು ದೇಶಪಾಂಡೆಗೆ ಬಲವಾಗೇ ಚಿವುಟಿದ್ದಾರೆ. ಒಂದಂತೂ ಖರೆ. ದೇಶಪಾಂಡೆ ಮಂತ್ರಿಯಾಗಿ ಪಾರಮ್ಯ ಮೆರೆದಷ್ಟು ಕಾಲ ತಮಗೆ ಕೇಡುಗಾಲವೇ ಎಂಬ ತೀರ್ಮಾನಕ್ಕೆ ಜಿಲ್ಲೆಯ ರೆಬೆಲ್ ಶಾಸಕರು ಬಂದಿದ್ದಾರೆ. ಹಾಗಾಗಿಯೇ ಪಾಳೆಗಾರ ದೇಶಪಾಂಡೆಯ ಬುಡಕ್ಕೆ ಬಿಡಲು ಬಿಸಿಬಿಸಿ ನೀರು ಕಾಯಿಸುತ್ತಿದ್ದಾರೆ.

ಹೆಬ್ಬಾರ್ ಸ್ವ-ಕ್ಷೇತ್ರ ಮುಂಡಗೋಡದಲ್ಲಿ ದೇಶಪಾಂಡೆ ವಿರುದ್ಧ ಕಹಳೆ ಮೊಳಗಿಸುತ್ತಿದ್ದಂತೆಯೇ ಜಿಲ್ಲಾ ಕಾಂಗ್ರೆಸ್‌ನಲ್ಲಿ ತಲ್ಲಣಗಳು ಶುರುವಾಗಿದೆ. ದೇಶಪಾಂಡೆ ಸಾಹೇಬರಿಗಾದ ಡ್ಯಾಮೇಜ್ ಕಂಟ್ರೋಲ್‌ಗೆ ಆತ ಥರ್ಡ್‌ಕ್ಲಾಸ್ ಬಂಟರು ಹೆಬ್ಬಾರ್ ವಿರುದ್ಧ ಹೇಳಿಕೆಗಳ ಬಾಣ ಬಿಡುತ್ತಿದ್ದಾರೆ. ದೇಶಪಾಂಡೆಯ ಕೈಗೊಂಬೆಯಂತಿರುವ ನಾಲಾಯಕ್ ಡಿಸಿಸಿ ಅಧ್ಯಕ್ಷ ಭೀಮಣ್ಣ ನಾಯ್ಕನೇ ಪಕ್ಷಕ್ಕೆ ಮುಜುಗರ ಆಗುವಂತೆ ಹಾರಾಡುತ್ತಿದ್ದಾನೆ. ಭಿನ್ನಮತದ ಸಮಸ್ಯೆ ಅಧ್ಯಕ್ಷನಾಗಿ ನಿಭಾಯಿಸುವ ಚಾಕಚಕ್ಯತೆಯಿಲ್ಲದ ಹೆತ್ಲಾಂಡಿ ಹೆಂಡೋದ್ಯಮಿ ಭೀಮಣ್ಣ ತಾನು ದೇಶಪಾಂಡೆಯ ಜೀತದಾಳು ಎಂಬಂತೆ ಹೆಬ್ಬಾರ್‌ಗೆ ಕಿಚಾಯಿಸಿ ಮೋಕಳಿಕ್ ಆಗಿದ್ದಾನೆ. ದೇಶಪಾಂಡೆಯಿಂದ ನಿರಂತರವಾಗಿ ಶೋಷಣೆ-ವಂಚನೆ-ಅನ್ಯಾಯ ಅನುಭವಿಸುತ್ತಿದ್ದರೂ ಈ ಭಂಡ ಭೀಮಣ್ಣ ಧಣಿಯ ಗುಲಾಮಗಿರಿಯಲ್ಲೇ ಸಂತೃಪ್ತಿ ಕಾಣುತ್ತಿದ್ದಾನೆ. ಮುಂದೊಂದು ದಿನ ಶಿರಸಿ ಕಾಂಗ್ರೆಸ್ ಟಿಕೆಟ್ ಈ 'ದೇವರು' ಕೊಡುತ್ತಾರೆಂಬ ತೇಲುಗಣ್ಣು ಬಿಡುತ್ತಿದ್ದಾರೆ. ದನ ಕಾಯುತ್ತಿದ್ದ ಈತನನ್ನು ರಾಜಕಾರಣಿ ಮಾಡಿದ್ದ ಭಾವ (ಅಕ್ಕನ ಗಂಡ) 'ಬಂ'ಗೆ ಕೊನೆಗಾಲದಲ್ಲಿ ಕೈಕೊಟ್ಟಿದ್ದ ಕೃತಘ್ನ ಭೀಮಣ್ಣನ ಅಧ್ಯಕ್ಷಗಿರಿಯೇ ಜಿಲ್ಲಾ ಕಾಂಗ್ರೆಸ್‌ಗೆ ಶಾಪದಂತಾಗಿದೆ. ದೇಶಪಾಂಡೆಯನ್ನು ಸಂಪ್ರೀತಗೊಳಿಸಲು ಈ ಭೀಮಣ್ಣ ಕಳೆದ ಜಿಪಂ ಎಲೆಕ್ಷನ್‌ನಲ್ಲಿ ಶಿರಸಿ ಏರಿಯಾದ ಹೆಬ್ಬಾರ್‌ನ ಅಸೆಂಬ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್ ಕ್ಯಾಂಡಿಡೇಟ್‌ಗಳನ್ನು ಸೋಲಿಸಲು ಹವಣಿಸಿದ್ದ!

ಈ ಸೇಡು ಹೆಬ್ಬಾರ್ ಮೊನ್ನೆ ನಡೆದ ಶಿರಸಿ ನಗರಸಭೆ ಅಧ್ಯಕ್ಷನ ಆಯ್ಕೆ ಹೊತ್ತಲ್ಲಿ ತೀರಿಸಿಕೊಂಡಿದ್ದಾನೆ. ಭೀಮಣ್ಣನ ಕ್ಯಾಂಡಿಡೇಟ್ ಶ್ರೀಕಾಂತ ತಾರಿಬಾಗಿಲನಿಗೆ ಚಾನ್ಸ್ ಸಿಗಬಾರದೆಂದು ಬಂಡಾಯಗಾರ ಪ್ರದೀಪ ಶೆಟ್ಟಿ ಬೆನ್ನಿಗೆ ಹೆಬ್ಬಾರ್ ನಿಂತಿದ್ದ ಬಿಜೆಪಿ ಎಂಪಿ ಅನಂತ್ಕುಮಾರ್ ಜತೆ ರಹಸ್ಯ ಕಾರ್ಯಾಚರಣೆ ನಡೆಸಿ ಬಿಜೆಪಿ ಕೌನ್ಸಿಲರ್‌ಗಳು ಪ್ರದೀಪ ಶೆಟ್ಟಿಗೆ ಬೆಂಬಲಿಸುವಂತೆ ಮಾಡಿದ್ದರು. ಪರಿಣಾಮವಾಗಿ ಡಿಸಿಸಿ ಅಧ್ಯಕ್ಷ ಭೀಮಣ್ಣ- ಜಿಲ್ಲಾ ಮಂತ್ರಿ ದೇಶಪಾಂಡೆಯ ಅಧಿಕೃತ ಅಭ್ಯರ್ಥಿ ಸೋತು ಬಂಡುಕೋರ ಶೆಟ್ಟಿ ರೊಟ್ಟಿ ತುಪ್ಪಕ್ಕೆ ಜಾರಿತ್ತು. ಅತ್ತ ಕಾರವಾರದಲ್ಲೂ ಶಾಸಕ ಸೈಲ್ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿಗೆ ಬೆಂಬಲಿಸದೇ ತನ್ನದೇ ಹುರಿಯಾಳನ್ನು ಅಖಾಡಕ್ಕೆ ಇಳಿಸಿದ್ದ ಬಿಜೆಪಿ ಕೌನ್ಸಿಲರ್‌ಗಳು ಸೈಲ್ ಕ್ಯಾಂಡಿಡೇಟ್ ಗಣಪತಿ ನಾಯ್ಕ್‌ಗೆ ಬೆಂಬಲಿಸಿದರು. ಕಾರವಾರದ ಟಿಎಂಸಿಯಲ್ಲೂ ಭೀಮಣ್ಣ-ದೇಶಪಾಂಡೆಗೆ ಮುಖಭಂಗವಾಗಿದೆ. ಯಲ್ಲಾಪುರದಲ್ಲೂ ಬಂಡಾಯ ಭುಗಿಲೆದ್ದಿದೆ.

ಇಂಥ ಮೇಲಾಟ-ತಿಕ್ಕಾಟ ಜಿಲ್ಲಾ ಕಾಂಗ್ರೆಸ್‌ನಲ್ಲೀಗ ನಿತ್ಯ ನೂತನವಾಗಿ ನಡೆಯುತ್ತಿದೆ. ದೇಶಪಾಂಡೆ-ಹೆಬ್ಬಾರ್ ಗ್ಯಾಂಗ್‌ವಾರ್ ಕಾಂಗ್ರೆಸ್‌ನ್ನು ನಿರ್ನಾಮ ಮಾಡುತ್ತಿದೆ. ಸದ್ಯವೇ ನಡೆಯಲಿರುವ ಜಿಪಂ ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ ಸಿದ್ಧಾಪಿದ್ದಿಯಲ್ಲಿ ಮತ್ತೊಂದು ಸುತ್ತು ದೇಶಪಾಂಡೆ-ಹಬ್ಬಾರ ಬಣ ಬಡಿದಾಟ ತಾರಕಕ್ಕೇರಲಿದೆ. ದೇಶಪಾಂಡೆ ಅಳೆದು ತೂಗಿ ಜಿಪಂ ಅಧ್ಯಕ್ಷತೆ ದಲಿತ ಕುಹಿಳೆಗೆ ಮೀಸಲಿಟ್ಟಿದ್ದಾರೆ. ತಾನು ಹೇಳಿದಲ್ಲಿ ಹೆಬ್ಬೆಟ್ಟು ಸಹಿ ಒತ್ತುವವರಿಗಾಗಿ ದೇಶಪಾಂಡೆ ಜಿಪಂ ಪೀಠ ಮೀಸಲಿಡುತ್ತಾರೆಂಬ ನಿರೀಕ್ಷೆ ನಿಜವಾಗಿದೆ. ಇದು ದೇಶಪಾಂಡೆಯ ಪರಂಪರೆ!! ರಾಜಕೀಯ ಜಾಣ್ಮೆ, ಜಾತಿಬಲ, ವಿಚಾರವಂತಿಕೆ ಇರುವರು ಜಿಪಂ ಪೀಠವೇರಿದರೆ ತನಗೆ ಅಪಾಯವೆಂಬ ಲೆಕ್ಕಾಚಾರ ದೇಶಪಾಂಡೆ ಯದು. ಈಗ ಜಿಪಂ ಅಧ್ಯಕ್ಷರಿಗೆ ನಿರಂತರ 5 ವರ್ಷ ಅಧಿಕಾರ; ಕ್ಯಾಬಿನೆಟ್ ಮಂತ್ರಿಯ ಬಲ ಕೊಡಲಾಗಿರುವುದರಿಂದ ಮುಂದಿನ ಎಲೆಕ್ಷನ್‌ನಲ್ಲಿ ತಾನು ಮುಗ್ಗರಿಸಿದರೆ ಈ ಜಿಪಂ ಅಧ್ಯಕ್ಷನ 'ಅಂಡರ್' ತಾನಾಗಬೇಕಾಗುತ್ತದೆಂಬ ಆತಂಕ ದೇಶಪಾಂಡೆಯದು. ಹೀಗಾಗಿ ಮೀಸಲಾತಿಯಲ್ಲಾತ ಆಟ ಆಡಿದ್ದಾನೆಂಬುದು ಜಿಲ್ಲೆಯ ಜನರಿಗೆ ಖಾತ್ರಿಯಾಗಿಹೋಗಿದೆ. ಅಮಾಯಕ ದುರ್ಬಲರನ್ನು ಗದ್ದುಗೆಗೇರಿಸಿ ಅಡ್ಡದಾರಿಯಲ್ಲಿ ಅಧಿಕಾರ ನಡೆಸೋದು ದೇಶಪಾಂಡೆ ಬಸ್ಮಕ್ಕೂಟದ ರೋಗ!!

ಭಟ್ಕಳದ ಜಯಶ್ರೀ ಮೊಗೇರ ದೇಶಪಾಂಡೆಯ ಅಭ್ಯರ್ಥಿಯಾಗುವ ಸಕಲ ಸೂಚನೆ ಗೋಚರಿಸುತ್ತಿದೆ. ಆದರೆ ಶಾಸಕ ಹೆಬ್ಬಾರ್ ತನ್ನ ಮುಂಡಗೋಡ ಕ್ಷೇತ್ರದ ಜಯಮ್ಮ ಹೀರಳ್ಳಿಗೆ ಪಟ್ಟಗಟ್ಟುವ ತಂತ್ರಗಾರಿಕೆ ಹೆಣೆದಿದ್ದಾರೆ. ಕದಿಸಿಸಿ ಬ್ಯಾಂಕ್ ಗದ್ದುಗೆ ಗುದ್ದಾಟದಂತೆ ಕುತೂಹಲ ಕೆರಳಿಸೀತಾ ಜಿಪಂ ಪೀಠ ಪ್ರದಾನ ಕದನ? ಹಾಗಂತ ಜಿಲ್ಲೆಯ ಜನರು ಮಾತಾಡಿಕೊಳ್ಳುತ್ತಿದ್ದಾರೆ. ಸೊಕ್ಕಿನ ಪ್ಪ, ಬೆಕ್ಕು ದೇಶಪಾಂಡೆಗೆ ಗಂಟೆ ಕಟ್ಟೋದು ಅಷ್ಟು ಸುಲಭವೇನಲ್ಲ, ಆದರೆ ದೇಶಪಾಂಡೆಯ ಪಾಳೆಗಾರಿ ಪಾರಮ್ಯಕ್ಕೆ ಗಂಡಾಂತರ ಶುರುವಾಗಿರೋದಂತೂ ಖರೆ. ದೇಶಪಾಂಡೆಯ ಮೊದಲಿನ ಪ್ರೊಗರು ಕಮ್ಮಿಯಾಗದಿದ್ದರೂ ಮೊದಲಿನ ಪ್ರತಾಪ ಶಕ್ತಿ ಉಳಿದಿಲ್ಲ!!

■ ವರದಿಗಾರ

ಕಾಗೆ ಕೂಗಿಗೆ ಯಾವ ಬೆಲೆಯಿದೆ ಸ್ವಾಮಿ

ಯಡ್ಡಿ ಬಿಜೆಪಿ ಬಂಡಿಗೆ ಏರಿದಕೂಡಲೇ ಕಾಂಗ್ರೈ ಪಾರ್ಟಿ ಚುರುಕಾಗಿದೆಯಂತಲ್ಲಾ, ಈ ಅಭಿಪ್ರಾಯದಲ್ಲಿ ಸ್ವಲ್ಪ ನಿಜವಿದೆ. ಸ್ವಯಂ ಸಿದ್ದು ಅಭಿಪ್ರಾಯದಂತೆ ಯಡ್ಡಿ ಸರಕಾರಿ ಕಾಮಗಾರಿ ಜೊತೆಗೆ ಸ್ವಂತ ಕಟ್ಟಡದ ಕಾಮಗಾರಿಯನ್ನು ರಾತ್ರಿಯೆಲ್ಲಾ ಪರಿಶೀಲಿಸಿ, ಬೆಳಗಿನ ಜಾವಕ್ಕೆ ಕಿಕ್‌ಬ್ಯಾಕಿನ ಚರ್ಚೆ ಮುಗಿಸಿ ಮನೆಗೆ ಹೋಗುತ್ತಿದ್ದ ವ್ಯಕ್ತಿಯಂತೆ. ಇಂತಹ ನಿದ್ರಾಹಾರ ನಿರ್ಲಕ್ಷಿತ ಶ್ರಮಜೀವಿಗಾಗಿ ನಿರಾಣಿ ಎಂಬ ಸಕ್ಕರೆ ಮೂಟೆ ಐಷಾರಾಮಿ ಕಾರು ನೀಡಿದನಲ್ಲಾ, ಇಂತಹ ದುಬಾರಿ ಗಿಫ್ಟಿಗೆ ಅಂಜಿಕೊಂಡ ಯಡ್ಡಿಗೆ ಸಿದ್ದರಾಮಯ್ಯನ ವಾಚಿನ ಹಗರಣ ನೆನಪಾಗಿ ಮರಳಿ ಕೊಟ್ಟರಲ್ಲಾ, ಆದರೆ ಕುಮಾರಣ್ಣ ಮುಖ್ಯಮಂತ್ರಿ ಪದವಿಯ ಕಾರಣಕ್ಕೆ ಬಂದ ಗಿಫ್ಟನ್ನ ಹಿಂದಿರುಗಿಸದೆ ಸಂಕಷ್ಟ ಅನುಭವಿಸಿದರಂತಲ್ಲಾ, ಧೂತ್ತೇರಿ!

ಧೂತ್ತೇರಿ

ಯಾಹೂ

* * *

ರಣಬೇಸಿಗೆಯಲ್ಲಿ ಇದ್ದಕ್ಕಿದ್ದಂತೆ ಮನೆಯ ಹೆಂಚಿನ ಮೇಲೆ ಕುಳಿತ ಕಾಗೆ ಯಾವ ಸದುದ್ದೇಶವೂ ಇಲ್ಲದೆ ಕೆಟ್ಟ ದನಿಯಲ್ಲಿ ಕೂಗಿ ಹಾರಿಹೋಗುವಂತೆ ನಮ್ಮ ಕೋಡಿಮಠ ಪ್ರಾಂತ್ಯದ ಜಗದ್ಗುರುಗಳು ನೀವು ಕೇಳಿಸಿಕೊಳ್ಳಿ ಬಿಡಿ, ತಮ್ಮ ಕಾರಣಿಕೆಯನ್ನು ಬಿತ್ತರಿಸಿ ಸುಮ್ಮನಾಗುತ್ತಾರಲ್ಲ, ಚಾಂದ್ರಮಾನ ಯುಗಾದಿಯ ದಿವಸ ಕಾಣಿಸಿಕೊಂಡ ಚಂದ್ರ ಸಮತೂಕವಾಗಿರದೆ ಎಡಕ್ಕೆ ಅಥವಾ ಬಲಕ್ಕೆ



ಒರೆಯಾಗಿದ್ದರೆ ಹಳ್ಳಿಗರು ಈ ಬಾರಿ ಧಾನ್ಯ ಅಗ್ಗ ಅಥವ-ಚಿನ್ನ ಅಗ್ಗ ಎಂದು ಬರಲಿರುವ ದಿನಗಳನ್ನು ಎದುರಿಸಲು ತಯಾರಾಗುತ್ತಾರೆ. ಇದೊಂದು ಅನಾದಿಕಾಲದ ನಂಬಿಕೆ. ಆದರೆ ನಮ್ಮ ಕೋಡಿ ಶ್ರೀಗಳ ಮಾತಿಗೆ ಯಾರೂ ಪ್ರತಿಕ್ರಿಯಿಸದೆ ಇರುವುದರಿಂದ ಅನಿವಾರ್ಯವಾಗಿ ನಾವೇ ಮಾತನಾಡಿಸಿ ನಮ್ಮ ಮನಸ್ಸನ್ನು ಹಗುರ ಮಾಡಿಕೊಳ್ಳಬೇಕೆನ್ನಿಸಿ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ಲೋಕವೀರಂ ಮಹಾಪೂಜ್ಯಂ ಕೋಡಿಶ್ರೀ ಉವಾಚಂ ಲೋಖಮಾನ್ಯಂ....."

"ಹಲೋ?"

"ಶರಣು ಸ್ವಾಮೀಜಿ. ನಾನು ಪತ್ರಕರ್ತ."

"ದಿನ ಪತ್ರಿಕೆನೊ? ವಾರ ಪತ್ರಿಕೆನೊ? ಮಾಸ ಪತ್ರಿಕೆನೊ?"

"ಜ್ಯೋತಿಶಾಸ್ತ್ರಜ್ಞರಿಗೆ ಅದು ಗೊತ್ತಾಗಬೇಕಿತ್ತು, ಇರಲಿ, ನಮ್ಮದು ವಾರ ಪತ್ರಿಕೆ ಸ್ವಾಮೀಜಿ."

"ವಾರ ಪತ್ರಿಕೆಯೊ? ಚೆನ್ನಾಗಿ ನಡೀತಾ ಇದೆಯಾ?"

"ತಮ್ಮ ಆಶೀರ್ವಾದ."

"ಫೋನ್ ಮಾಡಿದ ಉದ್ದೇಶ?"

"ತಮ್ಮ ಕಾರಣಿಕ ಕೇಳಿದೆ. ಅದ್ಕೆ ಫೋನ್ ಮಾಡಿದೆ."

"ಕಾರ್ಣಿಕ ಅಲ್ಲ ನಾವು ಹೇಳದು. ಅಪೂರ್ವ ಗ್ರಂಥದಲ್ಲಿ ಅಪೂರ್ಣವಾಗಿ ನಮೂದಿತವಾಗಿರುವ ವಾಕ್ಯಗಳನ್ನು ಪೂರ್ಣಗೊಳಿಸಿ ಹೇಳ್ತಿವಿ."

"ಬಹಳ ಹಿಂದೆ ನಿಮ್ಮ ಒಂದು ವಾಕ್ಯ ಸುಳ್ಳಾಗ್ನೇ ಹೋಳಿತ್ತು ಸ್ವಾಮಿ."

"ಯಾವಾಗ?"

"ಚಿಕ್ಕಮಗಳೂರಲ್ಲಿ ಇಂದಿರಾ ಗಾಂಧಿ ಚುನಾವಣೆಗೆ ನಿಂತಾಗ ಆಕೆ ಸೋತು ವೀರೇಂದ್ರ ಪಾಟೀಲ್ ಗೆಲ್ತಾರೆ ಅಂತ ಹೇಳಿದ್ರಿ. ಇಂದಿರಾ ಗಾಂಧಿ ಅಲ್ಲಿಗೆ ಬಂದಾಗ ಆಕೆನೂ ಗೆಲ್ತಾಳೆ ಅಂತ ಹೇಳಿದ್ರಿ. ಇದ್ಯಂಗೇಳಿದ್ರಿ?"

"ನೋಡೀ, ಅವರು ಬಂದು ಕೇಳಿದ ಸಮಯದಲ್ಲಿ ನಾವು ಗ್ರಂಥವನ್ನು ತೆರೆದು ನೋಡಿದಾಗ ಯಾವ ವಾಕ್ಯ ಅರ್ಥ ಒದಗಿಸಿತೊ ಅದನ್ನು ಹೇಳಿದ್ದೀವಿ. ಆಕೆ ಅದೇನಾದ್ರು ಆಗ್ಲಿ, ಆ ಚುನಾವಣೆಯಿಂದ ಅವರಿಬ್ರಿಗೂ ಒಳ್ಳೆದಾಯ್ತು, ಆಕೆ ಗೆದ್ದು ಹೋಗಿ ಪ್ರಧಾನಿಯಾದ್ರು, ವೀರೇಂದ್ರ ಪಾಟೀಲ್ ಆಕೆಯ ಸಂಪುಟದಲ್ಲಿ ಸಚಿವರಾದ್ರು. ಗ್ರಂಥದ ಭವಿಷ್ಯವಾಣಿ ಕೇಳಕ್ಕೆ ಬಂದ ಇಬ್ರಿಗೂ ಒಳ್ಳೆದಾಯ್ತು."

"ಈಗ ನೀವು ಹೇಳಿದ ಭವಿಷ್ಯ ತುಂಬ ಕುತೂಹಲಕರವಾಗಿದೆ ಸ್ವಾಮೀಜಿ."

"ಏನು ಕುತೂಹಲ?"

"ಮುಂದೆ ಬಿಜೆಪಿಗೂ ಅಷ್ಟು ಸುಲಭವಿಲ್ಲ ಅಂದಿದ್ದಿರಿ."

"ಹೌದು. ಅಷ್ಟು ಸುಲಭವಿಲ್ಲ. ಯಡಿಯೂರಪ್ಪನೋರು ಬಾಳ ಕಷ್ಟ ಪಡಬೇಕು."

"ಕಾಂಗ್ರೆಸ್ಸಿಗೂ ಅಷ್ಟು ಸುಲಭ ಇಲ್ಲ ಅಂದಿದ್ದಿರಿ."

"ಹೌದು, ಈ ಮೊದಲು ಬಂದಷ್ಟು ಸೀಟು ಬರಲ್ಲ, ಆದ್ರಿಂದ ಆ ಪಾರ್ಟಿಗೂ ಕಷ್ಟ."

"ಜೆಡಿಎಸ್‌ಗೂ ಇದೇ ಮಾತನ್ನ ಹೇಳಿದ್ದೀರಿ."

"ಹೌದು. ಯಾವ ಪಾರ್ಟಿಗೂ ಅಷ್ಟು ಸುಲಭವಿಲ್ಲ ಅಂಥ ಗ್ರಂಥದಲ್ಲಿ ಸೂಚನೆಯಿದೆ."

"ಸ್ವಾಮೀಜಿಯವರೆ, ನಿಮ್ಮ ಈ ಭವಿಷ್ಯ ನಿಮ್ಮ ಅಪೂರ್ವ ಗ್ರಂಥ ಹೇಳಬೇಕಾದ ಅಗತ್ಯವಿಲ್ಲ. ಮೂರೂ ಪಾರ್ಟಿಯಿಂದ ದುಡ್ಡು ತಗೊಂಡು ಓಟು ಮಾಡೋ ಜನಗಳೇ ಹೇಳ್ತರಲ್ಲವೆ?"

"ಅವು ಲೋಕಾಭಿರಾಮದ ಮಾತುಗಳು. ಅವಕ್ಕೆ ಯಾವುದೇ ಆಧಾರವಿರಲ್ಲ."

"ನಿಮ್ಮ ಒಂದು ಮಾತಿಗೂ ಯಾವುದೇ ಆಧಾರವಿದ್ದಂಗೆ ಕಾಣಲ್ಲ?"

"ಯಾವ ಮಾತಿಗೇ?"

"ಹಾಲುಮತ ಜನಾಂಗಕ್ಕೆ ಒಳ್ಳೆದಾಗುತ್ತೆ ಅಂದಿದ್ದಿರಿ."

"ಹೌದು ಹೇಳಿದ್ದಿನಿ."

"ಈ ಅಭಿಪ್ರಾಯನೂ ನಿಮ್ಮ ಗ್ರಂಥದಿಂದ ಮೂಡಿಬಂತೆ?"

"ಹೌದು."

"ಹಾಗಾದ್ರೆ ಕರ್ನಾಟಕದಲ್ಲಿ ಒಂದು ಸಾವಿರದ ನೂರ ಐವತ್ತ ಮೂರು ಜಾತಿ ಇದೆ. ಆ ಎಲ್ಲಾ ಜಾತಿಗಳ ಜಾತಕ ನಿಮ್ಮ ಗ್ರಂಥದಲ್ಲಿದೆಯಾ?"

"ಇದು ಶಾಸ್ತ್ರಗ್ರಂಥ. ಜಾತಿಗಣತಿ ಪುಸ್ತಕ ಅಲ್ಲ."

"ಮತ್ತೆ ಹಾಲುಮತದ ಪ್ರಸ್ತಾಪ ಬಂದಿದಿಯಲ್ಲಾ ಸ್ವಾಮೀಜಿ?"

"ಹೌದು, ಬಂದಿದೆ. ಅದಕ್ಕಾಗಿ ಹೇಳಿದೆ."

"ಬಂದಿಲ್ಲ ಸ್ವಾಮಿ. ಇದು ನಿಮ್ಮ ಜಾತಿ ಮೆದುಳಿನ ಸೃಷ್ಟಿ. ಸಿದ್ದರಾಮಯ್ಯ ಕುರುಬರ ಪೈಕಿ ಆದ್ರಿಂದ ಕುರುಬರಿಗೆ ಒಳ್ಳೆದಾಗುತ್ತೆ ಅಂತ ಮೂಢನಂಬಿಕೆ ತರ ಹೇಳಿದ್ದಿರಿ."

"ನೋಡಿ ಇವರೆ, ಮೊದಲು ನಿಮ್ಮ ತಲೆಯಿಂದ ಜಾತಿ ತೆಗೆದು ನಿಮ್ಮ ಅಭಿಪ್ರಾಯವನ್ನು ವಿಶ್ಲೇಷಣೆ ಮಾಡಿ. ಹಾಲುಮತ ಅಂದ್ರೆ ಬರೀ ಕುರುಬರಲ್ಲ, ಹೈನುಗಾರಿಕೆ ಸಮಸ್ತ ಜನಾಂಗ ಕುರಿತು ನಾವು ಹೇಳಿದ್ದು."

"ಸಾರಿ ಸ್ವಾಮಿ, ಕುರುಬರು ಕುರುಬ ಅಂತ ಹೇಳಿಕಳಕ್ಕೆ ಹಿಂಜರಿದು ಹಾಲುಮತ ಅಂತ ಹೇಳಿಕತ್ತರೆ. ಕುರುಬರು ಬಿಟ್ಟು ಇನ್ಯಾರು ಹಾಲುಮತ ಅಂತ ಕರಕಳಲ್ಲ."

"ನಾವು ಹೇಳಿದ್ದೂ ಹಾಲುಮತದ ಬಗ್ಗೆ."

"ಆಯ್ತು, ಮುಂದೆ ಖರ್ಗೆ ಅಥವಾ ಪರಮೇಶ್ವರ್ ಮುಖ್ಯಮಂತ್ರಿಯಾದಾಗ ಹರಿಜನರಿಗೆ ಒಳ್ಳೆ ಯೋಗ ಅಂತ ಹೇಳ್ತಿರಾ?"

"ಗ್ರಂಥದಲ್ಲಿ ಬಂದ್ರೆ ಹೇಳ್ತಿವಿ."

"ನಿಮ್ಮ ಗ್ರಂಥ ಬರೀ ಬಿಜೆಪಿ, ಕಾಂಗ್ರೆಸ್, ದಳದ ರಾಜಕಾರಣವೇ ಹೇಳ್ತದಲ್ಲ, ಸಿಪಿಐ, ಸಿಪಿಎಂ, ಜೆಡಿಯು ಬಗ್ಗೆ ಯಾಕೆ ಸ್ವಾಮಿ ಹೇಳಲ್ಲ?"

"ಮತ್ತೆ ಅದೇ ಪ್ರಶ್ನೆ ಕೇಳ್ತಿರಲ್ರೀ? ಗ್ರಂಥದಲ್ಲಿ ಯಾವ ಸೂಚನೆ ಉದ್ಭವವಾಗುತ್ತೋ ಅದನ್ನು ಹೇಳ್ತಿವಿ."

"ಕಳೆದ ವರ್ಷ ಈ ರಣಬೇಸಿಗೆ ಬಗ್ಗೆ ನಿಮ್ಮ ಗ್ರಂಥ ಹೇಳಬಹುದಿತ್ತು. ಯಾಕೆ ಋತುಮಾನದ ಬಗ್ಗೆ ನಿಮ್ಮ ಗ್ರಂಥ ಬಹಳ ಅಜ್ಞಾನದಿಂದ ಕೂಡಿದೆ?"


"ಈ ಗ್ರಂಥದ ಸೂಚನೆಗಳನ್ನು ಸರಿಯಾಗಿ ಯಾರು ಗ್ರಹಿಸಲ್ವೋ ಅವರು ಅಜ್ಞಾನಿಗಳು."


"ನಿಮ್ಮನ್ನು ನೀವೇ ಬೈಕೊಳ್ತಿರಲ್ಲ ಸ್ವಾಮಿ?"


"ಏನು ಹೇಳ್ತಾಯಿದ್ದಿರಿ ನೀವು?"

"ಅಲ್ಲ ಸ್ವಾಮೀ, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದರಿಂದ ಆ ಜನಕ್ಕೆ ಒಳ್ಳೆದಾಗುತ್ತೆ ಅಂತ ಹೇಳ್ತಿರಲ್ಲಾ. ಇಂತಹ ಮಾತನ್ನು ಕುಮಾರಸ್ವಾಮಿನೊ, ಶಿವಲಿಂಗೇಗೌಡನೋ ಹೇಳಿದ್ರೆ ಅದಕ್ಕೊಂದು ಅರ್ಥ ಇರದು. ನೀವು ಹೇಳಿದ್ರಲ್ಲಾ ಅದ್ಕೆ ಕೇಳಬೇಕಾಯ್ತು, ಇನ್ನ ಮುಂದೆ ಅಜ್ಞಾನದ ಅಭಿಪ್ರಾಯಗಳನ್ನು ನಿಮ್ಮ ಗ್ರಂಥದ ಮೇಲೆ ಹಾಕಬೇಡಿ. ನಿಮ್ಮ ಸ್ವಂತ ವಾಕ್ಯ ಅನ್ನಿ. ಆಯ್ತಾ ಸ್ವಾಮಿ? ಹಾಗೆ ನಿಮ್ಮ ಪ್ರಾಂತ್ಯದಲ್ಲಿ ದನ, ಆಡು, ಕುರಿಗೆ ನೀರಿಲ್ದೆ ಲಗೇಜ್ ಆಟೋದಲ್ಲಿ ನೀರು ತಗಂಡೋಗಿ ಕುಡುಸ್ತಾಯಿದಾರೆ. ಈ ಹಾಳು ರಾಜಕಾರಣ ಬಿಟ್ಟು ಬರದ ಬಗ್ಗೆ ಭವಿಷ್ಯ ಹೇಳಿ. ಜನಗಳ ಕಷ್ಟ, ಸುಖದಲ್ಲಿ ಭಾಗಿಯಾಗಿ. ಬರೀ ಕಾಗೆ ಶಕುನದಿಂದ ಏನೂ ಪ್ರಯೋಜನ ಇಲ್ಲ, ಆಯ್ತಾ ಸ್ವಾಮೀ? ಹಲೋ? ಹಲೋ? ಹಲೋ?"

"ಥೂತ್ತೇರಿ!!!" ■


ನರೇಂದ್ರ ಮೋದಿ


ಬಂಡಾರು ದತ್ತಾತ್ರೇಯ


ಅರುಣ್ ಜೇಟ್ಲಿ

ಮೋದಿ ದ್ರೋಹ, ಉಡಾಫೆ ಮತ್ತು ಪೋಲೀಸ್‌ಗಿರಿ

ಗಾರ್ಮೆಂಟ್ ಕಿಚ್ಚಿಗೆ ಯಾರು ಹೊಣೆ?

ನರೇಂದ್ರ ಮೋದಿ ಪ್ರಧಾನಿಯಾದರೆ ಈ ನೆಲದ ಬಡ, ಶ್ರಮಿಕ ಮತ್ತು ಮಧ್ಯಮ ವರ್ಗಗಳ ಮೇಲೆ ಏನೇನು ಅನಾಹುತಗಳು ಎರಗಬಹುದೆಂದು ಅಂದಾಜಿಸಲಾಗಿತ್ತೊ ಅವೆಲ್ಲವೂ ಒಂದೊಂದಾಗಿ ನಿಜವಾಗುತ್ತಿವೆ. ಮೊನ್ನೆಮೊನ್ನೆಯಷ್ಟೆ ಬೆಂಗಳೂರಿನಲ್ಲಿ ಭುಗಿಲೆದ್ದ ಗಾರ್ಮೆಂಟ್ ನೌಕರರ ಆಕ್ರೋಶ ಇದಕ್ಕೆ ಒಂದು ಸೂಕ್ತ ಸ್ಯಾಂಪಲ್.

ಎರಡು ದಿನಗಳ ಕಾಲ ಸಿಲಿಕಾನ್ ಸಿಟಿಯನ್ನೇ ತತ್ತರಿಸುವಂತೆ ಮಾಡಿದ ಅಜಮಾಸು ನಾಲ್ಕು ಲಕ್ಷ ಬಡ ಕಾರ್ಮಿಕರ ಆ ಆಕ್ರೋಶದಲ್ಲಿ ಮೂರು ಆಯಾಮಗಳನ್ನು ಕಾಣಬಹುದು. ಮೊದಲನೆಯದ್ದು ಕೇಂದ್ರ ಸರ್ಕಾರದ ಕಾರ್ಮಿಕದ್ರೋಹಿ ನೀತಿ, ಎರಡನೆಯದ್ದು ಅದೇ ಕೇಂದ್ರ ಸರ್ಕಾರದಿಂದ ಈ ವಿಚಾರವಾಗಿ ವ್ಯಕ್ತವಾದ ಉಡಾಫೆ ಮತ್ತು ಆ ಮೂಲಕ ಕಾರ್ಮಿಕರ ನಡುವೆ ಹರಿದಾಡಿದ ಗೊಂದಲಗಳ ಮಹಾಪೂರ ಮತ್ತು ಮೂರನೆಯದ್ದು ಪೊಲೀಸ್ ದುರ್ವರ್ತನೆಯ ವಿರುದ್ಧ ಘನೀಕರಿಸಿದ ಸಿಟ್ಟು!

ಅಪಶಕುನದ ಅಚ್ಛೇ ದಿನ್

2014ರ ಲೋಕಸಭಾ ಚುನಾವಣೆಯ ವೇಳೆಗಾಗಲೆ, ಯುಪಿಎ-2 ಸರ್ಕಾರ ಇನ್ನಿಲ್ಲದಂತೆ ಕನಲಿಹೋಗಿತ್ತು. ಸಾಲುಸಾಲು ಹಗರಣಗಳು ಮನಮೋಹನ್ ಸಿಂಗ್ ಸರ್ಕಾರವನ್ನು ಅಡ್ಡಡ್ಡ ಮಲಗಿಸಲು ಸಜ್ಜಾಗಿ ಕೂತಿದ್ದವು. ಜನ ಪರ್ಯಾಯ ಆಯ್ಕೆಯತ್ತ ನೋಡುತ್ತಿದ್ದರು. ಅಂತಹ ಸಂದರ್ಭದಲ್ಲೇ ಕಮಲದೊಳಗೆ ಪಕ್ಷಭೀಷ್ಮರನ್ನೇ ಕಡೆಗಣಿಸಿ ಮುಂಚೂಣಿಗೆ ಬಂದದ್ದು ಮೋದಿ. ಕಾರ್ಪೊರೇಟ್ ಮತ್ತು ಮೀಡಿಯಾ ಧಣಿಗಳ ನಡುವೆ ದಿಕ್ಕೆಟ್ಟ ಭಾರತೀಯರ ಮೇಲೆ ದಾಳಿಯಿಟ್ಟ ಮೋದಿಯ ಬಳಿ ಇದ್ದದ್ದು ಒಂದೇ ಅಸ್ತ್ರ ಅದು ಮಾತು! ಮಾತು!! ಮಾತು!!! ಕಪ್ಪುಹಣ ವಾಪಾಸ್ ತಂದು ಪ್ರತಿ ಭಾರತೀಯನ ಅಕೌಂಟಿಗೆ ತಲಾ ಹದಿನೈದು ಲಕ್ಷ ತುಂಬಿಸಿಬಿಡ್ತೇನೆ, ಅಗತ್ಯ ದಿನಸಿ ಬೆಲೆಗಳನ್ನು ನೆಲಕ್ಕೆ ಇಳಿಸಿಬಿಡ್ತೇನೆ, ಪೆಟ್ರೋಲ್-ಡೀಸೆಲ್‌ಗಳನ್ನು ನೀರಿನಷ್ಟೆ ಸರಾಗವಾಗಿ ತಂದು ಸುರೀತೇನೆ ಅಂತೆಲ್ಲ ಬಡ ಮತ್ತು ಮಧ್ಯಮ ವರ್ಗಗಳನ್ನು ಟಾರ್ಗೆಟ್ ಮಾಡಿಕೊಂಡು ಮಾತುಗಾರ ಮೋದಿ ತೇಲಿಬಿಟ್ಟ 'ಅಚ್ಚೇ ದಿನ್' ಕಾನ್ಸೆಪ್ಟು ಜನರನ್ನು ಸುಲಭವಾಗಿ ಆಕರ್ಷಿಸಿತು. ಮೋದಿಯನ್ನು ಪ್ರಧಾನಿ ಗಾದಿಯಲ್ಲಿ ಕೂರಿಸಿಯೇ ಬಿಟ್ಟಿತು.

ಪ್ರಧಾನಿಯಾದ ನಂತರ ಮೋದಿ ಆದ್ಯತೆಯ ಮೇಲೆ ಕೈಗೆತ್ತಿಕೊಂಡದ್ದು ಕಾರ್ಪೊರೇಟ್ ಕಂಪನಿಗಳ ಚಾಕರಿಯನ್ನು. ಮೇಕ್ ಇನ್ ಇಂಡಿಯಾ ಹೆಸರಲ್ಲಿ ಆತ ದೇಶವಿದೇಶಕ್ಕೆ ಅಲೆದಾಡಿ ಬಂದದ್ದು ಅಂಬಾನಿ, ಅದಾನಿಗಳಿಗೆ ಬಿಸಿನೆಸ್ ಡೀಲ್‌ಗಳನ್ನು ಕುದುರಿಸಿಕೊಡಲೇ ವಿನಾಃ ಇಂಡಿಯಾದ ಅಂಗಳಕ್ಕೆ ಅಚ್ಛೇ ದಿನ್‌ಗಳನ್ನು ತಂದು ಚೆಲ್ಲುವುದಕ್ಕಲ್ಲ. ಆಮೇಲಾದರೂ ಮೋದಿ 'ಸಾಹೇಬ್' ಬಡವರತ್ತ ಗಮನ ಹರಿಸಿದನೇ ಎಂದರೆ ಅದೂ ಇಲ್ಲ. ಎರಡನೇ ಪ್ರಾಶಸ್ತ್ಯದಲ್ಲಿ ಮೋದಿ ಸರ್ಕಾರ ಕೈಗೆತ್ತಿಕೊಂಡದ್ದು ಜಾತ್ಯತೀತ ನೆಲದ ವಿಕೃತ ಕೇಸರೀಕರಣವನ್ನು. ತಾವು ಯುಪಿಎ ಬಾಣಲೆಯಿಂದ ಹಾರಿ ಮೋದಿ ಬೆಂಕಿಗೆ ಆಹುತಿಯಾಗುತ್ತಿರೋದನ್ನು ಗ್ರಹಿಸುವುದಕ್ಕೆ ಜನರಿಗೆ ದೀರ್ಘಕಾಲವೇನೂ ಬೇಕಾಗಲಿಲ್ಲ.

ಮೋದಿ ಮತ್ತು ಬಿಜೆಪಿ ಬಗೆಗಿದ್ದ ಜನರ ಭರವಸೆ ರಭಸವಾಗಿಯೇ ಕರಗಲು ಶುರುವಾಗಿತ್ತಾದರೂ ಅದನ್ನು ಒಪ್ಪಿಕೊಳ್ಳುವ ಮನಸ್ಥಿತಿಯಲ್ಲಿ ಮೋದಿ ದರ್ಬಾರ್ ಇರಲಿಲ್ಲ. ಅಂತವರಿಗೆ ಸತ್ಯವನ್ನು ಅರ್ಥಮಾಡಿಸಿದ್ದು ಬಿಹಾರ ಚುನಾವಣೆ. ತಮ್ಮ ಕೇಸರಿ ಕಿತಾಪತಿ ವಿರುದ್ಧ ಜನ ಆಕ್ರೋಶಗೊಳ್ಳುತ್ತಿರುವುದನ್ನು ಮಾತ್ರವಲ್ಲ, ತಮ್ಮ ವಿರುದ್ಧ ಜಾತ್ಯತೀತ ಶಕ್ತಿಗಳು ಒಗ್ಗೂಡುತ್ತಿರುವ ವಾಸ್ತವ ಮೋದಿ ಬಳಗವನ್ನು ಕುಕ್ಕಿದ್ದೇ ಆಗ. ಸ್ವಚ್ಛ ಭಾರತದಂತಹ 'ಮರು'ನಾಮಾಂಕಿತ ಯೋಜನೆಗಳೂ ತಮ್ಮ ಹೊಳಪು ಕಳೆದುಕೊಳ್ಳುತ್ತಿರುವ ಹೊತ್ತಿನಲ್ಲಿ. ಹೇಗಾದರು ಮಾಡಿ ಒಂದಷ್ಟು 'ಜನಪ್ರಿಯ'ತೆ ಕಾಯ್ದುಕೊಳ್ಳಬೇಕೆನ್ನುವ ರಾಜಕೀಯ ಹಪಾಹಪಿ ಮೋದಿ ಸರ್ಕಾರಕ್ಕೆ ಶುರುವಾಯ್ತು, ಕಪ್ಪುಹಣ ವಾಪಾಸ್ ತರೋದು ಹೇಗೂ ತಮ್ಮಿಂದ ಸಾಧ್ಯವಿಲ್ಲ ಅನ್ನೋದನ್ನು ಚೆನ್ನಾಗಿಯೇ ಅರಿತಿದ್ದ ಮೋದಿ, ಸದ್ಯದ ಮಟ್ಟಿಗೆ ಜನರನ್ನು ತಣಿಸುವಂತಹ ಒಂದೆರಡು 'ಜನಪ್ರಿಯ' ಯೋಜನೆಗಳನ್ನು ಅನುಷ್ಠಾನಕ್ಕೆ ತಂದು ಕುಸಿದುಹೋಗುತ್ತಿರುವ ವರ್ಚಸ್ಸನ್ನು ಉಳಿಸಿಕೊಳ್ಳುವ ಹುನ್ನಾರ ನಡೆಸಿದ್ದ. ಹಿರಿಯ ನಾಗರಿಕರಿಗೆ 'ಆಕರ್ಷಕ' ಪಿಂಚಣಿ ನೀಡುವುದೂ ಅವುಗಳಲ್ಲಿ ಒಂದಾಗಿತ್ತು.

ಒನ್ಸ್‌ಎಗೇನ್, ಈ ಯೋಜನೆಗಳಿಗೆ ಹಣ ಹೊಂದಿಸುವುದೆಲ್ಲಿಂದ ಅನ್ನೊ ಪ್ರಶ್ನೆ ಸರ್ಕಾರದ ಮುಂದೆ ಬಂತು. ಈಗಾಗಲೇ ಸ್ವಚ್ಛ ಭಾರತ ಸೆಸ್, ಜಿಎಸ್‌ಟಿ ಟ್ಯಾಕ್ಸ್, ಎಲ್‌ಪಿಜಿ ಸಬ್ಸಿಡಿ ಕತ್ತರಿ ಅಂತ ಜನರ ಜೇಬಿಗೆ ನೇರವಾಗಿ ಕೈಯಿಟ್ಟು ಅನುಮಾನಕ್ಕೀಡಾಗಿರುವ ಹೊತ್ತಿನಲ್ಲಿ ಮತ್ತೊಮ್ಮೆ ತೆರಿಗೆ ವಗೈರಾಗಳ ಮೂಲಕ ಜನರನ್ನು ರೊಚ್ಚಿಗೇಳಿಸುವುದಕ್ಕಿಂತ ಜನರಿಗೇ ಅಷ್ಟಾಗಿ ಅರಿವಿರದೆ ಸರ್ಕಾರದ ಬೊಕ್ಕಸದಲ್ಲಿ ಬೆಚ್ಚಗೆ ಬಿದ್ದುಕೊಂಡಿರುವ ಯಾವುದಾದರು ಗಂಟುಗಳನ್ನು ಬಳಸಿಕೊಂಡರಾಯ್ತು ಅನ್ನೋ ಜಾಣ್ಮೆಯ ಐಡಿಯಾವನ್ನು ಕೇಂದ್ರ 'ಲೆಕ್ಕದಯ್ಯ' ಅರುಣ್ ಜೇಟ್ಲಿ ಮೋದಿಯ ತಲೆಗೆ ತುಂಬಿದ್ದ. ಆಗ ಅವರ ಕಣ್ಣಿಗೆ ಬಿದ್ದದ್ದೇ ದುಡಿಯುವ ಕೈಗಳ ಪಿಎಫ್ ನಿಧಿ!


ಕಾರ್ಮಿಕರು ಸುಟ್ಟು ಹಾಕಿರುವ ಬಸ್ಸು

ಬಜೆಟ್‌ನಲ್ಲೇ ಬಯಲಾಯ್ತು

ಕಾರ್ಮಿಕ ಭವಿಷ್ಯ ನಿಧಿ ಖಾತೆಯಲ್ಲಿ ಒಟ್ಟು 8.6 ಲಕ್ಷ ಕೋಟಿ ರೂಪಾಯಿಗೂ ಹೆಚ್ಚಿಗೆ ಹಣವಿದೆ. ಅದರಲ್ಲಿ ಅಜಮಾಸು 64 ಸಾವಿರ ಕೋಟಿಯಷ್ಟು ಹಣಕ್ಕೆ ವಾರಸುದಾರರೇ ಇಲ್ಲ. ಲೆಕ್ಕದಯ್ಯ ಅರುಣ್ ಜೇಟ್ಲಿ ಈ ಸಲದ ಬಜೆಟ್ ರೂಪಿಸುವಾಗ ಮತ್ತೆ ಮತ್ತೆ ಆ ಪಿಎಫ್ ಹಣದ ಮೇಲೆ ಕಣ್ಣಿಟ್ಟೇ ಲೆಕ್ಕಾಚಾರ ಗೀಚಿದ್ದ. ಬಜೆಟ್‌ನಲ್ಲಿ ಅದಕ್ಕೆ ಸಾಕಷ್ಟು ಪುರಾವೆಗಳೂ ಸಿಕ್ಕಿದ್ದವು. ಕಾರ್ಮಿಕರು ತಮ್ಮ ನಿವೃತ್ತ ಬದುಕನ್ನು ರೂಪಿಸಿಕೊಳ್ಳುವುದಕ್ಕಾಗಿ ನೆರವಾಗಲೆಂದು ಕೂಡಿಟ್ಟ ಪಿಎಫ್ ಹಣವನ್ನು ವಾಪಾಸ್ ಪಡೆಯುವಾಗ, ಡ್ರಾ ಮಾಡುವ ಒಟ್ಟು ಮೊತ್ತದ ಶೇ.60ರಷ್ಟರ ಮೇಲೆ ತೆರಿಗೆ ವಿಧಿಸಲಾಗುತ್ತೆ ಅನ್ನೋ ತುಘಲಕ್ ಫರ್ಮಾನನ್ನು ಅರುಣ್ ಜೇಟ್ಲಿ ಸಂಸತ್‌ನಲ್ಲಿ ನಿಂತು ಓದಿದಾಗಲೇ ಜನ ರೊಚ್ಚಿಗೆದ್ದಿದ್ದರು. ಭಾರೀ ಟೀಕೆ, ಪ್ರತಿರೋಧಗಳು ವ್ಯಕ್ತವಾದ ಬೆನ್ನಿಗೆ ಅಂತಹ ಅಸಂಬದ್ಧ ಪ್ರಸ್ತಾಪದಿಂದಲೇ ಹಿಂದೆ ಸರಿದ ಮೋದಿ ಸರ್ಕಾರ ಪಿಎಫ್ ಗಂಟಿನ ಮೇಲಿಟ್ಟಿದ್ದ ಕಣ್ಣನ್ನು ಮಾತ್ರ ಕದಲಿಸಿರಲಿಲ್ಲ.


ಕೇಂದ್ರ ಕಾರ್ಮಿಕ ಮಂತ್ರಿ ಬಂಡಾರು ದತ್ತಾತ್ರೇಯನನ್ನು ಮುಂದಿಟ್ಟುಕೊಂಡು ಅರುಣ್ ಜೇಟ್ಲಿ ಹೊಸ ತಂತ್ರವೊಂದನ್ನು ಹೆಣೆದಿದ್ದ. 'EPF' Withdrawal rules 2016 ಎಂಬ ಹೊಸ ನೀತಿಗಳ ಕರಡನ್ನು ತಯಾರು ಮಾಡಿದ ಮೋದಿ ಸರ್ಕಾರ ಬಡ ಕಾರ್ಮಿಕರ ಮೇಲೆ ಮರ್ಮಾಘಾತಕ್ಕೆ ಅಣಿಯಾಗಿತ್ತು. ಮೊದಲಿನಿಂದಲೂ ಜನಪರ ಚಳವಳಿ, ಕಾರ್ಮಿಕ ಹೋರಾಟಗಳನ್ನು ಕ್ಷುಲ್ಲಕ, 'ದೇಶವಿರೋಧಿ' ಚಟುವಟಿಕೆಗಳು ಅಂತಲೇ ಪರಿಭಾವಿಸಿಕೊಂಡೇ ಬಂದಿರುವ ಬಿಜೆಪಿಗಳಿಗೆ ಪಿಎಫ್‌ಗೆ ಕೈಹಾಕುವುದು ಸಲೀಸಿನ ಕೆಲಸ ಅಂತಲೇ ಭಾವಿಸಿರಬೇಕು. ಅದಕ್ಕೆಂದೇ ಹೊಸ ನೀತಿಯಲ್ಲಿ ಪಿಎಫ್‌ನ ನಿಜವಾದ ಉಪಯೋಗ ಕಾರ್ಮಿಕರಿಗೆ ದಕ್ಕದಂತೆ ಮಾಡಲು ಹುನ್ನಾರಗಳನ್ನು ಹೆಣೆಯಲಾಗಿತ್ತು.

ಹೊಸ ನಿಯಮಗಳೇನು

ಕೇಂದ್ರ ಸರ್ಕಾರ ತರಲು ಉದ್ದೇಶಿಸಿರುವ ಕಾರ್ಮಿಕ ವಿರೋಧಿ ಪಿಎಫ್ ನೂತನ ನಿಯಮಗಳಿಗಿಂತ ಮುನ್ನ ಭವಿಷ್ಯ ನಿಧಿಯನ್ನು ಲೆಕ್ಕಹಾಕುವ, ಕ್ರೋಢೀಕರಿಸುವ ಪರಿಯನ್ನು ಅರ್ಥಮಾಡಿಕೊಳ್ಳಬೇಕಿದೆ. Employees' Provident Funds Scheme, 1952 ರ ಪ್ರಕಾರ 20 ಅಥವಾ ಅದಕ್ಕಿಂತ ಹೆಚ್ಚಿನ ನೌಕರರು ಕೆಲಸ ಮಾಡುವ ಯಾವುದೇ ಸಂಸ್ಥೆ ಅಥವಾ ಕಂಪನಿ ತನ್ನ ಸಿಬ್ಬಂದಿಗಳಿಗೆ ಪಿಎಫ್ ಸೌಲಭ್ಯವನ್ನು ಒದಗಿಸಲೇಬೇಕು. ಪಿಎಫ್‌ನಲ್ಲಿ ನಾಲ್ಕು ಘಟಕಗಳಿರುತ್ತವೆ.

1. ನೌಕರನ ಪಾಲು
2. ಕಂಪನಿ/ಯಜಮಾನನ ಪಾಲು
3. ನೌಕರನ ಪಾಲಿನ ಮೇಲಿನ ಬಡ್ಡಿ
4. ಕಂಪನಿ ಪಾಲಿನ ಮೇಲಿನ ಬಡ್ಡಿ

ತನ್ನ ಮೂಲವೇತನದ ಶೇ.12ರಷ್ಟನ್ನು ನೌಕರನ ಸಂಬಳದಿಂದ ಹಾಗೂ ಅಷ್ಟೇ ಪ್ರಮಾಣದ ಮೊತ್ತವನ್ನು ಕಂಪನಿಯಿಂದ ಸೇರಿಸಿ ನೌಕರನ ಪಿಎಫ್ ಅಕೌಂಟಿಗೆ ಜಮಾ ಮಾಡಲಾಗುತ್ತೆ. ಇಲ್ಲೀವರೆಗೆ ಇದ್ದ ಪಿಎಫ್ ನಿಯಮದ ಪ್ರಕಾರ ನೌಕರನೊಬ್ಬ ಕೆಲಸ ಬಿಟ್ಟು ಎರಡು ತಿಂಗಳು ನಿರುದ್ಯೋಗಿಯಾದ ನಂತರ ತನ್ನ ಇಪಿಎಫ್ ಖಾತೆಯಲ್ಲಿರುವ ಸಂಪೂರ್ಣ ಹಣವನ್ನು ಪಡೆಯಬಹುದಾಗಿತ್ತು. ಅಸಂಘಟಿತ ವಲಯದಲ್ಲಿರೋ ಇಂಡಿಯಾದ ಸುಮಾರು 42 ಕೋಟಿ ಶ್ರಮಿಕಜೀವಿಗಳು ತಮ್ಮ ಬದುಕಿನಲ್ಲಿ ಮನೆ ಕಟ್ಟಿಕೊಳ್ಳಲೊ, ಮಕ್ಕಳ ಮದುವೆಗೋ, ವಿದ್ಯಾಭ್ಯಾಸಕ್ಕೋ ಅಥವಾ ಅನಾರೋಗ್ಯದ ಚಿಕಿತ್ಸೆಗೋ ಈ ಹಣವನ್ನು ಉಪಯೋಗಿಸಿಕೊಳ್ಳುತ್ತಾ ಬಂದಿದ್ದಾರೆ. ಅದರಲ್ಲೂ ಸಣ್ಣಪುಟ್ಟ ಫ್ಯಾಕ್ಟರಿ ಮತ್ತು ಗಾರ್ಮೆಂಟ್‌ಗಳಲ್ಲಿ ಕೆಲಸ ಮಾಡುವ ಆರರಿಂದ ಏಳೆಂಟು ಸಾವಿರ ರೂಪಾಯಿ ಸಂಬಳ ಪಡೆಯುವ ಕಾರ್ಮಿಕರಿಗೆ ಈ ಪಿಎಫ್ ನಿಧಿ ಎನ್ನುವುದು 'ಎಮರ್ಜೆನ್ಸಿ ಫಂಡ್' ಇದ್ದಂತೆ. ಎಷ್ಟೋ ಬಾರಿ ಮೇಲೆರಗಿದ ಆರ್ಥಿಕ ಸಂಕಷ್ಟದಿಂದ ಪಾರಾಗಲು ಪಿಎಫ್ ದೊರೆಯುತ್ತೆ ಎಂಬ ಒಂದೇಒಂದು ಕಾರಣಕ್ಕೆ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಪಿಎಫ್ ಹಣ ಪಡೆಯುವ ಪರಿಪಾಟ ಈ ವರ್ಗಗಳಲ್ಲಿ ಸಾಮಾನ್ಯವಾಗಿದೆ.


ಮಹಿಳಾ ಕಾರ್ಮಿಕರ ಮೇಲೆ ಪೊಲೀಸರ ಪ್ರಹಾರ


ಕೇಂದ್ರ ಸರ್ಕಾರ ಮೇ 1ರಂದು ತಾರೀಕು ಜಾರಿ ತರಲು ಹೊರಟಿದ್ದ ಹೊಸ ನೀತಿ ಬಡ ಕಾರ್ಮಿಕರ ಆರ್ಥಿಕ ಸೆಲೆಯನ್ನೇ ಬತ್ತಿಸುವ ಹುನ್ನಾರದ್ದಾಗಿದೆ. ಅದ ಪ್ರಕಾರ ಇನ್ಮುಂದೆ ಒಬ್ಬ ಸಿಬ್ಬಂದಿ ಕೆಲಸ ಬಿಟ್ಟನೆಂದ ಎರಡು ತಿಂಗಳ ನಂತರ ಅವನ ಪಿಎಫ್ ಖಾತೆಯಲ್ಲಿರು ಸಂಪೂರ್ಣ ಹಣವನ್ನು ವಾಪಾಸ್ ಪಡೆಯುವುದಕ್ಕೆ ಅಸ್ಪದ ಇರುವುದಿಲ್ಲ. ಏನಿದ್ದರೂ ಪಿಎಫ್‌ನಲ್ಲಿ ತನ್ನ ಸಂಬಳದಿಂ ಹೂಡಿಕೆಯಾದ ಮೊತ್ತ ಮತ್ತು ಅದರ ಮೇಲಿ ಬಡ್ಡಿಯನ್ನಷ್ಟೇ ಆತ ಪಡೆಯಬಹುದು. ಉಳಿದ ಅರ್ಧ (ಕಂಪನಿಯ ಪಾಲು) ಮೊತ್ತಕ್ಕಾಗಿ ಆತ ನಿವೃತ್ತಿ ವಯಸ 58 ವರ್ಷ ಆಗುವವರೆಗೆ ಕಾಯಲೇಬೇಕು!

ಸಿದ್ಧ ಉಡುಪು ತಯಾರಿಕೆಯಂತಹ ಸಣ್ಣ ಉದ್ದಿಮೆಗ ಕಾರ್ಮಿಕರ ಸಂಬಳ ಮಹಾನಗರಗಳ ತೆಕ್ಕೆಯ ಯಾವುದಕ್ಕೂ ಸಾಕಾಗುವುದಿಲ್ಲ. ಹಾಗಾಗಿ ಸಾಲ ಅವ ಮೇಲೆ ಸಲೀಸಾಗಿ ಬೆಳೆದುಬಿಡುತ್ತದೆ. ಸಾಲ ಮಾಡು ಅವರ ಧೈರ್ಯದ ಮೂಲವೂ ಪಿಎಫ್ ಹಣ ಭರವಸೆಯೇ ಆಗಿರುತ್ತದೆ. ಅಲ್ಲದೇ ಸತತ ಐದು ವರ್ಷಗ ಕಾಲ ಕೆಲಸಕ್ಕೆ ನೇಮಿಸಿಕೊಂಡರೆ ಅವರಿಗೆ ಗ್ರ್ಯಾಚು ಕೊಡಬೇಕಾಗುತ್ತದೆನ್ನುವ ಕಾರಣಕ್ಕೆ ಕಂಪನಿಗಳು ಮೂರ್ನಾ ವರ್ಷಗಳಿಗೊಮ್ಮೆ ನೌಕರರನ್ನು ಕೆಲಸದಿಂದ ಕಿತ್ತೊಗೆದ ಮತ್ತೆ ನೇಮಿಸಿಕೊಳ್ಳುತ್ತಿರುತ್ತವೆ. ಈ ವಲಯವನ್ನು ಇನ್ ಸೂಕ್ಷ್ಮವಾಗಿ ಗಮನಿಸಿದರೆ ಇಲ್ಲಿ ಕೆಲಸ ಮಾಡು ಬಹುಪಾಲು ಜನರಲ್ಲಿ ಮದುವೆ ವಯಸ್ಸಿನ ಬಡ ಅಥವ ಮಧ್ಯಮ ವರ್ಗದ ಯುವತಿಯರೇ ಆಗಿರುತ್ತಾರೆ. ತಿಂಗ ಸಂಬಳದ ಜೀವನ ನಿರ್ವಹಣೆಯ ಜೊತೆಗೆ ಲಭಿಸು ಪಿಎಫ್ ಹಣ ಅವರ ಮದುವೆಗೆ ನೆರವಾಗುತ್ತದೆನ್ನು ನಿರೀಕ್ಷೆ ಅವರ ಹೆತ್ತವರದ್ದಾಗಿರುತ್ತದೆ. ಅಂತಹದ್ದರಲ್ಲಿ ಹಣದ ಅರ್ಧದಷ್ಟಕ್ಕಾಗಿ ಇವರೆಲ್ಲಾ 58ನೇ ವಯಸ್ಸಿನವರೆ ಕಾಯಬೇಕೆನ್ನುವುದು ಯಾವ ನ್ಯಾಯ?

ಸರ್ಕಾರ ಹೇಳುವುದೇನೆಂದರೆ, ಪಿಎಫ್ ನಿಧಿಯನ ಸ್ಥಾಪಿಸಿರುವುದೇ ನೌಕರರ ನಿವೃತ್ತ ಜೀವನಕ್ಕೆ ಭದ್ರ ದಕ್ಕಿಸಿಕೊಡಲು; ಅಂತದ್ದರಲ್ಲಿ ಎಲ್ಲವನ್ನೂ ಈಗಲೇ ಇವರ ಖರ್ಚು ಮಾಡಿಕೊಂಡರೆ ಪಿಎಫ್ ಸ್ಥಾಪನೆಯ ಉದ್ದೇಶವ ಈಡೇರಿದಂತಾಗುವುದಿಲ್ಲ. ಸರ್ಕಾರಕ್ಕೆ ನಿಜಕ್ಕೂ ಕಾರ್ಮಿಕ ಬಗ್ಗೆ ಈ ಪರಿ ಕಾಳಜಿ ಇದ್ದರೆ ಮೊದಲು ಅವರಿಗೆ ಕನಿ ವೇತನ ನಿಗದಿ ಮಾಡಬೇಕಲ್ಲವೇ? Minimum Wages Act, 1948, ಕಾಯ್ದೆಯು ಕನಿಷ್ಠ ವೇತನವನ ನಿಗದಿ ಮಾಡುವ ಹಕ್ಕನ್ನು ಕೇಂದ್ರ ಮತ್ತು ರಾ ಸರ್ಕಾರಗಳಿಗೆ ಪ್ರತ್ಯೇಕವಾಗಿ ನೀಡಿದೆಯಾದರು ಅದರ ಯಾವ ಸರ್ಕಾರವೂ ಬದ್ಧತೆಯನ್ನು ತೋರಿಸಿಲ್ಲ. 4 ಉದ್ಯೋಗ ವರ್ಗಗಳನ್ನು ಪರಿಗಣಿಸಿ ಕನಿಷ್ಟ ವೇತನವನ ನಿಗದಿಪಡಿಸುವ ಹಕ್ಕು ಕೇಂದ್ರ ಸರ್ಕಾರದ್ದಾಗಿದ್ದರೆ ಸುಮಾರು 1679 ವರ್ಗಗಳನ್ನು ಪರಿಗಣಿಸಿ ಕನಿಷ್ಠ ವೇತನ ನಿಗದಿಪಡಿಸುವ ಹಕ್ಕು ರಾಜ್ಯ ಸರ್ಕಾರದ್ದು. ಸರ್ಕಾರಗಳ ಕನಿಷ್ಠ ವೇತನವನ್ನು ಮಾನದಂಡಿಸಿ ಘೋಷಿಸುತ್ತವಾದರು ಅವನ್ನು ಕಡ್ಡಾಯ ಕಾನೂನುಗೊಳಿಸುವುದಕ್ಕೆ ಕೈಹಾಕುವುದ ಇಲ್ಲ. ಕಳೆದ ವರ್ಷವಷ್ಟೇ ಇದೇ ಬಂಡಾರು ದತ್ತಾತ್ರೇಯ ಸಚಿವಾಲಯ ದಿನವೊಂದಕ್ಕೆ ಕನಿಷ್ಠ 273 ರೂಪಾಯಿ ಅಥವಾ ತಿಂಗಳಿಗೆ 7,100 ರೂಪಾಯಿ ಕನಿಷ್ಠ ವೇತನ ಅಂತ ಘೋಷಣೆ ಮಾಡಿತ್ತು. ಈ ವೇತನ ನಿಯಮ ಪಾಲಿಸುವುದು ಉದ್ಯೋಗದಾತರಿಗೆ ಕಡ್ಡಾಯವೇನೂ ಅಲ್ಲ ಅಸಲಿಗೆ ಸುಪ್ರೀಮ್ ಕೋರ್ಟ್‌ನ ಮಾನದಂಡಗಳು ಮತ್ತು 1957ರ ಭಾರತೀಯ ಕಾರ್ಮಿಕ ಸಮ್ಮೇಳನದ ಮಾನದಂಡಗಳನ್ನು ಪರಿಗಣಿಸಿ ಇವತ್ತಿನ ಪ್ರಸ್ತುತ ಬೆಲೆಗಳಿಗ ತಕ್ಕಂತೆ ಕನಿಷ್ಠ ವೇತನ ನಿಗದಿ ಮಾಡಲು ಮುಂದಾದರ ಕೇಂದ್ರ ಸರ್ಕಾರ ಗೊತ್ತುಮಾಡಿರುವ ಕನಿಷ್ಠ ವೇತನ ಅರ್ಧದಷ್ಟೂ ಆಗುವುದಿಲ್ಲ. ಅವುಗಳು ಹೇಳುವಂತೆ ಈಗಿ ಬೆಲೆಗಳಿಗೆ ತಕ್ಕಂತೆ ತಿಂಗಳೊಂದಕ್ಕೆ ಕನಿಷ್ಠ 15,000 ರೂಪಾಯಿಯಾದರೂ ವೇತನ ನಿಗದಿಪಡಿಸಬೇಕಾಗುತ್ತ ಅಂದಹಾಗೆ, ಕೇಂದ್ರ ನಿಗದಿ ಮಾಡಿರೋ 7,100 ರೂಪಾಯಿ ಕನಿಷ್ಠ ವೇತನಕ್ಕಿಂತ ಜಾಸ್ತಿ ವೇತನವನ ಹರಿಯಾಣ (7,600 ರೂ.), ದಿಲ್ಲಿ (9,178 ರೂ.)ಯಂತಹ ಪುಟ್ಟ ಸರ್ಕಾರಗಳೇ ನಿಗದಿ ಮಾಡಿಕೊಂಡಿವೆ.

→09

ಕೊಡಗು: ಕಾರಂತ ಎಂಬ ಭೂತ


ಜಗದೀಶ್ ಕಾರಂತ

ಭೂತದ ಬಾಯಲ್ಲಿ ಭಗವದ್ಗೀತೆ ಎನ್ನುವಂತೆ ಹಿಂದೂ ಜಾಗರಣಾ ವೇದಿಕೆಯ ಸಂಘಟನಾ ಕಾರ್ಯದರ್ಶಿ ಜಗದೀಶ್ ಕಾರಂತ "ಕೊಡಗು ಜಿಲ್ಲೆ ಇಸ್ಲಾಂ ಮೂಲಭೂತವಾದಿಗಳ ಅಡಗುತಾಣವಾಗಿದೆ" ಎಂದು ಹೇಳಿದ್ದಾರೆ. "ಕೊಡಗು ಜಿಲ್ಲೆಯನ್ನು ಇಸ್ಲಾಮೀಕರಣ ಗೊಳಿಸುವ ಕಾರ್ಯ ವ್ಯವಸ್ಥಿತವಾಗಿ ನಡೆಯುತ್ತಿದ್ದು, ಕೊಡಗಿನಲ್ಲಿ ಭಯೋತ್ಪಾದನಾ ಚಟುವಟಿಕೆಗೆ ತರಬೇತಿ ಕೂಡ ನೀಡಲಾಗುತ್ತಿದೆ" ಎಂದು ಜಗದೀಶ್ ಕಾರಂತ್ ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ತನ್ನ ಪ್ರಚಂಡ ಭಾಷಣಗಳ ಮೂಲಕ ಜನರನ್ನು ಪ್ರಚೋದಿಸಿ, ಜಿಲ್ಲೆಯಲ್ಲಿ ಸಾಕಷ್ಟು ಬಾರಿ ಗಲಭೆಗೆ ಕಾರಣಕರ್ತರಾಗಿದ್ದ ಜಗದೀಶ್ ಕಾರಂತರವರು ಸೋಮವಾರಪೇಟೆ ತಾಲೂಕಿನಲ್ಲಿ ರಾಮನವಮಿ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿತ್ತು. ಟಿಪ್ಪು ಗಲಭೆಯ ಸಂದರ್ಭದಲ್ಲಿ ಕೊಡಗು ಜಿಲ್ಲೆ ಜರ್ಜರಿತವಾಗಿದ್ದು, ಮತ್ತೊಮ್ಮೆ ಜಗದೀಶ್ ಕಾರಂತರ ಪ್ರಚೋದನಾಕಾರಿ ಮಾತುಗಳಿಂದ ಅಸಹನೆ ಹುಟ್ಟುವುದು ಬೇಡ ಎಂಬ ಕಾರಣಕ್ಕಾಗಿ ಜಿಲ್ಲಾಡಳಿತವು ಜಗದೀಶ ಕಾರಂತರ ಪ್ರವೇಶವನ್ನು ನಿಷೇಧಿಸಿತ್ತು. ಜಿಲ್ಲಾಡಳಿತದ ದಿಟ್ಟ ಕ್ರಮ ಇದಾಗಿತ್ತು. ಇಂತಹ ಕ್ರಮ ಸಾಕಷ್ಟು ಹಿಂದೆಯೇ ತೆಗೆದುಕೊಂಡಿದ್ದರೆ ಕೊಡಗಿನಲ್ಲಿ ಈ ಹಿಂದೆ ನಡೆದಂತಹ ಹಲವು ಘಟನೆಗಳನ್ನು ತಪ್ಪಿಸಬಹುದಿತ್ತು. ತಡವಾಗಿಯಾದರೂ ಜಿಲ್ಲಾಡಳಿತಕ್ಕೆ ಈ ಬಗ್ಗೆ ಅರಿವು ಆದದ್ದು ಸಂತೋಷದ ವಿಚಾರ. ಹಾಗಾಗಿ ಜಿಲ್ಲಾಡಳಿತ ಪೊಲೀಸ್ ಇಲಾಖೆಯ ಸೂಚನೆಯ ಮೇರೆ ಜಗದೀಶ ಕಾರಂತರ ಪ್ರವೇಶವನ್ನು ನಿರ್ಬಂಧಿಸಿತ್ತು.

ಪ್ರವೇಶ ನಿಷೇಧ ಇದೇನು ಹೊಸತಲ್ಲ. ಕರ್ನಾಟಕ ರಾಜ್ಯದಲ್ಲಿ ಪ್ರಚೋದನಾಕಾರಿ ಭಾಷಣ ಮಾಡುವಂತಹ ಪ್ರವೀಣ್ ತೊಗಾಡಿಯಾ, ಶ್ರೀ ರಾಮಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಸೇರಿದಂತೆ, ಓ.ಐ.ಸಿ.ಯ ಮುಖ್ಯಸ್ಥರನ್ನು ಕರ್ನಾಟಕದಲ್ಲಿ ಹಲವು ಬಾರಿ ಪ್ರವೇಶ ನಿರಾಕರಣೆ ಮಾಡಲಾಗಿದೆ.

ಕೊಡಗು ಜಿಲ್ಲೆಯಲ್ಲಿ ಚೆಡ್ಡಿಗಳು ಜಗದೀಶ್ ಕಾರಂತರಿಗೆ ಪ್ರವೇಶವನ್ನು ನಿಷೇಧಿಸಿದ್ದನ್ನು ಖಂಡಿಸಿ, ಅಲ್ಲಲ್ಲಿ ಪ್ರತಿಭಟನೆ ಗಳನ್ನು ನಡೆಸಿದ್ದರು. ಮೈ ತೀರಾ ಪರಚಿಕೊಂಡಿದ್ದರು. ಆದರೆ ಈ ಪ್ರತಿಭಟನೆಗೆ ಚೆಡ್ಡಿಗಳು ಬಯಸಿದ ಪ್ರಮಾಣದಲ್ಲಿ ಬೆಂಬಲ ದೊರೆತಿರಲಿಲ್ಲ ಎಂಬುದು ಗಮನಾರ್ಹ.

ಇಸ್ಲಾಂ ಮೂಲಭೂತವಾದ ನಡೆಯುತ್ತಿದೆ ಎಂಬುದು ಹಿಂದೂ ಮೂಲಭೂತವಾದಿಗಳಿಗೆ ಮಾತ್ರ ತಿಳಿಯಲು ಸಾಧ್ಯ. ಉಳಿದಂತೆ ಕೊಡಗು ಜಿಲ್ಲೆ ಸಾಮಾನ್ಯ ಜನತೆಗೆ ಯಾವುದೇ ರೀತಿಯ ಮೂಲಭೂತವಾದ ಚಟುವಟಿಕೆ ನಡೆಯುತ್ತಿರುವ ಕೇಂದ್ರವಲ್ಲ. ಜಗದೀಶ ಕಾರಂತ ಸಂಘ ಪರಿವಾರದವರು ಹೇಗೆಲ್ಲ ಸುಳ್ಳು ಹೇಳುತ್ತಾರೆ ಮತ್ತು ಸುಳ್ಳನ್ನೇ ಸತ್ಯವನ್ನಾಗಿಸುವ ಪ್ರಯತ್ನವನ್ನು ಮಾಡುತ್ತಾರೆ ಎಂದು ಮತ್ತೊಮ್ಮೆ ಸಾಬೀತುಮಾಡಿದ್ದಾರೆ. ಗೋಬೆಲ್ಸ್ ಮಾದರಿಯನ್ನು ಅಳವಡಿಸುವುದು ಹೇಗೆ ಎಂಬುದನ್ನು ಅವರು ಹೇಳಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಯಾಗಿರುವವರು ಮೀರ್ ಅನೀಸ್ ಅಹಮ್ಮದ್ ಎಂಬವರು. ಕೊಡಗಿನಲ್ಲಿ ಉನ್ನತ ಹುದ್ದೆಗಳಲ್ಲಿ ಮುಸ್ಲಿಮರು ಇದ್ದರೆ ಅವರ ವಿರುದ್ಧ ಗೂಬೆ ಕೂರಿಸುವ ಯತ್ನವನ್ನು ಮಾಡಲಾಗುತ್ತದೆ. ಈಗ ದಕ್ಷಿಣ ಕನ್ನಡದಲ್ಲಿ ಜಿಲ್ಲಾಧಿಕಾರಿಯಾಗಿರುವ ಎ.ಬಿ. ಇಬ್ರಾಹಿಂರವರು ಕೊಡಗು ಜಿಲ್ಲಾ ಪಂಚಾಯತಿಯಲ್ಲಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದವರು. ಆಗ ಬಿಜೆಪಿಯ ಆಡಳಿತವೇ ಇತ್ತು. ಇಬ್ರಾಹಿಂರವರಿಗೆ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಬಿಡಲೇ ಇಲ್ಲ. ಸಾಕಷ್ಟು ಕಿರುಕುಳವನ್ನು ನೀಡಲಾಯಿತು. ಇಲ್ಲದ ಆರೋಪಗಳನ್ನು ಅವರ ಮೇಲೆ ಮಾಡಿ, ಅವರಾಗೇ ಜಿಲ್ಲೆಯಿಂದ ತೆರಳುವಂತೆ ಮಾಡಿದ್ದರು. ಈಗ ದಕ್ಷಿಣ ಕನ್ನಡದಲ್ಲಿ ಇದೇ ಪ್ರಯೋಗ ಎ.ಬಿ.ಇಬ್ರಾಹಿಂರವರ ಮೇಲೆ ಮುಂದುವರೆದಿದೆ. ಪುತ್ತೂರು ದೇವಾಲಯಕ್ಕೆ ಸಂಬಂಧಪಟ್ಟಂತೆ ಅವರ ಹೆಸರು ಆಮಂತ್ರಣ ಪತ್ರದಲ್ಲಿ ಹಾಕಿರುವುದನ್ನು ವಿರೋಧಿಸಿ, ಸಂಘಿಗಳು ಸದ್ದು ಮಾಡಿದ್ದರು. ಇದಕ್ಕೆ ಬೆಂಬಲ ನೀಡಿದವರು ಮತ್ಯಾರೂ ಅಲ್ಲ, ಸಂಘ ಪರಿವಾರದ ಇತಿಹಾಸ ಉಳ್ಳ, ಈಗ ಕಾಂಗ್ರೆಸಿನ ಮೂಲಕ ಶಾಸಕರಾಗಿರುವ ಶ್ರೀಮತಿ ಶಕುಂತಲಾ ಶೆಟ್ಟಿಯವರು. ಇದು ಮಾನಸಿಕವಾಗಿ ಕುಗ್ಗಿಸುವ ಯತ್ನ.

ಈಗ ಮೀರ್ ಅನೀಸ್ ಅಹಮ್ಮದ್ ಬಗ್ಗೆ ಇಂತಹದ್ದೇ ಪ್ರಯೋಗಗಳನ್ನು ಸಂಘ ಪರಿವಾರ ಮಾಡುತ್ತಿದೆ. ಆದರೆ ಒಂದೆರಡು ತಿಂಗಳಿನಲ್ಲಿ ನಿವೃತ್ತರಾಗುವ ಮೀರ್ ಅನೀಸ್ ಅಹಮ್ಮದ್ ಈ ಬಗ್ಗೆ ಯಾವುದೇ ರೀತಿಯಲ್ಲಿ ಪ್ರತಿಕ್ರಿಯಿಸದೆ ಸ್ಥಿತಪ್ರಜ್ಞರಂತೆ ಇದ್ದಾರೆ. ಅವರ ಬಗ್ಗೆ ಜಗದೀಶ್ ಕಾರಂತ್ ಹೇಳಿರುವ ಮಾತುಗಳು ಮುಸ್ಲಿಮರ ಬಗ್ಗೆ ಅವರಿಗೆ ಎಷ್ಟೊಂದು ಅಸಹನೆ ಇದೆ ಎಂಬುದನ್ನು ತೋರಿಸಿದೆ. ರಾಮನವಮಿಯ ಹಿಂದಿನ ದಿನ ಜಗದೀಶ್ ಕಾರಂತರು ಕೊಡಗಿಗೆ ಬಂದಿದ್ದರು. ಸೋಮವಾರಪೇಟೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸಬಾರದೆಂದು ಅವರಿಗೆ ಜಿಲ್ಲಾಡಳಿತದ ಮೂಲಕ ನೋಟಿಸು ಜಾರಿಯಾಗಿತ್ತು. ಆದರೆ ಅದು ಅವರ ಕೈಗೆ ತಲುಪಿರಲಿಲ್ಲ. ಪೊಲೀಸರಿಗೆ ಜಗದೀಶ್ ಕಾರಂತರು ಸಿಕ್ಕಿರಲಿಲ್ಲ. ಕೊನೆಗೆ ಅವರನ್ನು ಪತ್ತೆಹಚ್ಚಿ 14ರಂದು ರಾತ್ರಿ ನೋಟಿಸನ್ನು ನೀಡಿ, ಮೈಸೂರಿನವರೆಗೆ ಸಾಗ ಹಾಕಿದ್ದರು. ಇದಕ್ಕಾಗಿ ಜಗದೀಶ್ ಕಾರಂತ್ ಜಿಲ್ಲಾಧಿಕಾರಿಯ ಬಗ್ಗೆ ಬಹಳ ಲಘುವಾಗಿ ಮಾತನಾಡಿದರು.

ಟಿಪ್ಪು ಜಯಂತಿಯ ಸಂದರ್ಭದಲ್ಲಿ ನಡೆದಂತಹ ಗಲಭೆಗೆ ಜಿಲ್ಲಾಧಿಕಾರಿಗಳು ನೇರ ಹೊಣೆ ಎಂಬ ಆರೋಪವನ್ನು ಜಗದೀಶ್ ಕಾರಂತ್ ಮಾಡಿದ್ದಾರೆ. ಜಿಲ್ಲಾಧಿಕಾರಿಗಳು ಮೂಲಭೂತವಾದಿಗಳೊಂದಿಗೆ ಸಭೆಯನ್ನು ನಡೆಸಿದ್ದರು. ಆನಂತರ ಟಿಪ್ಪು ಜಯಂತಿಗೆ ಕುಮ್ಮಕ್ಕು ನೀಡಿ, ಸುದೀರ್ಘ ರಜೆಯ ಮೇಲೆ ಕಾಶ್ಮೀರಕ್ಕೆ ತೆರಳಿದ್ದು ಸಂಶಯಕ್ಕೆ ಎಡೆಮಾಡಿಕೊಟ್ಟಿದೆ ಎಂದು ಹೇಳಿದ್ದಾರೆ. ಜಿಲ್ಲಾಧಿಕಾರಿಗಳಾದ ಮೀರ್ ಅನೀಸ್ ಅಹಮ್ಮದ್‌ರವರು ಬೆಂಗಳೂರಿನಲ್ಲಿ ಇದ್ದವರು. ನಿವೃತ್ತಿಯ ಅಂಚಿನಲ್ಲಿ ಇರುವ ಅವರನ್ನು ಜಿಲ್ಲೆಗೆ ತಂದ ಪರಿಣಾಮ ಜಿಲ್ಲೆಯಲ್ಲಿ ಶ್ರೀಸಾಮಾನ್ಯನ ಕೆಲಸ ಕಾರ್ಯಗಳು ಸುಲಲಿತವಾಗಿ ಆಗುತ್ತಿದೆ. ಈ ಹಿಂದೆ ಇದ್ದ ಜಿಲ್ಲಾಧಿಕಾರಿ ಅನುರಾಗ್ ತಿವಾರಿ ಮನುಷ್ಯ ದ್ವೇಷಿಯ ರೀತಿಯಲ್ಲಿ ವರ್ತಿಸುತ್ತಿದ್ದರು. ಅಲ್ಲಿಂದ ಮನುಷ್ಯ ಸ್ನೇಹಿಯೊಬ್ಬ ಜಿಲ್ಲಾಧಿಕಾರಿಯಾಗಿ ಬಂದದ್ದನ್ನು ಜನತೆ ಗಮನಿಸಿದೆ. ಅವರು ಜಿಲ್ಲೆಗೆ ಆಗಮಿಸಿದ ಸ್ವಲ್ಪ ಸಮಯದಲ್ಲಿಯೇ ಸ್ಕಾಟ್‌ಲ್ಯಾಂಡ್‌ನಲ್ಲಿರುವಂತಹ ಅವರ ಸಹೋದರರ ಪುತ್ರರ ವಿವಾಹ ಕಾರ್ಯಕ್ರಮ ಇತ್ತು. ಅದಕ್ಕಾಗಿ 15 ದಿನಗಳ ರಜೆಯನ್ನು ಅವರು ಕೋರಿದ್ದರು. ಆದರೆ ಸರಕಾರ ಆ ಸಂದರ್ಭದಲ್ಲಿ 15 ದಿನಗಳ ಕಾಲ ರಜೆ ನೀಡಲು ನಿರಾಕರಿಸಿ, 7 ದಿನ ರಜೆಯನ್ನು ಮಂಜೂರು ಮಾಡಿತ್ತು. ಇಷ್ಟೂ ದಿನಗಳು ಪ್ರಯಾಣಕ್ಕೆ ಮೀಸಲಾಗುತ್ತದೆ ಎಂದು ತನಗೆ ಕನಿಷ್ಠ 15 ದಿನಗಳ ಕಾಲ ರಜೆ ಬೇಕೆಂದು, ಇಲ್ಲದಿದ್ದರೆ ರಜೆಯ ಅಗತ್ಯತೆ ತನಗೆ ಇಲ್ಲವೆಂದು ಅವರು ತಿಳಿಸಿದ್ದರು. ಹಾಗೆ ಅವರಿಗೆ ರಜೆ ಅವರು ಬಯಸಿದ ಸಂದರ್ಭದಲ್ಲಿ ಸರಕಾರ ನೀಡಿರಲಿಲ್ಲ. ನಂತರ ಅವರಿಗೆ ಸ್ವಲ್ಪ ಸಮಯ ಕಳೆದು ರಜೆ ಮಂಜೂರಾಗಿತ್ತು. ಹಾಗೆ ಅವರು ವಿದೇಶಕ್ಕೆ ತೆರಳಿದ್ದರು.

ಇದ್ಯಾವುದನ್ನೂ ತಿಳಿದುಕೊಳ್ಳುವ ಗೋಜಿಗೇ ಹೋಗದೆ ಅಥವ ತಿಳಿದುಕೊಂಡಿದ್ದರೂ ತಾವು ಸುಳ್ಳು ಹೇಳಿದರೂ ಜನತೆ ಅದನ್ನು ನಂಬುತ್ತಾರೆ ಎಂದು ಭಾವಿಸಿರುವ ಜಗದೀಶ್ ಕಾರಂತ್, ಜಿಲ್ಲಾಧಿಕಾರಿಗಳ ಕಾಶ್ಮೀರ ಭೇಟಿಯ ಬಗ್ಗೆ ತನಿಖೆಯಾಗಬೇಕು ಎಂದು ಹೇಳುವ ಮೂಲಕ ನಗೆಪಾಟಲಿಗೆ ಈಡಾಗಿದ್ದಾರೆ.


"ಕೊಡಗನ್ನು ಇಸ್ಲಾಮೀಕರಣ ಮಾಡುವ ಕಾರ್ಯ ಕೆಲವು ವರ್ಗಗಳಿಂದ ನಡೆಯುತ್ತಿದೆ. ಇಸ್ಲಾಂ ಮೂಲಭೂತವಾದಿಗಳಿಗೆ ಕೊಡಗು ಅಡಗುತಾಣವಾಗಿದೆ. ಅಂತರರಾಷ್ಟ್ರೀಯ ಭಯೋತ್ಪಾದಕ ಸಂಘಟನೆಗಳೊಂದಿಗೆ ಸಂಬಂಧ ಹೊಂದಿರುವವರಿಗೆ ಕೊಡಗು ತರಬೇತಿ ಕೇಂದ್ರವೂ ಆಗಿದೆ. ಟಿಪ್ಪು ಜಯಂತಿಯಂದು ಮಡಿಕೇರಿಯಲ್ಲಿ ಸೇರಿದ್ದ ಕೇರಳ ಮೂಲದ ಜನರು ಸಾಮಾಜಿಕ ಭಯೋತ್ಪಾದನೆಗೆ ನಾಂದಿ ಆಡುವ ಯತ್ನ ನಡೆಸಿದ್ದರು. ಇಂತಹವರಿಗೆ ಜಿಲ್ಲಾಧಿಕಾರಿ ಕುಮ್ಮಕ್ಕು ಹಾಗೂ ಪ್ರೋತ್ಸಾಹ ನೀಡುತ್ತಿದ್ದಾರೆ" ಎಂದು ಜಗದೀಶ್ ಕಾರಂತರು ಹೇಳಿದ್ದಾರೆ. ಎಷ್ಟೊಂದು ಬೇಜವಾಬ್ದಾರಿಯ ಹೇಳಿಕೆಯಿದು? ಅಂತರರಾಷ್ಟ್ರೀಯ ಭಯೋತ್ಪಾದಕರಿಗೆ ಅಡಗುತಾಣವಾಗಿದೆ ಎಂದಾದರೆ, ಕೇಂದ್ರದಲ್ಲಿ ಇರುವ ಚೆಡ್ಡಿ ಸರಕಾರ ಏನು ಮಾಡುತ್ತಿದೆ? ಆ ಸರಕಾರದ ಯಾವ ಸಂಸ್ಥೆಗಳು ಕೂಡ ಕೊಡಗಿನಲ್ಲಿ ಇಸ್ಲಾಂ ಭಯೋತ್ಪಾದನೆಯಾಗುತ್ತಿದೆ, ಅಥವ ಭಯೋತ್ಪಾದಕರ ಅಡಗುತಾಣವಾಗುತ್ತಿದೆ ಎನ್ನುವ ಹೇಳಿಕೆಯನ್ನು ನೀಡಿಲ್ಲ. ಅಂದ ಮೇಲೆ ಇದು ಬೇಜವಾಬ್ದಾರಿಯ ಹೇಳಿಕೆಯಲ್ಲದೆ ಮತ್ತೇನು?

ಟಿಪ್ಪು ಜಯಂತಿ ಆಚರಣೆಗೆ, ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳು ಕೆ.ಎಫ್.ಡಿ., ಪಿ.ಎಫ್.ಐ. ಹಾಗೂ ಎಸ್.ಡಿ.ಪಿ.ಐ. ಪ್ರಮುಖರ ಸಭೆಯನ್ನು ನಡೆಸಿದ್ದರು. ಇದರ ಅರಿವು ಪೊಲೀಸರಿಗೆ ಇರಲಿಲ್ಲ ಎಂದು ಜಗದೀಶ್ ಕಾರಂತ್ ಆರೋಪಿಸುವ ಮೂಲಕ ಜಿಲ್ಲಾಧಿಕಾರಿಗಳು ಪರೋಕ್ಷವಾಗಿ ಭಯೋತ್ಪಾದಕರಿಗೆ ಬೆಂಬಲ ನೀಡುತ್ತಿದ್ದಾರೆ ಎಂಬ ಗಂಭೀರ ಆರೋಪವನ್ನು ಮಾಡಿದ್ದಾರೆ. ಇದು ಕೋಮುದ್ವೇಷವನ್ನು ಹರಡಿಸುವ ಯತ್ನ ಆಗಿರುವುದಂತೂ ಖಂಡಿತ. ಇಂತಹ ಬೇಜವಾಬ್ದಾರಿ ಹೇಳಿಕೆಯನ್ನು ನೀಡಿರುವಂತಹ ಜಗದೀಶ್ ಕಾರಂತ್ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಗಳು ಪೊಲೀಸರಿಗೆ ಪುಕಾರು ನೀಡಬೇಕಾಗಿತ್ತು. ಆದರೆ ಅವರು ಯಾವುದೇ ಕ್ರಮಕ್ಕೂ ಮುಂದಾಗದೆ, ತನ್ನ ದೊಡ್ಡತನವನ್ನು ಪ್ರದರ್ಶಿಸಿದ್ದಾರೆ.

"ಜಿಲ್ಲಾಧಿಕಾರಿಗಳು ಕಾನೂನುಬಾಹಿರವಾಗಿ ಅಲ್ಪಸಂಖ್ಯಾತರಿಗೆ ಕೋವಿಯ ಹಕ್ಕನ್ನು ನೀಡಿದ್ದಾರೆ" ಎಂಬ ಗಂಭೀರವಾದ ಆರೋಪವನ್ನು ಜಗದೀಶ್ ಕಾರಂತ್ ಮಾಡಿದ್ದಾರೆ. ಹಾಗೊಂದು ವೇಳೆ ಅವರು ಮಾಡಿರುವ ಆರೋಪಗಳು ಸತ್ಯ ಎಂದಾದಲ್ಲಿ, ಅವರೇ ಗರಡಿಯಲ್ಲಿರುವಂತಹ ಶಾಸಕರುಗಳಾದ ಕೆ.ಜಿ. ಬೋಪಯ್ಯ, ಅಪ್ಪಚ್ಚು ರಂಜನ್ ಹಾಗೂ ಸುನಿಲ್ ಸುಬ್ರಹ್ಮಣಿಯವರಾಗಲಿ, ಸಂಸದರಾದ ಪ್ರತಾಪ ಸಿಂಹರವರಾಗಲಿ ಈ ಬಗ್ಗೆ ಇಲ್ಲಿಯವರೆಗೆ ಏಕೆ ಮಾತನಾಡಲಿಲ್ಲ ಎಂದು ಪ್ರಶ್ನಿಸಬೇಕಾಗುತ್ತದೆ.

ಕೊಡವರನ್ನು ಪ್ರಚೋದಿಸುವ ಯತ್ನ

ಪ್ರತಿಯೊಂದು ವಿಚಾರದಲ್ಲಿಯೂ "ನಾವೆಲ್ಲಾ ಹಿಂದೂಗಳು" ಎಂದು ಹೇಳುವ ಜಗದೀಶ ಕಾರಂತ ಸೇರಿದಂತೆ, ಎಲ್ಲಾ ಚೆಡ್ಡಿಗಳು ಸಂದರ್ಭಕ್ಕೆ ತಕ್ಕ ರೀತಿಯಲ್ಲಿ ಹೇಗೆ ಅನುಕೂಲ ಸಿಂಧೂತ್ವವನ್ನು ಪ್ರದರ್ಶಿಸುತ್ತಾರೆ ಎನ್ನುವುದಕ್ಕೆ ಜಗದೀಶ್ ಕಾರಂತ್ ನೀಡಿರುವ ಹೇಳಿಕೆ ಸಾಕ್ಷಿಯಾಗಿದೆ. "ವಿಶ್ವ ಹಿಂದೂ ಪರಿಷತ್ತಿನ ಮುಖಂಡ ಕುಟ್ಟಪ್ಪ ದೇವಟ್ಟಿಪರಂಬಿನಲ್ಲಿ ದ್ರೋಹಿ ಟಿಪ್ಪುವಿನ ವಂಚನೆಯಿಂದ ಹತರಾದ ಕೊಡವರು ತಮ್ಮ ಸೇಡನ್ನು ತೀರಿಸಿಕೊಳ್ಳುವ ಕಾಲ ಸನ್ನಿಹಿತವಾಗಿದೆ" ಎಂದು ಕಾರಂತ ಹೇಳಿದ್ದಾರೆ. ಅಂದರೆ ಕೊಡವರು ಹಿಂದೂಗಳು ಅಲ್ಲ ಎಂದು ಜಗದೀಶ್ ಕಾರಂತರು ಹೇಳುತ್ತಿದ್ದಾರೆಯೋ ಎಂದು



ಅನೀಸ್ ಅಹಮ್ಮದ್

ಅವರನ್ನು ಪ್ರಶ್ನಿಸಬೇಕಾಗುತ್ತದೆ. ಇದು ಕೊಡವ ಜನಾಂಗದವರನ್ನು ಪ್ರಚೋದಿಸುವ ಉದ್ದೇಶದಿಂದ ಜಗದೀಶ್ ಕಾರಂತ್ ನೀಡಿರುವ ಹೇಳಿಕೆ ಆಗಿದೆ ಎಂಬುದನ್ನು ಜಿಲ್ಲೆಯ ಪ್ರಜ್ಞಾವಂತ ಕೊಡವರು ಅರಿತುಕೊಳ್ಳುತ್ತಾರೆ. ಕೊಡವ ಜನಾಂಗದವರಲ್ಲಿ ಬಹುತೇಕರು ಬಿಜೆಪಿಯವರಾಗಿದ್ದರೂ, ಸಂಘ ಪರಿವಾರದ ಪ್ರಯೋಗಗಳಿಗೆ ಬಲಿಯಾಗಿಲ್ಲ. ಅವರು ಸುಲಭವಾಗಿ ಸಂಘ ಪರಿವಾರದ ಕೈಗೆ ಸಿಗುತ್ತಿಲ್ಲ. ಹಾಗಾಗಿ ಅವರನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವ ಯತ್ನ ಇದಾಗಿದೆ.


"ಮುಂದಿನ ವರ್ಷದಿಂದ ಟಿಪ್ಪು ಜನ್ಮದಿನಾಚರಣೆಯನ್ನು ಕೊಡಗಿನಲ್ಲಿ ಆಚರಿಸಲು ಬಿಡುವುದಿಲ್ಲ. ಅದನ್ನು ಕುಟ್ಟಪ್ಪ ಬಲಿದಾನದ ದಿನವಾಗಿ ಆಚರಿಸಲಾಗುತ್ತದೆ" ಎಂದೂ ಅವರು ಹೇಳಿದ್ದಾರೆ. ಕುಟ್ಟಪ್ಪ ಟಿಪ್ಪು ಗಲಭೆಯ ವೇಳೆ ಸತ್ತದ್ದು ಗಲಭೆಕೋರರ ದಾಳಿಯಿಂದ ಅಲ್ಲ. ಸ್ವಯಂ ಆಹ್ವಾನಿಸಿಕೊಂಡ ಮರಣವದು ಎಂಬುದು ಪ್ರತಿಯೊಬ್ಬರಿಗೂ ತಿಳಿದಿದೆ. ಅದನ್ನು ಹುತಾತ್ಮರ ದಿನವಾಗಿ ಆಚರಿಸುತ್ತೇವೆ ಎಂದು ಹೇಳುವ ಮೂಲಕ ಅವರೇ ನಗೆಪಾಟಲಿಗೆ ಈಡಾಗಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಸಂಘ ಪರಿವಾರದ ಬೇರುಗಳು ಸಡಿಲವಾಗುತ್ತಿದೆ. ಅವರು ಬಯಸಿದಂತೆ ಜಿಲ್ಲೆಯಲ್ಲಿ ಅವರ ಚಟುವಟಿಕೆಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಹಲವಾರು ಪ್ರಯೋಗಗಳನ್ನು ಮಾಡುತ್ತಾ ಬಂದಿದ್ದು, ಈಗ ಹುತಾತ್ಮರ ದಿನಾಚರಣೆ ಮಾಡುತ್ತೇವೆ ಎಂದು ಹೇಳುವ ಮೂಲಕ ಮತ್ತೊಂದು ಅಜೆಂಡಾವನ್ನು ಜಗದೀಶ್ ಕಾರಂತ್ ಕೈಗೆತ್ತಿಕೊಂಡಿದ್ದಾರೆ.


ಜಗದೀಶ್ ಕಾರಂತರನ್ನು ಕೊಡಗು ಪ್ರವೇಶಿಸದಂತೆ ನಿರ್ಬಂಧಿಸಿರುವುದು ಜಿಲ್ಲಾಡಳಿತದ ದಿಟ್ಟ ಕ್ರಮ ಆಗಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಇಂತಹ ಬೇಜವಾಬ್ದಾರಿ ಮತ್ತು ಬಾಲಿಶ ಹೇಳಿಕೆಗಳನ್ನು ಜಗದೀಶ್ ಕಾರಂತರು ನೀಡಿದರೆ, ಅವರನ್ನು ಕಾಯಂ ಆಗಿ ಜಿಲ್ಲೆಗೆ ಬಾರದಂತೆ ನಿರ್ಬಂಧಿಸುವುದು ಸೂಕ್ತ.


■ ಮನು ಶೆಣೈ












ಪ(ಂಗ)ನಾಮಾ-ಪೇಪರ್ಸ್


ಎರಡು ವಾರಗಳ ಹಿಂದೆ ಒಂದು ರೋಚಕ ಸುದ್ದಿ ಸ್ಫೋಟಗೊಂಡಿತು. ಆ ಸುದ್ದಿಯ ಹೆಸರು 'ಪನಾಮಾ ಪೇಪರ್ಸ್ ಲೀಕ್' ಎಂದು. ಕ್ಷಣಾರ್ಧದಲ್ಲಿ ಈ ಸುದ್ದಿ ಇಡೀ ಜಗತ್ತಿನಾದ್ಯಂತ ಹರಡಿ ಎಲ್ಲೆಡೆ ಸಂಚಲನ ಶುರುವಾಯ್ತು. ಯಾಕೆಂದರೆ ಆ ಪನಾಮಾ ಪೇಪರ್ಸ್‌ನ ಮೂಲಕ ವಿವಿಧ ದೇಶಗಳ ಪ್ರಭಾವಿ ವ್ಯಕ್ತಿಗಳು ಹಾಗೂ ಕಂಪನಿಗಳು ತೆರಿಗೆ ಸ್ವರ್ಗಗಳೆಂದು ಕರೆಯಲಾಗುವ ದೇಶಗಳಲ್ಲಿ ಬೇನಾಮಿ ಕಂಪನಿಗಳನ್ನು ಆರಂಭಿಸಿ, ಬಿಲಿಯಗಟ್ಟಲೆ ಡಾಲರ್ ಹಣವನ್ನು ಅಕ್ರಮವಾಗಿ ತೊಡಗಿಸಿರುವುದು ಬಯಲಾಯ್ತು.

ಈ ಪಟ್ಟಿಯಲ್ಲಿ ಭಾರತದ ಬಾಲಿವುಡ್ ತಾರೆಯರಾದ ಅಮಿತಾಭ್ ಬಚ್ಚನ್, ಐಶ್ವರ್ಯ ರೈ, ಪ್ರಧಾನಿ ಮೋದಿಯ ಆಪ್ತ ಮಿತ್ರ ಗೌತಮ್ ಅದಾನಿಯ ಅಣ್ಣ ವಿನೋದ್ ಅದಾನಿ, ಭೂಗತ ಪಾತಕಿ ದಾವೂದ್‌ನ ಸಹಚರ ಇಕ್ಬಾಲ್ ಮಿರ್ಚಿ, ಹಲವಾರು ಕಂಪನಿಗಳ ಮುಖಂಡರು, ರಿಯಲ್ ಎಸ್ಟೇಟ್ ಧಣಿಗಳು ಹಾಗೂ ಕೆಲವು ರಾಜಕಾರಣಿಗಳ ಅಕ್ರಮ ದಂಧೆಗಳು ಬಯಲಾದವು. ಹಾಗೆ ರಷ್ಯಾದ ಜನಪ್ರಿಯ ಅಧ್ಯಕ್ಷ ವ್ಲಾದಿಮಿರ್ ಪುಟಿನ್, ಐಸ್‌ಲ್ಯಾಂಡ್‌ನ ಅಧ್ಯಕ್ಷ, ಯುನೈಟೆಡ್ ಕಿಂಗ್‌ಡಮ್‌ನ ಪ್ರಧಾನಿ ಡೇವಿಡ್ ಕೆಮರೂನ್ ಹೀಗೆ ಹತ್ತಾರು ದೇಶಗಳ ಪ್ರಮುಖರ ಹೆಸರುಗಳು ಪ್ರಕಟಗೊಂಡು ಹಠಾತ್ತನೆ ಎಲ್ಲೆಡೆ ಕೋಲಾಹಲ ಶುರುವಾಯ್ತು.

ಈ ಗಣ್ಯ ವ್ಯಕ್ತಿಗಳು ಹೀಗೆ ಹಣ ತೊಡಗಿಸಿದ್ದಾದರೂ ಯಾತಕ್ಕೆ? ಒಂದೋ ತಮ್ಮ ದೇಶಕ್ಕೆ ಸಲ್ಲಿಸಬೇಕಿದ್ದ ತೆರಿಗೆಯನ್ನು ಲಪಟಾಯಿಸಲಿಕ್ಕಾಗಿ ಅಥವ ಭ್ರಷ್ಟಾಚಾರ, ಅಕ್ರಮ ಗಣಿಗಾರಿಕೆ, ಮಾದಕ ದ್ರವ್ಯ ಕಳ್ಳಸಾಗಣೆ, ಆಯುಧ ಮಾರಾಟದ ಅಕ್ರಮ ಜಾಲ ಹೀಗೇ ನಾನಾ ಅಕ್ರಮ ಮಾರ್ಗಗಳಿಂದ ಗಳಿಸಿದ ಕಪ್ಪುಹಣವನ್ನು ತಮ್ಮ ಗುರುತು ಮರೆಮಾಚಿ, ವಿದೇಶಗಳಲ್ಲಿ ತೊಡಗಿಸಿ ಮತ್ತೆ ದುರ್ಲಾಭ ಮಾಡಿಕೊಳ್ಳಲಿಕ್ಕಾಗಿ!!

ಭಾರತದ ಮಾಧ್ಯಮಗಳಲ್ಲಿ ಪನಾಮಾ ಪೇಪರ್ಸ್ ಹಗರಣದ ಸುದ್ದಿ ಹಾಗೇ ಮಿಂಚಿ ಮರೆಯಾಗಿದೆ. ಸರಿಯಾಗಿ ಇದೇ ಸಂದರ್ಭದಲ್ಲಿ ಕರ್ನಾಟಕದಲ್ಲಿ ಪಿಯುಸಿ ಪ್ರಶ್ನೆ ಪತ್ರಿಕೆ ಕೂಡ ಸೋರಿಕೆಯಾಗಿ, ಮಕ್ಕಳು ಮತ್ತು ಪೋಷಕರು ಆತಂಕದಲ್ಲಿದ್ದ ಸಂದರ್ಭವದು. ಹೀಗಾಗಿ ಕಾರ್ಪೊರೇಟ್ ಹಿಡಿತದಲ್ಲಿರುವ ಎಲ್ಲ ಚಾನೆಲ್‌ಗಳೂ, ಪತ್ರಿಕೆಗಳೂ ಪನಾಮಾ ಪೇಪರ್ಸ್ ಸೋರಿಕೆಯ ಸುದ್ದಿಯನ್ನು ಮೂಲೆಗುಂಪು ಮಾಡಿ





ಪ್ರಶ್ನೆಪತ್ರಿಕೆ ಸೋರಿಕೆ ಮಾಡಿದ ಕಿಂಗ್‌ಪಿನ್‌ನ ಹಿಂದೆ ಓಟಕಿತ್ತವು. ವಾರಗಟ್ಟಳೆ ತಲೆ ಚಿಟ್ಟುಹಿಡಿಯುವಷ್ಟು ಸುದ್ದಿ ಪ್ರಸಾರ ಮಾಡಿದವು. ಆದರೆ ಲಕ್ಷಾಂತರ ಕೋಟಿಗಳಷ್ಟು ಹಣವನ್ನು ಲಪಟಾಯಿಸಿ ವಿದೇಶಗಳಿಗೆ ಸಾಗಿಸಿದ್ದನ್ನು ಬಹಿರಂಗಪಡಿಸುವ ಪನಾಮಾ ಪೇಪರ್ಸ್ ಸುದ್ದಿಯನ್ನು ವ್ಯವಸ್ಥಿತವಾಗಿ ಮೂಲೆಗುಂಪು ಮಾಡಲಾಗಿದೆ.

ಆದರೆ ಈ ಪನಾಮಾ ಪೇಪರ್ಸ್‌ನ ಸುದ್ದಿ ಹಾಗೆ ಒಮ್ಮೆ ಓದಿ ಮರೆತುಬಿಡುವಂಥದ್ದಲ್ಲ, ಇದುವರೆಗೆ ಇಡೀ ಜಗತ್ತಿನಲ್ಲಿ ಬಯಲಾಗಿರುವ ಹಗರಣಗಳ ಇತಿಹಾಸದಲ್ಲೇ ಅತ್ಯಂತ ವಿಶಿಷ್ಟವಾದದ್ದು; ಭಾರೀ ಅಗಾಧವಾದದ್ದು, ಅಷ್ಟು ಮಾತ್ರವಲ್ಲ; ಇದು ನಮ್ಮ ನಿಮ್ಮೆಲ್ಲರ ಬದುಕಿನ ಮೇಲೆ ಗಂಭೀರ ದುಷ್ಪರಿಣಾಮ ಬೀರುವಂಥದ್ದು, ಆದರಿಂದ ಇದನ್ನು ಸ್ವಲ್ಪ ವಿವರವಾಗಿ ತಿಳಿದುಕೊಳ್ಳುವ ಪ್ರಯತ್ನ ಮಾಡೋಣ.

ಬಂಡವಾಳ ಬಯಲಾದದ್ದು ಹೇಗೆ?

ಇಲ್ಲಿಗೆ ಸುಮಾರು ಒಂದು ವರ್ಷದ ಹಿಂದೆ ಜರ್ಮನಿಯ 'ಸುಡ್‌ಡೂಯಿಷ್ ಜೈತುಂಗ್' ಎಂಬ ಪತ್ರಿಕಾ ಕಚೇರಿಗೆ ಜಾನ್ ಡೊ ಎಂಬ ಹೆಸರಿನಲ್ಲಿ ಒಂದು ಕುತೂಹಲಕಾರಿ ಸಂದೇಶ ರವಾನೆಯಾಯ್ತು.

ಅನಾಮಿಕ: "ಹಲೋ, ನಾನು ಜಾನ್ ಡೋ, ದಾಖಲೆಗಳನ್ನು ಪಡೆದುಕೊಳ್ಳಲು ನಿಮಗೆ ಆಸಕ್ತಿಯಿದೆಯೆ?"

ಜೈತುಂಗ್ ಪತ್ರಿಕೆ: "ಹೌದು, ಆಸಕ್ತಿ ಇದೆ, ಆದರೆ ಅವು ಎಂಥಾ ದಾಖಲೆಗಳು?"

ಅನಾಮಿಕ: "ನೀವು ಜೀವನದಲ್ಲಿ ಎಂದೂ ನೋಡದೇ ಇರುವಂಥಾ ರಹಸ್ಯ ದಾಖಲೆಗಳು."

ಜೈತುಂಗ್: "ಅವುಗಳ ಪ್ರಮಾಣ ಎಷ್ಟು?"

ಅನಾಮಿಕ: "ನೀವು ಕನಸು ಮನಸ್ಸಿನಲ್ಲೂ ಊಹಿಸಲಾರದಷ್ಟು ಭಾರಿ ಪ್ರಮಾಣದ ಅಮೂಲ್ಯ ದಾಖಲೆಗಳಿವೆ."

ಜೈತುಂಗ್: "ಅಷ್ಟೊಂದು ದಾಖಲೆಗಳನ್ನು ಪಡೆದುಕೊಳ್ಳುವುದು ಹೇಗೆ?"

ಅನಾಮಿಕ: "ನನ್ನದೊಂದು ಕಂಡಿಷನ್, ನಾವು ಯಾವತ್ತೂ ಪರಸ್ಪರ ಭೇಟಿಯಾಗುವಂತಿಲ್ಲ; ನನ್ನ ಪ್ರಾಣಕ್ಕೆ ಅಪಾಯವಿದೆ. ನಾನು ಏನಿದ್ದರೂ ಎನ್‌ಕ್ರಿಪ್ಟೆಡ್ ಫೈಲ್‌ಗಳನ್ನು ನಿಮಗೆ ಕಳಿಸಿಕೊಡುತ್ತೇನೆ, ಅಷ್ಟೆ. ಅದರಲ್ಲಿರುವ ಮಾಹಿತಿಗಳನ್ನಾಧರಿಸಿ ನೀವು ಯಾವ ರೀತಿಯ ಸ್ಟೋರಿ ಮಾಡುತ್ತೀರಿ ಎಂಬುದು ನಿಮಗೇ ಬಿಟ್ಟದ್ದು."

ಜೈತುಂಗ್: "ಇದನ್ನೆಲ್ಲಾ ನೀವ್ಯಾಕೆ ಮಾಡುತ್ತಿದ್ದೀರಿ?"

ಅನಾಮಿಕ: "ಈ ಖದೀಮರು, ಕ್ರಿಮಿನಲ್‌ಗಳ ದಂಧೆಯನ್ನು ಬಯಲುಗೊಳಿಸಲಿಕ್ಕೆ ಮಾತ್ರ."

ಹೀಗೆ ಅನಾಮಿಕನೊಂದಿಗೆ ಆರಂಭವಾದ ಸಂಪರ್ಕ ಜವಾಬಳಿಗೊಂಡ ಈ ಎಲ್ಲ ದಾಖಲೆಗಳು ಸೋರಿಕೆಯಾಗಿದ್ದು 'ಮೊಸ್ಸಾಕ್ ಫೊನ್ಸೆಕಾ' ಎಂಬ ಒಂದು ಪನಾಮಾ ಮೂಲದ ಕಂಪನಿಯ ಕಚೇರಿಯಿಂದ. ಈ ಕಂಪನಿ ವಿದೇಶಗಳಿಗೆ ಅಕ್ರಮವಾಗಿ ಹಣ ಸಾಗಿಸಿ ಬೇನಾಮಿ ಕಂಪನಿಗಳನ್ನು ಆರಂಭಿಸುವ ಹರಾಮಕೋರರಿಗೆ ಮಧ್ಯವರ್ತಿಯಾಗಿ ಕೆಲಸ ಮಾಡುತ್ತಿದೆ. ಈ ಎಲ್ಲ ದಾಖಲೆಗಳು ಪನಾಮಾ ದೇಶದಿಂದ ಹೊರಬಿದ್ದಿರುವ ಕಾರಣ ಇವಕ್ಕೆ 'ಪನಾಮಾ ಪೇಪರ್ಸ್' ಎಂಬ ಅನ್ವರ್ಥನಾಮ ಬಂದಿದೆ. ಮೊಸ್ಸಾಕ್ ಫೊನ್ಸೆಕಾ ದಾಖಲೆಗಳಿಂದಾಗಿ ಸುಡ್‌ಡೂಯಿಷ್ ಜೈತುಂಗ್ ಪತ್ರಿಕಾ ಕಚೇರಿಗೆ ರಾಶಿರಾಶಿ ದಾಖಲೆಗಳು ಬಂದು ಜಮಾ ಆದವು. ಸಾಫ್ಟ್ ಕಾಪಿಯಲ್ಲಿ ಎನ್‌ಕ್ರಿಪ್ಟೆಡ್ ಆಗಿದ್ದ (ಬೇರೆಯವರು ಓದಲಾರದಂತೆ ನಿರ್ದಿಷ್ಟ ಕ್ರಮದಲ್ಲಿ ಸಂಕೇತ ಭಾಷೆಗೆ ಬದಲಾಯಿಸಿದ್ದು) ಫೈಲುಗಳ ಒಟ್ಟು ಪ್ರಮಾಣ 2.6 ಟೆರ್‍ರಾ ಬೈಟ್! ಅಂದರೆ 2600 ಗಿಗಾ ಬೈಟ್‌ನಷ್ಟು! ಒಟ್ಟು 1 ಕೋಟಿ 15 ಲಕ್ಷ ದಾಖಲೆಗಳು! 2,14,488 ಬೇನಾಮಿ ಕಂಪನಿಗಳ (ಅ)ವ್ಯವಹಾರಗಳು!! ಒಂದುವೇಳೆ ಇಷ್ಟು ದಾಖಲೆಗಳನ್ನು ಪುಸ್ತಕ ರೂಪದಲ್ಲಿ ಮುದ್ರಿಸಿದ್ದರೆ ಅದು ನೂರಾರು ಟ್ರಕ್ಕುಗಳಲ್ಲಿ ತುಂಬಬಹುದಾದಷ್ಟು ಭಾರೀ ಪ್ರಮಾಣದ ರಾಶಿ ಆಗುತ್ತಿತ್ತು.

ಈ ದಾಖಲಾತಿಗಳ ಮೇಲೆ ಕಣ್ಣಾಡಿಸಿದ ಜೈತುಂಗ್ ಪತ್ರಿಕೆಯ ತಂಡಕ್ಕೆ ಇವು ಮಹತ್ವದ ಆರ್ಥಿಕ ವ್ಯವಹಾರಕ್ಕೆ, ಕ್ಷಮಿಸಿ ಅವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳು ಎಂಬುದನ್ನು ಅರ್ಥಮಾಡಿಕೊಳ್ಳಲು ಬಹಳ ಕಾಲ ಹಿಡಿಯಲಿಲ್ಲ. ಜೈತುಂಗ್ ಪತ್ರಿಕೆಯ ನುರಿತ ತಂಡ, ತನ್ನ ಜೊತೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿರುವ 'ಇಂಟರ್‌ನ್ಯಾಷನಲ್ ಕನ್ಸಾರ್ಷಿಯಮ್ ಫಾರ್ ಇನ್ವೆಸ್ಟಿಗೇಟಿವ್ ಜರ್ನಲಿಸ್ಟ್ಸ್ (ಐಸಿಐಜೆ)' ಸಂಸ್ಥೆಯೊಂದಿಗೆ ಒಂದು ಒಪ್ಪಂದ ಮಾಡಿಕೊಂಡು ಜಂಟಿಯಾಗಿ ಈ ದಾಖಲಾತಿಗಳ ಅಧ್ಯಯನ ಕೈಗೊಂಡರು. ಈ ಐಸಿಐಜೆ ಸಂಸ್ಥೆ ಹಲವಾರು ವರ್ಷಗಳಿಂದ ಇಂಥದೇ ತನಿಖೆಯಲ್ಲಿ ತೊಡಗಿಸಿಕೊಂಡಿದ್ದು, ಈ ಹಿಂದೆಯೂ ನಾನಾದೇಶಗಳಿಗೆ ಸಂಬಂಧಿಸಿದ ಹತ್ತಾರು ಹಗರಣಗಳನ್ನು ಬಯಲಿಗೆಳೆದಿದೆ. ಈ ದಾಖಲಾತಿಗಳಲ್ಲಿರುವ ಮಾಹಿತಿಯನ್ನು ಪರಿಶೀಲಿಸಿ, ಅವುಗಳನ್ನು ಡಿಕೋಡ್ ಮಾಡುವ ಪ್ರಕ್ರಿಯೆಯಲ್ಲಿ ಹತ್ತಾರು ದೇಶಗಳ ನೂರಾರು ಪತ್ರಕರ್ತರನ್ನು ತೊಡಗಿಸಿಕೊಳ್ಳಲಾಗಿದೆ. ಭಾರತಕ್ಕೆ ಸಂಬಂಧಿಸಿದ ಹಲವಾರು ದಾಖಲಾತಿಗಳು ಕೂಡ ಕಂಡುಬಂದಿದ್ದರಿಂದ ಐಸಿಐಜೆ ಸಂಸ್ಥೆ ಇಂಡಿಯನ್ ಎಕ್ಸ್‌ಪ್ರೆಸ್ ಸಂಸ್ಥೆಯೊಂದಿಗೆ ಒಂದು ಒಪ್ಪಂದವನ್ನು ಮಾಡಿಕೊಂಡಿತು. ಹೀಗೆ ಭಾರತೀಯ ಪ್ರಜೆಗಳ ದಾಖಲಾತಿಗಳನ್ನು ಜಾಲಾಡಿ, ಅವುಗಳ ಪೂರ್ವಾಪರ ಕೆದಕುವ ಮಹತ್ತರ ಕಾರ್ಯದಲ್ಲಿ ಈ ಪತ್ರಿಕೆಯ ವೈದ್ಯನಾಥನ್ ಅಯ್ಯರ್, ರಿತು ಸರಿನ್, ಜಯ್ ಮಜುಂದಾರ್ ಮುಂತಾದ ನುರಿತ ಪತ್ರಕರ್ತರು ತೊಡಗಿಸಿಕೊಂಡಿದ್ದರು.

ಜಯ್ ಮಜುಂದಾರ್ ಪ್ರಕಾರ ಈ ಒಟ್ಟು ರಾಶಿಯಲ್ಲಿ "36,000 ಫೈಲುಗಳು ಭಾರತಕ್ಕೆ ಸಂಬಂಧಿಸಿದವು. ಅವುಗಳಲ್ಲಿ ಬಾಲಿವುಡ್ ತಾರೆಯರು, ಐಪಿಎಲ್ ಧಣಿಗಳು, ರಿಯಲ್ ಎಸ್ಟೇಟ್ ಕಂಪನಿಗಳು, ಕಂಪನಿ ಬಂಡವಾಳಿಗರು, ರಾಜಕಾರಣಿಗಳು ಇದ್ದಾರೆ. ನಮ್ಮ ತನಿಖಾ ಸಂಶೋಧನೆಯನ್ನು ಈ ಸದ್ಯ 50 ವ್ಯಕ್ತಿಗಳ ಮೇಲೆ ಮಾತ್ರ ಗಮನ ಕೇಂದ್ರೀಕರಿಸಲು ಸಾಧ್ಯವಾಗಿದೆ. ಇನ್ನೂ ಕಡತಗಳ ಅಧ್ಯಯನ ಮುಂದುವರೆದಿದೆ. ಹೀಗೆ ತನಿಖೆ ಮುಂದುವರೆದಂತೆಲ್ಲಾ ಮತ್ತಷ್ಟು ಹೆಸರುಗಳು ಸ್ಫೋಟಗೊಳ್ಳಲಿವೆ."

ಪನಾಮಾ ಪೇಪರ್ಸ್: ಭಾರತದ ಪಾಲೆಷ್ಟು?

ಪನಾಮಾ ಪೇಪರ್ಸ್‌ನಲ್ಲಿ 500ಕ್ಕಿಂತಲೂ ಹೆಚ್ಚು ಭಾರತೀಯ ವ್ಯಕ್ತಿಗಳು ಈ ಪ್ರಥಮ ಕಂತಿನಲ್ಲಿ ಸಿಕ್ಕಿಬಿದ್ದಿದ್ದಾರೆ. ಇದು ಮೊದಲ ಸಲವೋ ಅಥವ ಅಪರೂಪಕ್ಕೆ ಸಂಭವಿಸುವ ವಿದ್ಯಮಾನವೋ ಆಗಿಲ್ಲ, ಹಲವಾರು ದಶಕಗಳಿಂದಲೇ, ಇನ್ನೂ ನಿರ್ದಿಷ್ಟವಾಗಿ ಹೇಳಬೇಕೆಂದರೆ ಜಾಗತೀಕರಣ ಪ್ರಕ್ರಿಯೆ ಆರಂಭವಾದ ನಂತರದಲ್ಲಿ ಇಂಥಾ ದಂಧೆಗಳಿಗೆ ಕಡಿವಾಣವೇ ಇಲ್ಲದೇ ಸಾಗಿದೆ.

ತೆರಿಗೆ ಸ್ವರ್ಗ ಎಂದು ಕರೆಯಲಾಗುವ ದೇಶಗಳಲ್ಲಿ ಭಾರತೀಯ ಬಂಡವಾಳಿಗರು, ಭ್ರಷ್ಟ ರಾಜಕಾರಣಿಗಳು ಹಾಗೂ ಅಧಿಕಾರಿಗಳು ಸಾವಿರಾರು ಬೇನಾಮಿ ಕಂಪನಿಗಳ ಮಾಲಿಕತ್ವ ಹೊಂದಿರುವುದು ಪತ್ತೆಯಾಗಿದೆ. ಸೀಷೆಲ್ಸ್, ಮಾರಿಷಸ್, ಸಿಪ್ರಸ್, ಕೇಮನ್ಸ್ ಐಲ್ಯಾಂಡ್, ಬ್ರಿಟಿಷ್ ವರ್ಜಿನ್ ಐಲ್ಯಾಂಡ್, ಸಿಂಗಾಪುರ್, ಹಾಂಗ್‌ಕಾಂಗ್, ಬಹಾಮಾಸ್, ಪನಾಮಾ, ಬರ್ಮುಡಾ - ಹೀಗೆ ಸುಮಾರು 60ಕ್ಕೂ ಹೆಚ್ಚು ಪುಟ್ಟಪುಟ್ಟ ದೇಶಗಳೊಂದಿಗೆ ತೆರಿಗೆ ವಿನಾಯತಿ ಒಪ್ಪಂದಗಳನ್ನು ಏರ್ಪಡಿಸಿಕೊಂಡು ತಮ್ಮ ದೇಶದ್ರೋಹಿ ದಂಧೆಗೆ ರಾಜಮಾರ್ಗ ಮಾಡಿಕೊಂಡಿದ್ದಾರೆ. ಅಂತರರಾಷ್ಟ್ರೀಯ ಮಟ್ಟದ ಬಂಡವಾಳಿಗರೊಂದಿಗೆ ಭಾರತೀಯ ಬಂಡವಾಳಿಗರು, ಭ್ರಷ್ಟರು, ಭೂಗತ ಪಾತಕಿಗಳು ತಾವು ಯಾರಿಗೇನೂ ಕಮ್ಮಿಯಿಲ್ಲವೆಂಬಂತೆ ಪೈಪೋಟಿ ನಡೆಸಿದ್ದಾರೆ.

ಭಾರತದ ಕಾನೂನು ಏನನ್ನುತ್ತದೆ?

ನಮ್ಮ ಹಣ (ಸಂಪತ್ತು) ವಿದೇಶಗಳಿಗೆ ಹರಿದು ಹೋಗುವುದನ್ನು ನಿರ್ಬಂಧಿಸಲು ಕೆಲವು ನಿಯಮಗಳನ್ನು ರೂಪಿಸಲಾಗಿತ್ತು, ಜಾಗತೀಕರಣದ ಪ್ರಕ್ರಿಯೆ ಬಿರುಸುಗೊಂಡ ನಂತರ ಈ ಕಟ್ಟುನಿಟ್ಟಿನ ನಿಯಮಾವಳಿಗಳನ್ನು ವ್ಯವಸ್ಥಿತವಾಗಿ ಸಡಿಲಗೊಳಿಸುವ ಪ್ರಕ್ರಿಯೆ ಶುರುವಾಯಿತು. ಮೊದಲ ಬಾರಿಗೆ 2004ರಲ್ಲಿ ರಿಸರ್ವ್ ಬ್ಯಾಂಕ್ ಒಂದು ಆದೇಶ ಹೊರಡಿಸಿ, ಯಾವುದೇ ವ್ಯಕ್ತಿ ವಾರ್ಷಿಕ 25 ಸಾವಿರ ಡಾಲರ್, ಅಂದರೆ ಇಂದಿನ ವಿನಿಮಯ ಮೌಲ್ಯದಲ್ಲಿ

ಪನಾಮಾ ಪೂರ್ವಾಪರ

ಇಷ್ಟೆಲ್ಲಾ ಪರಿಣಾಮಕ್ಕೆ ಕಾರಣವಾಗಿರುವ ಪನಾಮಾ ದೇಶದ ಬಗ್ಗೆ ಒಂದಿಷ್ಟು ತಿಳಿದುಕೊಳ್ಳುವುದೂ ಕೂಡ ಸೂಕ್ತ. ಪನಾಮಾ ದೇಶ ಉತ್ತರ ಮತ್ತು ದಕ್ಷಿಣ ಅಮೆರಿಕಾ ಖಂಡಗಳನ್ನು ಕೂಡಿಸುವ ಒಂದು ಸಣ್ಣ ಪಟ್ಟಿಯಂತಹ ಭೂಭಾಗದಲ್ಲಿರುವ ಪುಟ್ಟ ದೇಶ. 1821ಕ್ಕಿಂತ ಮೊದಲು ಈ ದೇಶ ಸ್ಪಾನಿಷರ ಕೈವಶದಲ್ಲಿತ್ತು, ಅಲ್ಲಿಂದ 1903ರವರೆಗೆ ಕೊಲಂಬಿಯಾ ಅಧೀನದಲ್ಲಿತ್ತು, ಈಗ ಸ್ವತಂತ್ರ ದೇಶವಾಗಿ ಪನಾಮಾ ಗಣರಾಜ್ಯ ಎನಿಸಿಕೊಂಡಿದೆ.

ಈಗಿನ ಜನಸಂಖ್ಯೆ 40 ಲಕ್ಷಕ್ಕಿಂತ ಸ್ವಲ್ಪ ಕಡಿಮೆ. ಇದರ ರಾಜಧಾನಿ ಪನಾಮಾ ನಗರದಲ್ಲಿ ಈ ದೇಶದ ಅರ್ಧದಷ್ಟು ಜನರು ಅಂದರೆ ಸುಮಾರು 20 ಲಕ್ಷ ಮಂದಿ ವಾಸಿಸುತ್ತಾರೆ. ಈ ದೇಶದ ಜನಸಂಖ್ಯೆಯ ಶೇಕಡ 65 ಭಾಗ ಮೆಸ್ಟಿಜೋಗಳು, ಅಂದರೆ ತಂದೆ ಮತ್ತು ತಾಯಿ ವಿಭಿನ್ನ ಜನಾಂಗಗಳಿಗೆ ಸೇರಿದ ಮಿಶ್ರ ಜನಾಂಗೀಯರು. ಸ್ಥಳೀಯ ಪನಾಮಿಯನ್ನರ ಪ್ರಮಾಣ ಶೇಕಡ 13ಕ್ಕಿಂತಲೂ ಕಡಿಮೆ. ಈಗಲೂ ಸ್ಪಾನಿಷ್ ಈ ದೇಶದ ಅಧಿಕೃತ ಭಾಷೆ.


ಈ ದೇಶದ ಕರೆನ್ಸಿ ಪನಾಮಾ 'ಬಾಲ್ಬಾ'ಗಿಂತಲೂ ಅಮೆರಿಕದ ಡಾಲರ್ ಇಲ್ಲಿ ಹೆಚ್ಚು ಚಲಾವಣೆಯಲ್ಲಿದೆ. ಭಾರತ, ಬ್ರೆಜಿಲ್, ರಷ್ಯಾ ಮುಂತಾದ ಬೃಹತ್ ದೇಶಗಳ ಕರೆನ್ಸಿಗಳು ಅಮೆರಿಕನ್ ಡಾಲರ್‌ನೆದುರು ವಿನಿಮಯ ಮೌಲ್ಯವನ್ನು ದಿನೇದಿನೇ ಕಳೆದುಕೊಳ್ಳುತ್ತಾ ಸಾಗಿರುವ ಇದೇ ಹೊತ್ತಿನಲ್ಲಿ, ಪನಾಮಾದ ಕರೆನ್ಸಿ ಆಶ್ಚರ್ಯಕರವಾಗಿ ದಶಕಗಳಿಂದಲೂ ಅಮೆರಿಕನ್ ಡಾಲರ್‌ಗೆ ಸಮಾನವಾದ ವಿನಿಮಯ ಮೌಲ್ಯವನ್ನು ಹೊಂದಿದೆ.

ಇಂತಿಪ್ಪ ಪನಾಮಾ ದೇಶವನ್ನು ಬಳಸಿಕೊಂಡು ಸ್ವದೇಶಿ - ವಿದೇಶಿ ಬಂಡವಾಳಿಗರು ತಂತಮ್ಮಲ್ಲೇ ಶಾಮೀಲಾಗಿ ಸಾವಿರಾರು ಕೋಟಿ ಅಕ್ರಮ ಸಂಪತ್ತನ್ನು ಗುಪ್ತವಾಗಿ ರಾಶಿ ಹಾಕುವ ದಂಧೆಯಲ್ಲಿ ತೊಡಗಿದ್ದಾರೆ; ಭಾರತದ ಶತಕೋಟ್ಯಾಧಿಪತಿಗಳ ಸಂಖ್ಯೆಯೂ ಕಂಡಾಪಟ್ಟೆ ಏರಿಕೆಯಾಗುತ್ತಿದೆ. ಆದರೆ ನೆನಪಿರಲಿ, ಇದೇ ಸಂದರ್ಭದಲ್ಲಿ ಭಾರತವನ್ನು ಒಳಗೊಂಡಂತೆ ಹತ್ತಾರು ದೇಶಗಳಲ್ಲಿ ಜನತೆ ತಿನ್ನುವ ಅನ್ನಕ್ಕೆ ಪರದಾಡುತ್ತಿದ್ದಾರೆ, ರೈತರು ಆತ್ಮಹತ್ಯೆಯ ಹಾದಿಯಲ್ಲಿದ್ದಾರೆ. ಬಡಮಕ್ಕಳಿಗೆ ಆಸರೆಯಾಗಿದ್ದ ಶಾಲಾಕಾಲೇಜುಗಳು ಮತ್ತೆ ಇಂಥದೇ ಖಾಸಗಿ ಖದೀಮರ ಕೈವಶವಾಗುತ್ತಿವೆ. ಕೋಟ್ಯಾನುಕೋಟಿ ಜನರಿಗೆ ತಲೆಮೇಲೆ ಸೂರಿಲ್ಲ, ಆರೋಗ್ಯ ಕ್ಷೇತ್ರವಂತೂ ಸಂಪೂರ್ಣ ಸರ್ಕಾರದ ಕೈತಪ್ಪಿ ಬಡಜನತೆಗೆ ಆರೋಗ್ಯ ಸೇವೆ ಕನಸಿನಂತಾಗಿ ಹೋಗಿದೆ.

ಇಂಥಾ ಹತ್ತಾರು ಮೂಲಭೂತಸಮಸ್ಯೆಗಳನ್ನು ಇಷ್ಟು ವರ್ಷವಾದರೂ ಯಾಕೆ ಪರಿಹರಿಸಲಾಗಿಲ್ಲ ಎಂದು ಯಾರಾದರೂ ಪ್ರಶ್ನಿಸಿದರೆ ಉತ್ತರ ಸಿದ್ಧವಾಗಿದೆ. "ಏನು ಮಾಡೋದು? ದೇಶದಲ್ಲಿ ಸಂಪನ್ಮೂಲದ ಕೊರತೆಯಿದೆ." ಇದೇ ಸಂದರ್ಭದಲ್ಲಿ ಹೊರಬರುತ್ತಿರುವ ಹಗರಣಗಳು ಸಾವಿರಾರು ಕೋಟಿಗಳನ್ನು ಮೀರಿ ಈಗ ಲಕ್ಷ ಕೋಟಿಗಳವರೆಗೂ ತಲುಪಿದೆ. ಹೀಗಿರುವಾಗ ಇದು ಸಂಪನ್ಮೂಲದ ಕೊರತೆಯಿಂದಾದ ಸಮಸ್ಯೆಯಲ್ಲ ಎಂದಾಯಿತು.

ಹಾಗಾದರೆ ಈ ಸಮಸ್ಯೆಯ ಮೂಲವೇನು? ಅದನ್ನು ಪರಿಹರಿಸಿ ಜನಪರವಾದ, ನ್ಯಾಯೋಚಿತವಾದ ಒಂದು ಪರ್ಯಾಯ ವ್ಯವಸ್ಥೆಯನ್ನು ತರಲು ನಾವುಗಳು ಮಾಡಬೇಕಿರುವುದೇನು?

ದಾವಣಗೆರೆ: ಶಾಮನೂರು ಧಣಿಯ ಮುಪ್ಪಿನ ರಾಜಕಾರಣ



ಶಾಮನೂರು

ಒಂದು ಕಾಲಕ್ಕೆ ದಾವಣಗೆರೆ ರಾಜಕಾರಣದಲ್ಲಿ ...ಮನೂರು ಶಿವಶಂಕರಪ್ಪನವರಿಗೆ ಪರ್ಯಾಯವೇ ಇರಲಿಲ್ಲ ...ಡೀ ಕಾಟನ್ ಸಿಟಿಯೇ ಶಾಮನೂರು ಧಣಿಯ ಬಿಗಿಯ ...ತ್ತು, ಅಂತ ಶಾಮನೂರು ಶಿವಶಂಕರಪ್ಪನವರ ರಾಜಕಾರಣ ...ವತ್ತು ವಯಸ್ಸಿನ ಜೊತೆಗೆ ಮುಪ್ಪಡರಿಸಿಕೊಳ್ಳುತ್ತಿದೆ. ...ಂಗ್ರೆಸ್ ಪಕ್ಷದ ಕಾಯಂ ಖಜಾಂಚಿಯ ಪೊಲಿಟಿಕಲ್ ...ನಾನ ಮಗ ಎಸ್.ಎಸ್.ಮಲ್ಲಿಕಾರ್ಜುನ್‌ರ ಹುಮ್ಮಸ್ಸೂ ...ಸಿಯುವಂತೆ ಮಾಡುತ್ತಿದೆ. ಹಾಗೆ ನೋಡಿದರೆ ...ಶಂಕರಪ್ಪನ ಅಜಮಾಸು 50 ವರ್ಷಗಳ ರಾಜಕಾರಣವೇ ...ೀಲು-ಗೆಲುವುಗಳ ತಿರುವುಗಳನ್ನು ನೋಡಿಕೊಂಡೇ ...ದಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಶಾಮನೂರು ...ಮಿಲಿ ಅನುಭವಿಸುತ್ತಿರುವ ಹಿನ್ನಡೆಗಳು ಸಾಕಷ್ಟು ...ಭೀರವಾದಂತವು.

ಕರ್ನಾಟಕ ಕಾಂಗ್ರೆಸ್ ಪಾಲಿಗೆ ಕುಬೇರನಂತೆ ಕಾಯಂ ...ಜಾಂಚಿಯಾಗಿ ಮಿಂಚಿದ ಶಿವಶಂಕರಪ್ಪನವರಿಗೆ ಅದ್ಯಾಕೊ ... ಪಾರ್ಟಿ ಸೂಕ್ತ ಮನ್ನಣೆಯನ್ನೇ ಕೊಡಲಿಲ್ಲ. ಖಜಾಂಚಿ ...ದ್ದೆಯ ಹೊರತಾಗಿ ಕೈ ಪಾರ್ಟಿ ಯಾವತ್ತೂ ಉನ್ನತ ...ನವನ್ನು ದಯಪಾಲಿಸಲಿಲ್ಲ. ಶಿವಶಂಕರಪ್ಪನವರಿಗೆ ...ಮ್ಮೆಯಾದರು ಪಕ್ಷದ ರಾಜ್ಯಾಧ್ಯಕ್ಷನಾಗಬೇಕೆನ್ನುವ ತುಡಿತ ...ತ್ತಾದರು ಅವರು ಅದಕ್ಕೆಂದು ಎಂದೂ ಹಠ ಹಿಡಿದು ...ರಲಿಲ್ಲ. ಅಧ್ಯಕ್ಷರ ಆಯ್ಕೆ ನಡೆಯುವಾಗಲೆಲ್ಲ ...ಶಂಕರಪ್ಪನವರ ಹೆಸರು ಹರಿದಾಡುತಿತ್ತೇ ಹೊರತು ...ರ ಕನಸು ಈಡೇರಲೇ ಇಲ್ಲ. ಕೊನೆಗೆ ಅಖಿಲ ಭಾರತ ...ರಶೈವ ಮಹಾಸಭಾದ ಅಧ್ಯಕ್ಷರಾದರೆ ಜಾತಿರಾಜಕಾರಣಕ್ಕೆ ...ದರಿಯಾದರು ಹೈಕಮಾಂಡ್ ತನಗೆ ಅಧ್ಯಕ್ಷಗಾದಿ ...ಸಿಕೊಡುತ್ತೆ ಅಂತ ಸಿಕ್ಕಾಪಟ್ಟೆ ಶ್ರಮ ವಹಿಸಿ ವೀರಶೈವ ...ಭಾದ ಅಧ್ಯಕ್ಷರಾದರೂ ಶಿವಶಂಕರಪ್ಪನವರಿಗೆ ವಯಸ್ಸೇ ...ತ್ತಿಯಾಯ್ತು.

ತನಗೆ ಒಲಿಯದ ಅಧಿಕಾರದ ರುಚಿ ಮಕ್ಕಳಿಗಾದರು ...ಗಿಬರಲಿ ಅಂತ ಕೊನೆಯ ಪುತ್ರ ಮಲ್ಲಿಕಾರ್ಜುನನನ್ನು ...ವಣಗೆರೆ ರಾಜಕೀಯದಂಗಳಕ್ಕೆ ತಂದು ಶಾಸಕನನ್ನಾಗಿಸಿದ ...ಮನೂರು ಧಣಿ ಮಗನನ್ನು ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ಆಟದ ಮಂತ್ರಿಯನ್ನಾಗಿಯೂ ಮಾಡಿದ್ದರು. 1999ರಲ್ಲಿ ದಾವಣಗೆರೆಯ ಅಖಂಡ ವಿಧಾನಸಭಾ ಕ್ಷೇತ್ರವನ್ನು ಮಗನಿಗೆ ಬಿಟ್ಟುಕೊಟ್ಟ ಶಾಮನೂರರ ಯತ್ನ ಆ ಮೂಲಕ ಸಾರ್ಥಕವಾಗಿತ್ತು. ಸತತ ನಲ್ವತ್ತು ವರ್ಷಗಳ ರಾಜಕಾರಣ ಮಾಡಿಕೊಂಡು, ಕಾಂಗ್ರೆಸ್ ಪಕ್ಷಕ್ಕೆ ನಿಷ್ಠರಾಗಿದ್ದ ಆ ಕುಟುಂಬಕ್ಕೆ ಒಲಿದುಬಂದ ಮೊದಲು ಮಂತ್ರಿಗಿರಿ ಅದಾಗಿತ್ತು. ಸದ್ಯ ಮಗನ ಮೂಲಕವಾದರೂ ಮನೆತನದಲ್ಲಿ ಮಂತ್ರಿ ಪದವಿ ಸಿಕ್ಕಿತಲ್ಲಾ ಎನ್ನುವ ಸಣ್ಣದೊಂದು ಸಮಾಧಾನವಷ್ಟೇ ಧಣಿಗೆ ಉಳಿದದ್ದು.

ಕ್ರೀಡಾ ಮಂತ್ರಿ ಕಮ್ ಜಿಲ್ಲಾ ಉಸ್ತುವಾರಿ ಸಚಿವನಾಗಿ ಎಸ್.ಎಸ್. ಮಲ್ಲಿಕಾರ್ಜುನ್ ಸಾಕಷ್ಟು ಕೆಲಸ ಮಾಡಿದರೂ ಅದ್ಯಾಕೊ ಮಲ್ಲಿಕಾರ್ಜುನರ ಪೊಲಿಟಿಕಲ್ ಗ್ರಾಫ್ ಆಶಾದಾಯಕವಾಗಿ ಮೇಲೇರಲೇ ಇಲ್ಲ. 2005ರ ವಿಧಾನಸಭಾ ಚುನಾವಣೆಯಲ್ಲಿ ದಾವಣಗೆರೆಯಿಂದ ಶಿವಶಂಕರಪ್ಪ ಶಾಸಕರಾದ ನಂತರ ಮಗ ಮಲ್ಲಿಕಾರ್ಜುನ್‌ನನ್ನು ದಾವಣಗೆರೆ ಪಾರ್ಲಿಮೆಂಟಿಗೆ ನಿಲ್ಲಿಸಿ, ದಿಲ್ಲಿ ಹೈಕಮಾಂಡ್ ಅಂಗಳಕ್ಕೇ ತಳ್ಳಲು ಧಣಿ ಕಸರತ್ತು ಮಾಡಿದ್ದರು. ಆದರೆ ದಾವಣಗೆರೆ ಜನ ಶಾಸಕನನ್ನಾಗಿ ಒಪ್ಪಿಕೊಂಡಿದ್ದ ಮಲ್ಲಿಕಾರ್ಜುನರನ್ನು ಸಂಸದನನ್ನಾಗಿ ನೋಡಲು ಬಯಸಲೇ ಇಲ್ಲ. ಒಂದಲ್ಲ, ಸತತ ಎರಡು ಬಾರಿ ಎಂ.ಪಿ. ಚುನಾವಣೆಯಲ್ಲಿ ಮಲ್ಲಿಕಾರ್ಜುನ ಸೋಲನುಭವಿಸ ಬೇಕಾಯ್ತು. ಆದರೆ 2013ರ ವಿಧಾನಸಭಾ ಚುನಾವಣೆಯಲ್ಲಿ ದಾವಣಗೆರೆ ದಕ್ಷಿಣದಿಂದ ಶಿವಶಂಕರಪ್ಪ ಶಾಸಕರಾದರೆ, ದಾವಣಗೆರೆ ಉತ್ತರದಿಂದ ಮಲ್ಲಿಕಾರ್ಜುನನನ್ನು ಶಾಸಕನನ್ನಾಗಿಸಿಕೊಳ್ಳುವಲ್ಲಿ ಶಾಮನೂರು ಯಶಸ್ವಿಯಾದರು. ಆದರೂ ಪಾರ್ಲಿಮೆಂಟ್ ಚುನಾವಣೆಯ ಸೋಲಿನ ಕಹಿ ಅವರನ್ನು ಕಾಡುತ್ತಲೇ ಇತ್ತು. ಹೇಗಾದರು ಮಾಡಿ ಮಗನನ್ನು ಸಂಸದನ್ನಾಗಿಸಲೇಬೇಕೆಂಬ ಹಠಕ್ಕೆ ಬಿದ್ದ ಶಾಮನೂರು 2014ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಮಗನನ್ನು ಮತ್ತೆ ಕಣಕ್ಕಿಳಿಸಿದ್ದರು. ರಾಜ್ಯ ಬಿಜೆಪಿ ಸರ್ಕಾರದ ದುರಾಡಳಿತದಿಂದ ಬೇಸತ್ತ ಜನ ಖಂಡಿತವಾಗಿಯೂ ವಿಧಾನಸಭಾ ಚುನಾವಣೆಯಲ್ಲಿ ಕೈಹಿಡಿದಂತೆ ಇಲ್ಲೂ ಕೈ ಹಿಡಿಯುತ್ತಾರೆ, ಜೊತೆಗೆ ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ ಏಳರಲ್ಲಿ ಕಾಂಗ್ರೆಸ್ ಶಾಸಕರೇ ಇದ್ದಾರೆ. ಹಾಗಾಗಿ ಮಗ ಗೆಲ್ಲೋದು ಗ್ಯಾರಂಟಿ ಅನ್ನೋ ಅಂದಾಜು ಶಿವಶಂಕರಪ್ಪನವರದ್ದಾಗಿತ್ತು. ಆದರೆ ಮಾಧ್ಯಮಗಳು ಹುಟ್ಟುಹಾಕಿದ್ದ ಸೂಡೊ ಮೋದಿ ಅಲೆಯಿಂದಾಗಿ ಮಲ್ಲಿಕಾರ್ಜುನ್ ಮತ್ತೆ ಸೋಲನುಭವಿಸ ಬೇಕಾಯ್ತು. ಅಲ್ಲಿಗೆ ಶಾಮನೂರು ಫ್ಯಾಮಿಲಿಯ ಪೊಲಿಟಿಕಲ್ ಪ್ರಭಾವ ಸಿಟಿ ವ್ಯಾಪ್ತಿಯನ್ನು ಬಿಟ್ಟು ಗ್ರಾಮೀಣ ದಾವಣಗೆರೆಗೆ ಪಸರಿಸಿಲ್ಲ ಅನ್ನೋದು ಗ್ಯಾರಂಟಿಯಾದಂತಾಗಿತ್ತು.

ಈ ಸತತ ಸೋಲುಗಳು ಎಸ್.ಎಸ್.ಮಲ್ಲಿಕಾರ್ಜುನರನ್ನು ವಿಪರೀತ ಖಿನ್ನರನ್ನಾಗಿಸಿರಬೇಕು. ಆತ ಜನರ ನಡುವೆ ಕಾಣಿಸಿಕೊಳ್ಳುವುದನ್ನೇ ಬಿಟ್ಟು ಬಂಗಲೆ ಸೇರಿಕೊಂಡರು. ನೆಪಕ್ಕೆಂಬಂತೆ ಆಗೊಮ್ಮೆ, ಈಗೊಮ್ಮೆ ಮುಖ ತೋರಿಸಿದ್ದನ್ನು ಬಿಟ್ಟರೆ ಮೊದಲಿದ್ದ ಮಲ್ಲಿಕಾರ್ಜುನ್ ಹುಮ್ಮಸ್ಸೇ ಆತನಲ್ಲಿ ನಾಪತ್ತೆಯಾಗಿತ್ತು. ಇತ್ತ 2013ರ ವಿಧಾನಸಭಾ ಚುನಾವಣೆಯಲ್ಲಿ ದಾವಣಗೆರೆ ಜಿಲ್ಲೆಯ ಎಂಟು ಕ್ಷೇತ್ರಗಳಲ್ಲಿ ಏಳರಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನೇ ಗೆಲ್ಲಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದ ಶಾಮನೂರು ಶಿವಶಂಕರಪ್ಪನವರಿಗೆ ಲಿಂಗಾಯತ ಕೋಟಾದಲ್ಲಿ ಮಂತ್ರಿಗಿರಿ ದಕ್ಕಿತ್ತಾದರೂ ಅಷ್ಟರಲ್ಲಾಗಲೇ ದೇಹಕ್ಕೆ ಅಡರಿದ್ದ ಮುಪ್ಪು ಅವರನ್ನು ಮೂಲೆ ಹಿಡಿಯುವಂತೆ ಮಾಡಿದೆ. ಸೋಲಿನಿಂದ ಕಂಗೆಟ್ಟ ಮಗ ಮೊದಲಿನಂತೆ ಕ್ರಿಯಾಶೀಲವಾಗಿ ಕಾಣಿಸಿಕೊಳ್ಳುತ್ತಿಲ್ಲ, ತಂದೆಗೆ ಅಧಿಕಾರವಿದ್ದರೂ ವೃದ್ಧತೆಯ ಕಾರಣಕ್ಕೆ ಪಕ್ಷ ಸಂಘಟಿಸಲು ಸಾಧ್ಯವಾಗುತ್ತಿಲ್ಲ. ಹಾಗಾಗಿ ಜಿಲ್ಲೆಯಲ್ಲಿ ದಿನೇದಿನೇ ಕಾಂಗ್ರೆಸ್ ಸೊರಗುತ್ತಿದೆ. ಇದನ್ನೇ ಬಂಡವಾಳ ಮಾಡಿಕೊಂಡ ರವೀಂದ್ರನಾಥ, ರೇಣುಕಾಚಾರಿಯಂತಹ ಬಿಜೆಪಿ ಚಿಡ್ಡಿಗಳು ಬಾಲ ಬಿಚ್ಚಲು ಶುರುಮಾಡಿವೆ.

ಜಾತಿ ಬಲಾಢ್ಯತೆ


ದಾವಣಗೆರೆ ರಾಜಕಾರಣ ಮೇಲ್ನೋಟಕ್ಕೆ ವ್ಯಕ್ತಿ ರಾಜಕಾರಣದ ಕೇಂದ್ರದಂತೆ ಕಂಡುಬಂದರೂ ಇಲ್ಲಿ ಜಾತಿರಾಜಕಾರಣವೇ ಡಿಸೀಸಿವ್ ಅಂಶ. ದಾವಣಗೆರೆಯಲ್ಲಿ ಸಾಧು ಲಿಂಗಾಯತರ ಮತಗಳೇ ನಿರ್ಣಾಯಕ. ಹಾಗಾಗಿಯೇ ಲಿಂಗಾಯತ ಮಠಗಳು ಈ ಭಾಗದಲ್ಲಿ ಪ್ರಭಾವಿ ಪೊಲಿಟಿಕಲ್ ಎಲಿಮೆಂಟುಗಳಂತೆ ವರ್ತಿಸೋದು. ಹಾಗೆ ನೋಡಿದರೆ ಚನ್ನಯ್ಯ ಒಡೆಯರ್ ಲಿಂಗಾಯತೇತರ ಎಂ.ಪಿ.ಯಾಗಿ ಮೂರು ಬಾರಿ ಕೈ ಪಾರ್ಟಿಯಿಂದ ಗೆದ್ದು ಮುತ್ಸದ್ದಿ ರಾಜಕಾರಣ ಮಾಡಿದ್ದರು. ಆಗೆಲ್ಲ ದಿ|| ಟಿ.ವಿ. ಚಂದ್ರಶೇಖರಪ್ಪ ಮತ್ತು ಒಡೆಯರ್ ನಡುವೆ ಪಾರ್ಲಿಮೆಂಟ್ ಚುನಾವಣೆಗಾಗಿ ಪೈಪೋಟಿ ನಡೆಯುತ್ತಿತ್ತು. ಆದರೂ ಒಡೆಯರ್ ಮೂರು ಬಾರಿ ಎಂ.ಪಿ.ಯಾದರು. ಒಡೆಯರ್ ಗತಿಸಿದ ನಂತರ ಆ ಜಾಗಕ್ಕೆ ಶಾಮನೂರರ ಹೆಸರೇ ಅನಾಯಾಸವಾಗಿ ತೇಲಿಬಂತು.

ದಾವಣಗೆರೆಯಲ್ಲಿ ಜಾತಿರಾಜಕಾರಣದ ಸುಳಿವಿಡಿದ ಬಿಜೆಪಿ, ಭೀಮಸಮುದ್ರದ ಜಿ. ಮಲ್ಲಿಕಾರ್ಜುನಪ್ಪ ಎಂಬ ಅಡಿಕೆ ಧಣಿಯನ್ನು ಎಳೆತಂದು ಅಖಾಡಕ್ಕಿಳಿಸಿತು. ಅದುವರೆಗೂ ಅಡಿಕೆಮಂಡಿ ದಂಧೆಯಲ್ಲಿ ಪಳಗುತ್ತಲೇ ಭೀಮಸಮುದ್ರ ಎಂಬ ಗ್ರಾಮ ಪಂಚಾಯ್ತಿ ರಾಜಕಾರಣ ಮಾಡಿಕೊಂಡಿದ್ದ ಮಲ್ಲಿಕಾರ್ಜುನಪ್ಪ ಶ್ರೀಮಂತನೆನ್ನುವ ಕಾರಣಕ್ಕೆ ಬಿಜೆಪಿ ಆತನಿಗೆ ಮಣೆ ಹಾಕಿತ್ತು. ಅಲ್ಲಿಂದಲೇ ದಾವಣಗೆರೆ ಪಾರ್ಲಿಮೆಂಟ್ ಚುನಾವಣೆಯಲ್ಲಿ ಒಂದೆ ಜಾತಿಯವರಿಬ್ಬರ (ಸಾಧು ಲಿಂಗಾಯತ) ನಡುವೆ ಚುನಾವಣೆ ಜಾತಿರಂಗು ಪಡೆಯಿತು. ಶಾಮನೂರು ಶಿವಶಂಕರಪ್ಪನವರಿಗೆ ದಾವಣಗೆರೆ ಸಿಟಿ ಮತ್ತು ಆಜುಬಾಜಿನ ಕೆಲ ಊರುಗಳಲ್ಲಿ ಸಖತ್ ಖದರ್ ಇತ್ತಾದರೂ ಇಡಿಯಾಗಿ ದಾವಣಗೆರೆ ಜಿಲ್ಲೆಗೆ ಅದು ವ್ಯಾಪಿಸಲಿಲ್ಲ. ಹಾಗಾಗಿ ಗ್ರಾಮೀಣ ಸಾಧು ಲಿಂಗಾಯತ ಮತಗಳು ಬಿಜೆಪಿಯ ಮಲ್ಲಿಕಾರ್ಜುನಪ್ಪನ ಪಾಲಾಗಲು ಶುರುವಾದವು. ಎಂಪಿ ಚುನಾವಣೆಯಲ್ಲಿ ಎಸ್.ಎಸ್.ಮಲ್ಲಿಕಾರ್ಜುನ್ ಸೋಲುವುದಕ್ಕೆ ಇದೇ ಪ್ರಮುಖ ಕಾರಣ.

ಇತ್ತೀಚಿನ ದಿನಗಳಲ್ಲಿ ದಾವಣಗೆರೆ ಸಿಟಿಯೊಳಗೂ ಶಾಮನೂರು ಧಣಿಯ ವೈಭವಕ್ಕೆ ವಯಸ್ಸು ಅರ್ಧರಿ ಸೊಂಟ ಬಾಗಿದಂತಿದೆ. ಯಾಕೆಂದರೆ 2010ರ ಜಿ.ಪಂ. ಚುನಾವಣೆಯಲ್ಲಿ 34 ಕ್ಷೇತ್ರಗಳ ಪೈಕಿ ಬಿಜೆಪಿಯ 18 ಮಂದಿ ಗೆದ್ದರೆ, ಕೈ ಪಾರ್ಟಿಯ 16 ಸದಸ್ಯರಷ್ಟೇ ಗೆಲುವಿನ ನಗೆ ಬೀರಲು ಸಾಧ್ಯವಾದದ್ದು. ಅದಾದ ಮೇಲೆ ನಡೆದ 2013ರ ದಾವಣಗೆರೆ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಒಟ್ಟು 41 ವಾರ್ಡುಗಳಲ್ಲಿ 39 ವಾರ್ಡುಗಳಲ್ಲಿ ಕೈ ಸದಸ್ಯರೇ ವಿಜಯ ಸಾಧಿಸಿದರಾದರೂ ಅಪ್ಪ-ಮಗನಲ್ಲಿ ಹೇಳಿಕೊಳ್ಳುವಂತಹ ಹುಮ್ಮಸ್ಸು ತುಂಬಲಿಲ್ಲ. ಮೊನ್ನೆ ನಡೆದ ಜಿ.ಪಂ. ಚುನಾವಣೆ ಮತ್ತು ತಾ.ಪಂ. ಚುನಾವಣೆಗಳಲ್ಲೂ ತಂದೆ-ಮಗನ ರಾಜಕೀಯ ಚದುರಂಗದಾಟ ಗೆಲುವು ಸಾಧಿಸಲು ಸಾಧ್ಯವಾಗಲೇ ಇಲ್ಲ. ಆ ಚುನಾವಣೆಯಲ್ಲಿ ಬಿಜೆಪಿ 22 ಸ್ಥಾನ ಗಳಿಸಿದರೆ, ಅಪ್ಪ-ಮಗ ಇಬ್ಬರೂ ಶಾಸಕರಾಗಿದ್ದೂ ಏಳು ಮಂದಿ ಎಂಎಲ್‌ಎಗಳನ್ನು ಇಟ್ಟುಕೊಂಡೂ ಕಾಂಗ್ರೆಸ್ ಗೆದ್ದಿರೋದು ಕೇವಲ 8 ಸ್ಥಾನಗಳಲ್ಲಿ ಮಾತ್ರ.

ಸೂಕ್ಷ್ಮವಾಗಿ ಗಮನಿಸಿದರೆ, ಶಾಮನೂರು ಫ್ಯಾಮಿಲಿಯ ಈ ಹತಾಶ ಸ್ಥಿತಿಗೆ ಅವರ ಕುಟುಂಬ ರಾಜಕಾರಣ ಎಷ್ಟು ಕಾರಣವೋ; ಕೈ ಪಕ್ಷದಿಂದ ಶಾಮನೂರು ಶಿವಶಂಕರಪ್ಪನತ್ತ ವ್ಯಕ್ತವಾದ ನಿರ್ಲಕ್ಷ್ಯವೂ ಅಷ್ಟೇ ಕಾರಣ ಅನ್ನಿಸುತ್ತೆ. ಈಗ ಮಂತ್ರಿಗಿರಿ ದಕ್ಕಿದೆಯಾದರೂ ಶಾಮನೂರು ಕಾಂಗ್ರೆಸ್‌ನೊಳಗೆ ಹೊಂದಿದ್ದ ಪ್ರಭಾವಕ್ಕೆ ತಕ್ಕುದಾದ ಖಾತೆಯಲ್ಲ. ಆ ಕುರಿತು ಖುದ್ದು ಶಾಮನೂರೇ ಅಸಮಾಧಾನ ಹೊರಹಾಕಿದ್ದಿದೆ. ಆದರೆ ತನ್ನ ಮಗನ ರಾಜಕೀಯ ಅಭ್ಯುದಯದ ಕಾರಣಕ್ಕಾಗಿ ಆ ಖಾತೆಯನ್ನು ಒಪ್ಪಿಕೊಂಡಂತಿದೆ. ವಯೋವೃದ್ಧತೆಯ ಜೊತೆಜೊತೆಗೆ ಈ ಅಸಮಾಧಾನವೂ ಅವರು ತಮ್ಮ ಖಾತೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳದೇ ಇರುವುದಕ್ಕೆ ಒಂದು ಕಾರಣ. ಹಾಗಾಗೇ ಅಸಮರ್ಥ, ಅಪ್ರಯೋಜಕ ಸಚಿವರುಗಳ ಪಟ್ಟಿಯಲ್ಲಿ ಅವರ ಹೆಸರು ಅಂಬಿಯ ಜೊತೆಜೊತೆಗೆ ಕಾಣಿಸಿಕೊಳ್ಳುತ್ತಿದೆ. ಅದೇನೇ ಇರಲಿ, ಶಾಮನೂರು ರಾಜಕಾರಣ ಮುಸುಕು ಮುಚ್ಚಿಕೊಳ್ಳುತ್ತಿರೋದು ಕೋಮುವಾದಿ ಚಿಡ್ಡಿಗಳಿಗೆ ಅವಕಾಶದ ಹೆಬ್ಬಾಗಿಲು ತೆರೆದಂತೆ ಮಾಡಿಟ್ಟಿದೆ. ಸೋಲಿನ ಹತಾಶೆಗೆ ಬಿದ್ದಿರುವ ಎಸ್.ಎಸ್.ಮಲ್ಲಿಕಾರ್ಜುನ್ ಮಟಿದೇಳುವುದೇ ಇದಕ್ಕೆ ಉತ್ತರವಾಗಬಲ್ಲದು.

■ ಟಿ.ಎನ್.ಷಣ್ಮುಖ



ಎಸ್.ಎಸ್. ಮಲ್ಲಿಕಾರ್ಜುನ್

...ಗಾರ್ಮೆಂಟ್ ಕಿಚ್ಚಿಗೆ

6⇦

...ಹೀಗೆ ಕನಿಷ್ಠ ವೇತನವೇ ಇಲ್ಲದೆ, ಕೊಡುವ ಪುಡಿಗಾಸು ...ಬಳವನ್ನು ಹೊಟ್ಟೆ-ಬಟ್ಟೆಗೆ ಸ್ವಾರ ಮಾಡಿಕೊಂಡು ...ದುಕುವ ಬಡ ಕಾರ್ಮಿಕರಿಗೆ ಪಿಎಫ್ ಹೊರತಾಗಿ ...ಶಿತಾಯದ ಆದಾಯವೇ ಇರುವುದಿಲ್ಲ. ಅಂತವರು ...ದ್ಯಂತರದಲ್ಲೇ ಮದುವೆ, ಅನಾರೋಗ್ಯ ಮಕ್ಕಳ ವಿದ್ಯಾಭ್ಯಾಸ ...ಥವಾ ಸ್ವಂತದ್ದೊಂದು ಸಣ್ಣ ಉದ್ದಿಮೆಯ ಸ್ವಾವಲಂಬನೆ ...ನ್ನು ಸಾಧಿಸಲು ಈ ನಿಯಮಗಳು ಅಡ್ಡಿಯಾಗುವುದಲ್ಲದೆ ...ರರನ್ನು ಪಿಎಫ್ ಆಸೆಗಾಗಿ ಕಡೇವರೆಗೆ ಕಾರ್ಮಿಕರ ...ಗಿಯೇ ಉಳಿಸುವ ಕರಾಳತೆಯನ್ನೂ ಹೊಂದಿವೆ. ...ವಿಗಾಗದ ಅನ್ನ ಇದ್ದರೆಷ್ಟು, ಬಿಟ್ಟರೆಷ್ಟು? ಕಾರ್ಮಿಕರನ್ನು ...ಚ್ಚಿಗೆಬ್ಬಿಸಿದ್ದೇ ಈ ವಿಚಾರ.

ಅಲ್ಲದೇ, ಹೊಸ ನಿಯಮಗಳ ಪ್ರಕಾರ ಪಿಎಫ್ ...ಯುವ ನಿವೃತ್ತಿ ವಯಸ್ಸನ್ನು 55 ರಿಂದ 58ಕ್ಕೆ ಏರಿಕೆ ...ಡಲಾಗಿದೆ. ಈ ಮೊದಲು ನಿವೃತ್ತಿ ವಯಸ್ಸಿಗೆ ಇನ್ನು ...ದು ವರ್ಷ ಇದೆ ಎನ್ನುವಾಗ, ಅಂದರೆ 54ನೇ ...ಯಸ್ಸಿನಲ್ಲಿ ತಾವು ಕೆಲಸದಿಂದ ನಿವೃತ್ತಿ ತೆಗೆದುಕೊಳ್ಳದೆಯೇ ...ಪಿಎಫ್ ಖಾತೆಯಲ್ಲಿರುವ ಶೇ.90ರಷ್ಟು ಹಣವನ್ನು ...ಯುವ ಅವಕಾಶವಿತ್ತು, ಅಂದರೆ ಒಂದು ಸಂಸ್ಥೆಯಲ್ಲಿ ...ಸ ಮಾಡುತ್ತಲೇ ಪಿಎಫ್ ಹಣವನ್ನು ಮುಂಚಿತವಾಗಿ ...ದು ಪರ್ಯಾಯ ಉದ್ದಿಮೆ ಅಥವಾ ಹೂಡಿಕೆಯಲ್ಲಿ ...ಡಗಿಸಿ, ನಿವೃತ್ತರಾಗುತ್ತಿದ್ದಂತೆಯೇ ಅದರಲ್ಲಿ ...ರ್ನಿರತರಾಗುವ ಅವಕಾಶವಿತ್ತು. ಆದರೆ ನಿವೃತ್ತಿ ...ಯಸ್ಸನ್ನು 58ಕ್ಕೆ ಏರಿಸುವುದರಿಂದ ಶೇ.90ರಷ್ಟು ಪಿಎಫ್ ... ಪಡೆಯಬೇಕೆಂದರೆ 57ನೇ ವಯಸ್ಸಿನವರೆಗೆ ...ಬೇಕು. ಒನ್ಸ್‌ಎಗೇನ್, ಆ ವಯಸ್ಸಿನಲ್ಲಿ ಪರ್ಯಾಯ ...ದ್ಯಮ ಮಾಡುವ ಹುಮ್ಮಸ್ಸೇ ಅವರಲ್ಲಿರುವುದಿಲ್ಲ. ಒಟ್ಟಾರೆಯಾಗಿ ಕಾರ್ಮಿಕರಿಗೆ ಮಾರಕವಾದ ನಿಯಮಗಳನ್ನೇ ಕೇಂದ್ರ ಸರ್ಕಾರ ಹೇರಲು ಹೊರಟಿದೆ.

ಕೇಂದ್ರ ಸರ್ಕಾರದ ಉಡಾಫೆ

ಇದಿಷ್ಟು ಕೇಂದ್ರ ಸರ್ಕಾರದ ಕಾರ್ಮಿಕದ್ರೋಹಿ ನೀತಿಯ ಮಾತಾಯಿತು. ಮೊನ್ನೆ ಬೆಂಗಳೂರಿನಲ್ಲಿ ಗಾರ್ಮೆಂಟ್ ಕಾರ್ಮಿಕರು ರೊಚ್ಚಿಗೇಳುವಲ್ಲಿ ಈ ಹೊಸ ನಿಯಮಗಳ ಜೊತೆಗೆ, ಕಾರ್ಮಿಕರತ್ತ ಕೇಂದ್ರ ಹೊಂದಿರುವ ಉಡಾಫೆಯೂ ಕಾರಣವಾಗಿದೆ. ಅಸಲಿಗೆ ಫೆಬ್ರವರಿ 10ರಂದೇ ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯವು ಈ ಹೊಸ ನಿಯಮಗಳ ಅಧಿಸೂಚನೆಯನ್ನು ಹೊರಡಿಸಿತ್ತು. ಸರ್ಕಾರಿ ಗೆಜೆಟ್‌ಗಳನ್ನು ಹೊರತುಪಡಿಸಿ ಸಾಮಾನ್ಯ ಜನರಿಗೆ ಈ ಮಾಹಿತಿಯನ್ನು ವ್ಯವಸ್ಥಿತವಾಗಿ ತಲುಪಿಸುವಲ್ಲೇ ಸರ್ಕಾರ ಸೋತಿತು. ತನ್ನ ಇಪಿಎಫ್‌ಒ ವೆಬ್‌ಪೋರ್ಟಲ್‌ನಲ್ಲೇ ಈ ಕುರಿತ ಯಾವ ಮಾಹಿತಿಯನ್ನೂ ಸರ್ಕಾರ ಪ್ರಕಟಿಸಲಿಲ್ಲ.

ಇದು ಕಾರ್ಮಿಕರಲ್ಲಿ ಅನಗತ್ಯ ಅಂತೆಕಂತೆಗಳು ಹರಿದಾಡಲು ಕಾರಣವಾಯ್ತು. ಅವತ್ತು ಬೆಂಗಳೂರಿನಲ್ಲಿ ಗಲಭೆ ನಡೆದ ದಿನ ಬೊಮ್ಮನಹಳ್ಳಿಯ ಜಾಕಿ ಫ್ಯಾಕ್ಟರಿ ಮುಂದೆ ಜಮಾಯಿಸಿದ್ದ ಹಲವರನ್ನು ಯಾಕೆ ಈ ಪ್ರತಿಭಟನೆ ಅಂತ ಮಾತಾಡಿಸಿದಾಗ ಬಹುಪಾಲು ಮಂದಿ 'ಇಷ್ಟು ದಿನ ನಮಗೆ ಡಬಲ್ ಪಿಎಫ್ (ನೌಕರ ಮತ್ತು ಕಂಪನಿ ಪಾಲು) ಕೊಡ್ತಿದ್ರು, ಇನ್ಮುಂದೆ ಸಿಂಗಲ್ ಪಿಎಫ್ ಮಾತ್ರ ಕೊಡ್ತಾರಂತೆ' ಅನ್ನೋ ಉತ್ತರ ಕೊಟ್ಟರು. ಅವರ ಗ್ರಹಿಕೆಯ ಪ್ರಕಾರ ಇನ್ಮುಂದೆ ಪಿಎಫ್ ಅಕೌಂಟಿಗೆ ಕಂಪನಿಗಳು ಪಾಲು ಹಾಕುವುದೇ ಇಲ್ಲ, "ನಮ್ಮಿಂದ ಸಂಗ್ರಹಿಸಿದ ಹಣವನ್ನು ನಮಗೇ ವಾಪಾಸ್ ಕೊಟ್ಟು ಕೈತೊಳೆದುಕೊಳ್ತಾರೆ, ಇದೆಲ್ಲಾ ಗಾರ್ಮೆಂಟ್ ಕಂಪನಿ ಮಾಲೀಕರುಗಳ ಹುನ್ನಾರ" ಎನ್ನುವ ಆಕ್ರೋಶವಿತ್ತು. ಹಾಗಾಗಿಯೇ ಅಷ್ಟೆಲ್ಲಾ ಕಾರ್ಮಿಕ ಸಂಘಟನೆಗಳಿದ್ದರೂ, ದೇಶವ್ಯಾಪಿ ಪ್ರತಿಭಟನೆ ಭುಗಿಲೇಳದೆ ಕೇವಲ ಬೆಂಗಳೂರಿನಲ್ಲಿ, ಅದರಲ್ಲೂ ಗಾರ್ಮೆಂಟ್ ನೌಕರರ ನಡುವೆಯೇ ಆಸ್ಫೋಟಿಸಿದ್ದು. ಹಾಗಾಗಿಯೇ ಪ್ರತಿಭಟನೆಯ ಮೊದಲ ದಿನ ಕಾರ್ಮಿಕರ ಆಕ್ರೋಶವೆಲ್ಲ ಕಂಪನಿ ಆಡಳಿತ ಮಂಡಳಿ ಮತ್ತು ಯಜಮಾನಿಕೆಗಳ ವಿರುದ್ಧವೇ ಕೇಂದ್ರೀಕೃತವಾಗಿತ್ತು. ಅದು ಕೇಂದ್ರ ಸರ್ಕಾರ ವಿರುದ್ಧದ ರೂಪತಳೆದು ಅವರೆಲ್ಲ ಗಾರ್ಮೆಂಟ್ ಕಂಪನಿಯ ಆವರಣ ಬಿಟ್ಟು ರಸ್ತೆಗಿಳಿದದ್ದೇ ಮೊದಲ ದಿನದ ಪ್ರತಿಭಟನೆಗೆ ಪ್ರತಿಯಾಗಿ ಚರ್ಚೆಗಳು ಶುರುವಾಗಿ ಅಸಲಿ ವಾಸ್ತವ ಮನದಟ್ಟಾದ ನಂತರ, ಅಂದರೆ ಎರಡನೇ ದಿನ.

ಕೇಂದ್ರ ಸರ್ಕಾರಕ್ಕೆ ಈ ವಿಷಯದಲ್ಲಿ ಅದೇತಂಹ ಉಡಾಫೆಯಿದೆಯೆಂದರೆ ಹೊಸ ನಿಯಮಗಳಿಂದಾಗುವ ಯಾವೊಂದು ಗೊಂದಲವನ್ನು ಪರಿಹರಿಸುವ ಕೆಲಸವನ್ನೇ ಮಾಡಿಲ್ಲ. ಉದಾ: ನೌಕರ ತನ್ನ ಪಿಎಫ್ ಖಾತೆಯಿಂದ ತನ್ನ ಪಾಲಿನ ಹಣವನ್ನು ಡ್ರಾ ಮಾಡಿಕೊಳ್ಳುತ್ತಾನೆ. ಆಗ ಆತನ ಅಕೌಂಟ್‌ನಲ್ಲಿ ಅರ್ಧ ಹಣ ಉಳಿದಿರುತ್ತೆ. ಅವನಿಗೆ 58 ವಯಸ್ಸಾಗುವವರೆಗೂ ಆ ಹಣಕ್ಕೆ ಬಡ್ಡಿ ನೀಡಲಾಗುತ್ತದೆಯೋ ಇಲ್ಲವೋ ಎನ್ನುವುದನ್ನು ಸ್ಪಷ್ಟಪಡಿಸಿಲ್ಲ. ಯಾಕೆಂದರೆ ಈಗಿರುವ ನಿಯಮಗಳ ಪ್ರಕಾರ ಯಾವುದೇ ಪಿಎಫ್ ಖಾತೆ ಸತತ 36 ತಿಂಗಳ ಕಾಲ ಹಣ ಹೂಡಿಕೆಯಾಗದಿದ್ದರೆ ಅದನ್ನು ನಿಷ್ಕ್ರಿಯ ಖಾತೆ ಎಂದು ಪರಿಗಣಿಸಿ ಬಡ್ಡಿಯನ್ನು ನಿಲ್ಲಿಸಲಾಗುತ್ತದೆ. ಈ ನಿಯಮ ಹೀಗೆ ಮುಂದುವರೆದ್ದರೆ ನೌಕರಿ ಬಿಟ್ಟು ಸ್ವಂತ ಉದ್ಯಮವನ್ನೋ ವಿಶ್ರಾಂತಿಯನ್ನೋ ಪಡೆಯುವವರಿಗೆ ಹೊಸ ನೀತಿಯ ಪ್ರಕಾರ ಖಾತೆಯಲ್ಲಿರುವ ಹಣಕ್ಕೆ ಬಡ್ಡಿ ಸಿಗುವುದಿಲ್ಲ.

ದುರ್ವರ್ತನೆಯ ಪೊಲೀಸ್‌ಗಿರಿ

ಅಷ್ಟಕ್ಕೂ ಕಾರ್ಮಿಕರು ಕೇಂದ್ರ ಸರ್ಕಾರ ಮತ್ತು ಪಿಎಫ್ ಸಂಘಟನೆಯ ವಿರುದ್ಧ ಸಿಟ್ಟಿಗೆದ್ದು ಬೀದಿಗಿಳಿದು ಪ್ರತಿಭಟಿಸಿದ್ದರೂ ಈ ಪರಿ ಹಿಂಸಾಚಾರ ನಡೆಯುವ ಜರೂರಿರಲಿಲ್ಲ. ಆದರೆ ಮೊದಲ ದಿನ ಪ್ರತಿಭಟನೆ ನಡೆಸುವಾಗ ಕಾರ್ಮಿಕರ ಜೊತೆ, ಅದರಲ್ಲೂ ಮಹಿಳಾ ಕಾರ್ಮಿಕರ ಜೊತೆ ಪೊಲೀಸರು ನಡೆದುಕೊಂಡ ರೀತಿಯಿದೆಯಲ್ಲ, ಅದು ಅವರ ಆಕ್ರೋಶಕ್ಕೆ ತುಪ್ಪ ಸುರಿದಿತ್ತು. ನಿಜ ಹೇಳಬೇಕೆಂದರೆ, ಎರಡನೇ ದಿನದ ಪ್ರತಿಭಟನೆ ನಡೆದದ್ದೇ ಹಿಂದಿನ ದಿನದ ಪೊಲೀಸ್‌ಗಿರಿಗೆ ಪ್ರತಿಯಾಗಿ. ಅದಕ್ಕೇ ಕಾರ್ಮಿಕರು ಪೊಲೀಸರನ್ನು, ಪೊಲೀಸ್ ಠಾಣೆಗಳನ್ನು, ಪೊಲೀಸ್ ವಾಹನಗಳನ್ನೇ ತಮ್ಮ ಗುರಿಯಾಗಿಸಿಕೊಂಡದ್ದು.

ಪೊಲೀಸರು ನಡೆಸಿದ ಲಾಠಿ ಚಾರ್ಜ್‌ಗಿಂತ ಹೆಚ್ಚಾಗಿ ಮಹಿಳಾ ಕಾರ್ಮಿಕರನ್ನು ಅವರು ತುಚ್ಛವಾಗಿ ಸಂಬೋಧಿಸಿದ ಪದಗಳು, ವ್ಯವಹರಿಸಿದ ರೀತಿಗಳೇ ಅವರನ್ನೆಲ್ಲ ಕೆರಳಿಸಿತ್ತು. ಹೋರಾಟಕ್ಕಾಗಿ ಬೀದಿಗಿಳಿದವರ ಮತ್ತು ಸೂಳೆಗಾರಿಕೆಗೆ ಬೀದಿಗಿಳಿದವರ ನಡುವಿನ ವ್ಯತ್ಯಾಸವೇ ಇಲ್ಲವೆನ್ನುವಂತೆ ಪೊಲೀಸರು ವರ್ತಿಸಿದ್ದು ನಿಜಕ್ಕೂ ಖಂಡನಾರ್ಹ. ಇದನ್ನೆಲ್ಲ ನೋಡಿದರೆ, ವರ್ತನೆಯ ಮಾತು ಒತ್ತಟ್ಟಿಗಿರಲಿ ಮೊದಲು ಪೊಲೀಸರು ತಮ್ಮ ಭಾಷೆಯ ಮೇಲೆ ನಿಗಾ ವಹಿಸಬೇಕಿದೆ.

ಅಂತೂ, ಯಾವುದೇ ಕಾರಣಗಳಿರಲಿ, ಒಟ್ಟಿನಲ್ಲಿ ಬೆಂಗಳೂರಿನಲ್ಲಿ ಭುಗಿಲೆದ್ದ ಗಾರ್ಮೆಂಟ್ ಕಾರ್ಮಿಕರ ಆಕ್ರೋಶ ಮೋದಿ ಸರ್ಕಾರವನ್ನು ತಕ್ಕಮಟ್ಟಿಗೆ ಮೆತ್ತಗಾಗಿಸಿದೆ. ಹಾಗಾಗಿಯೇ ಮೇ 1ರಂದು ಜಾರಿಗೆ ಬರಬೇಕಿದ್ದ ಈ ನಿಯಮವನ್ನು ಜುಲೈ 31ರವರೆಗೆ ತಡೆಹಿಡಿದು ಕಾರ್ಮಿಕ ಸಚಿವ ಬಂಡಾರು ದತ್ತಾತ್ರೇಯ ಆದೇಶ ಹೊರಡಿಸಿದ್ದಾರೆ. ಅಷ್ಟಕ್ಕೇ ಎಲ್ಲಾ ಮುಗಿದಂತೇನಲ್ಲ, ಯಾಕೆಂದರೆ ಮೋದಿ ಸರ್ಕಾರ ಜನರ ಆಶೋತ್ತರಗಳಿಗಿಂತ ಹೆಚ್ಚಾಗಿ ಮೊಂಡಾಟಕೆಯ ಸರ್ಕಾರ. ಸದ್ಯ ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಚುನಾವಣೆ ನಡೆಯುತ್ತಿರುವುದರಿಂದ ಪಕ್ಷದ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗದಿರಲಿ ಅಂತ ತಡೆಹಿಡಿಯುವ ನಿರ್ಧಾರಕ್ಕೆ ಬಂದಿದ್ದಾರೆ; ಸಂಪೂರ್ಣ ರದ್ದುಗೊಳಿಸಿಲ್ಲ...!!

■ ಗಿರೀಶ್ ತಾಳಿಕಟ್ಟೆ

ಎಚ್ಚೆತ್ತುಕೊಳ್ಳಿ ಸಿದ್ಧು



ಹಾಗೇ ನೋಡಿದರೆ ಸಿದ್ದು ಈ ರಾಜ್ಯ ಕಂಡ ಬಹಳಷ್ಟು ಮುಖ್ಯಮಂತ್ರಿಗಳಂತೆ ಭ್ರಷ್ಟರಲ್ಲ. ಅಂಥಾ ಕುಮಾರಸ್ವಾಮಿಯೇ ಡೀನೋಟಿಫಿಕೇಷನ್ ಕರ್ಮಕಾಂಡಕ್ಕೆ ಸಿಲುಕಿಬಿದ್ದರು. ಯಡ್ಡಿಯ ಬಗ್ಗೆಯಂತೂ ಹೇಳುವುದೇ ಅಸಹ್ಯ. ಧರಂಸಿಂಗ್, ಎಸ್.ಎಂ. ಕೃಷ್ಣ, ಪಟೇಲ್, ಬಂಗಾರಪ್ಪ, ಹೆಗಡೆ, ಮೊಯ್ಲಿ, ಗುಂಡೂರಾವ್, ಬೊಮ್ಮಾಯಿ ಮುಂತಾದವರಿಗೆ ಹೋಲಿಸಿದರೆ ಸಿದ್ದು ಯಾವುದೇ ಹಗರಣಕ್ಕೂ ಸಿಲುಕಿಬಿದ್ದವರಲ್ಲ. ಸಹಸ್ರಾರು ಲಕ್ಷ, ಕೋಟಿ ಮೌಲ್ಯದ ಗಣಿಲೂಟಿ, ಅದಕ್ಕಿಂತಲೂ ಭಯಾನಕ ಭೂಕಬಳಿಕೆಗಳು, ತುಂಡು ಗುತ್ತಿಗೆ, ವಿದ್ಯುತ್ ಖರೀದಿ, ಕಲ್ಲಿದ್ದಲು ಖರೀದಿ, ಲೋಕೋಪಯೋಗಿ ಟೆಂಡರ್ ಇತ್ಯಾದಿಗಳಿಗೆ ಹೋಲಿಸಿದರೆ ಸಿದ್ದು ಭ್ರಷ್ಟ ಮುಖ್ಯಮಂತ್ರಿಯಲ್ಲ. ಅವರ ವಿರೋಧಿಗಳು ಕೂಡ ಈ ಮಾತನ್ನು ವಿರೋಧಿಸುವುದಿಲ್ಲ.

ಅದು ಶಾಲಾಮಕ್ಕಳು ಸೇರಿದಂತೆ ಮಹಿಳೆಯರ ಮೇಲೆ ಪ್ರತಿನಿತ್ಯ ಒಂದಲ್ಲ ಒಂದು ರೇಪು, ಕಿಡ್ನಾಪು, ಕೊಲೆಗಳು ಸಂಭವಿಸುತ್ತಿದ್ದ ಕಾಲ. ಅಂಥದ್ದೇ ಒಂದು ಅಪರಾಹ್ನ ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬೇರೆ ಯಾವುದೋ ಸರ್ಕಾರಿ ಸಮಾರಂಭವೊಂದನ್ನು ಉದ್ಘಾಟಿಸಿ ಇನ್ನೇನು ತಮ್ಮ ಕಾರನ್ನೇರಬೇಕೆನ್ನುವಷ್ಟರಲ್ಲಿ ಕಾದಿದ್ದ ನ್ಯೂಸ್ ಚಾನಲ್ಲುಗಳವರೆಲ್ಲ ಅಟಕಾಯಿಸಿಕೊಂಡಿದ್ದೇ 'ಇವತ್ತು ಕೂಡ ಶಾಲಾ ಬಾಲಕಿಯೊಬ್ಬಳ ಮೇಲೆ ರೇಪಾಗಿದೆಯಲ್ಲ; ಇದು ಸರ್ಕಾರದ ನಿಷ್ಕ್ರಿಯತೆಯಲ್ಲವೆ....?' ಎಂದು ಕೇಳಿಯೇಬಿಟ್ಟರು!

ಮುಖ್ಯಮಂತ್ರಿಗಳಿಗೆ ಅದೆಲ್ಲಿತ್ತೋ ಸಿಟ್ಟು 'ಅಲ್ರೀ.... ಈ ರೇಪೂಗೀಪೂ ಬಿಟ್ರೆ ನಿಮಗೆ ಬೇರೆ ವಿಷಯಾನೇ ಸಿಗಲ್ವಾ? ನಾನ್‌ಸೆನ್ಸ್......!' ಎಂದಿದ್ದೇ ಕೆಂಡಮಂಡಲರಾಗಿಬಿಟ್ಟರು. ಇದ್ದನ್ನೇ ಚಾತಕಪಕ್ಷಿಗಳಂತೆ ನಿರೀಕ್ಷಿಸುತ್ತಿದ್ದ ಟೀವಿ ಕ್ಯಾಮರಾಗಳು 'ಶಾಲಾಮಕ್ಕಳ ಮೇಲಿನ ಅತ್ಯಾಚಾರಕ್ಕೆ ಸರ್ಕಾರದ ನಿಷ್ಕ್ರಿಯತೆಯ ಪ್ರಶ್ನೆಗೆ ಉತ್ತರಿಸಲಾಗದೇ ಮುಖ್ಯಮಂತ್ರಿಗಳು ತಾಳ್ಮೆಗೆಟ್ಟು ಪತ್ರಕರ್ತರ ಮೇಲೆಯೇ ರೇಗಿಬಿಟ್ಟರು....' ಎಂಬಂತೆ ಬ್ರೇಕಿಂಗ್ ನ್ಯೂಸ್ ಬಾರಿಸಿದ್ದೇ ಬಾರಿಸಿದ್ದು!

ಅಲ್ಲಿಗೆ ಮುಖ್ಯಮಂತ್ರಿ ಶಾಲಾಮಕ್ಕಳ ರಕ್ಷಣೆಯ ಕುರಿತಂತೆ ಕಂಡದ್ದು ಕೇಳಿದ್ದಕ್ಕೆ ಕೆಂಡದಂತೆ ಕೆರಳಿದರೆಂದೂ, ತನ್ನ ವೈಫಲ್ಯಕ್ಕೆ ಮುಖಕೊಡಲಾಗದೆ ಪತ್ರಕರ್ತರ ಮೇಲೆಯೇ ಹರಿಹಾಯ್ದರೆಂದೂ, ಉತ್ತರಿಸಲಾಗದೆ ಪರಾರಿಯಾದರೆಂದೂ ನ್ಯೂಸ್‌ಚಾನಲ್ಲುಗಳು ಘೋಷಿಸಿಬಿಟ್ಟವು. ಇದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಾರ್ವಜನಿಕವಾಗಿ ಹೇಗೆ ಯಾಮಾರಿದರೆಂಬುದಕ್ಕೆ ಸಣ್ಣ ಸ್ಯಾಂಪಲ್ಲಷ್ಟೆ.

ಸುಮ್ಮನೆ ಕಲ್ಪನೆಗೆ ಇದೇ ಪ್ರಸಂಗದಲ್ಲಿ ಪ್ರಧಾನಿ ಮೋದಿಯಿದ್ದಿದ್ದರೆ ಹೇಗೆ ವರ್ತಿಸುತ್ತಿದ್ದರೆಂಬುದನ್ನು ಕಲ್ಪಿಸಿ ನೋಡಿ. ಪತ್ರಕರ್ತರು ಕೆಣಕಿದ್ದೇ ಸಾಕೆಂದು ಕಾದು ಕೂತವನಂತೆ ವೀರಾವೇಶಕ್ಕೆ ನಿಂತ ಮೋದಿ 'ಯಾವ ಮಕ್ಕಳ ಮೇಲೆ ಕಾಮುಕರು ಅತ್ಯಾಚಾರವೆಸಗಿದ್ದಾರೋ ಆ ಎಲ್ಲಾ ಮಕ್ಕಳೂ ನನ್ನ ಮಕ್ಕಳು. ಒಂದು ಪಕ್ಷ ಅಂಥ ಮಕ್ಕಳ ಹೆತ್ತವರೇ ಅತ್ಯಾಚಾರಿಗಳನ್ನು ಕ್ಷಮಿಸಿಬಿಟ್ಟರೂ ನಾನು ಮಾತ್ರ ಕ್ಷಮಿಸಲಾರೆ. ಮಕ್ಕಳ ಮೇಲೆ ಅತ್ಯಾಚಾರವೆಸಗಿದ ಪಿಶಾಚಿಗಳನ್ನು ಗಲ್ಲಿಗೇರಿಸುವತನಕ ನಾನು ನಿದ್ರಿಸಲಾರೆ....' ಎಂದೆಲ್ಲ ಡೈಲಾಗ್ ಹೊಡೆಯುತ್ತಿರಲಿಲ್ಲವೆ?

ಆಡೋರ ಮುಂದೆ ಎಡವಿ...!

ಇದನ್ನೇ ಪಾಲಿಟಿಕ್ಸ್ ಆಫ್ ಇಮೇಜ್ ಬಿಲ್ಡಪ್ ಅನ್ನುವುದು. ಸಮಸ್ಯೆ ಆರೋಪಗಳೇನೇ ಇರಲಿ, ಅದು ತನ್ನ ವಿರುದ್ಧದ ಬಾಣವಾಗಿ ಪ್ರಯೋಗಿಸಲ್ಪಡುತ್ತಿದೆ ಎಂದು ಅರ್ಥವಾಯಿತೆಂದರೆ ಅದೇ ಅಸ್ತ್ರವನ್ನೇ ತನ್ನ ಬತ್ತಳಿಕೆಯ ಬಾಣವಾಗಿಸಿಕೊಳ್ಳುವುದು ಮತ್ತು ಲಾಭ ಮಾಡಿಕೊಳ್ಳುವುದು. ಇದಕ್ಕೆ ಮಹಾನ್ ರಾಜಕೀಯ ತಂತ್ರಗಾರಿಕೆಯೇನೂ ಬೇಕಿಲ್ಲ, ಸಾವಿರಾರು ಕೋಟಿಯ ಬಜೆಟ್ ಮಂಡಿಸಬೇಕಿಲ್ಲ, ಲಕ್ಷ ಲಕ್ಷ ಜನರ ರ‍್ಯಾಲಿಯ ಅಗತ್ಯವೂ ಇಲ್ಲ. ಸಣ್ಣದೊಂದು ತಾಳ್ಮೆ ವ್ಯವಧಾನ ಮತ್ತು ಚಾಲಾಕ್ ಟ್ರಿಕ್ಕು ಸಾಕು. ಅವತ್ತು ಸಿದ್ದು ಏಕೆ ಆ ರೀತಿ ಸಿಡುಕಿದರೋ ಯಾಮಾರಿದರೋ ಗೊತ್ತಿಲ್ಲ. ಸಾಮಾಜಿಕ ಅನಿಷ್ಟವೊಂದನ್ನು ಚಾಕಚಕ್ಯತೆಯಿಂದ ರಾಜಕೀಯವಾಗಿ ಲಾಭವಾಗಿಸಿಕೊಳ್ಳುವುದರಲ್ಲಂತೂ ಸಿದ್ದು ಎಡವಿಬಿಟ್ಟರು!

ಇದು ಸಿದ್ದು ವ್ಯಕ್ತಿತ್ವದ ಗುಣದೋಷಕ್ಕೊಂದು ಸಣ್ಣ ನಿದರ್ಶನವಷ್ಟೆ. ಯಾವ ಜನಕಲ್ಯಾಣವನ್ನೂ ಮಾಡದೆ, ಯಾವುದೇ ಸಾಮಾಜಿಕ ಅಭಿವೃದ್ಧಿಗೂ ಹೆಣಗದೆ ಕೇವಲ ತನ್ನ ಮಾತಿನ ವರಸೆಯಿಂದಲೇ ಮೋಡಿ ಮಾಡುವ ಮೋದಿಯೆಲ್ಲಿ? ಏನೆಲ್ಲ ಜನಪರ ಯೋಜನೆಗಳನ್ನು ಜಾರಿಗೆ ತಂದೂ ಅದನ್ನು ರಾಜಕೀಯವಾಗಿ ಎನ್‌ಕ್ಯಾಷ್ ಮಾಡಿಕೊಳ್ಳಲಾಗದೆ ಪೇಚಾಡುವ ಸಿದ್ದು ಎಲ್ಲಿ?



ಏಕೆ ಸಿದ್ದು ಪದೇಪದೇ ಎಡವಟ್ಟಿಗೆ ಬೀಳುತ್ತಿದ್ದಾರೆ? ಗೊತ್ತಿದ್ದೂ ಮತ್ತೆಮತ್ತೆ ಮಾಡಿದ ತಪ್ಪನ್ನೇ ಏಕೆ ಮಾಡುತ್ತಿದ್ದಾರೆ? ಇಷ್ಟೆಲ್ಲ ವರ್ಷಗಳ ಅವರ ಹೋರಾಟ, ಇಷ್ಟೊಂದು ಸುದೀರ್ಘ ಅವಧಿಯ ರಾಜಕೀಯ, ಅಧಿಕಾರದ ಜಿದ್ದಾಜಿದ್ದಿ, ತಂತ್ರ ಪ್ರತಿತಂತ್ರಗಳ ಒಳಮರ್ಮ ಎಲ್ಲ ಗೊತ್ತಿದ್ದೂ ಬಿದ್ದ ಹಳ್ಳಕ್ಕೇ ಬೀಳುತ್ತಿದ್ದಾರೆಂದರೆ ಒಂದೋ ಅವರದ್ದು ಉಡಾಫೆಯ ವ್ಯಕ್ತಿತ್ವ ಅಥವಾ ಸಿದ್ದು ಅಲ್ಪತೃಪ್ತ?

ಹಾಗೇ ನೋಡಿದರೆ ಸಿದ್ದು ಈ ರಾಜ್ಯ ಕಂಡ ಬಹಳಷ್ಟು ಮುಖ್ಯಮಂತ್ರಿಗಳಂತೆ ಭ್ರಷ್ಟರಲ್ಲ. ಅಂಥಾ ಕುಮಾರಸ್ವಾಮಿಯೇ ಡೀನೋಟಿಫಿಕೇಷನ್ ಕರ್ಮಕಾಂಡಕ್ಕೆ ಸಿಲುಕಿಬಿದ್ದರು. ಯಡ್ಡಿಯ ಬಗ್ಗೆಯಂತೂ ಹೇಳುವುದೇ ಅಸಹ್ಯ. ಧರಂಸಿಂಗ್, ಎಸ್.ಎಂ. ಕೃಷ್ಣ, ಪಟೇಲ್, ಬಂಗಾರಪ್ಪ, ಹೆಗಡೆ, ಮೊಯ್ಲಿ, ಗುಂಡೂರಾವ್, ಬೊಮ್ಮಾಯಿ ಮುಂತಾದವರಿಗೆ ಹೋಲಿಸಿದರೆ ಸಿದ್ದು ಯಾವುದೇ ಹಗರಣಕ್ಕೂ ಸಿಲುಕಿಬಿದ್ದವರಲ್ಲ. ಸಹಸ್ರಾರು ಲಕ್ಷ, ಕೋಟಿ ಮೌಲ್ಯದ ಗಣಿಲೂಟಿ, ಅದಕ್ಕಿಂತಲೂ ಭಯಾನಕ ಭೂಕಬಳಿಕೆಗಳು, ತುಂಡು ಗುತ್ತಿಗೆ, ವಿದ್ಯುತ್ ಖರೀದಿ, ಕಲ್ಲಿದ್ದಲು ಖರೀದಿ, ಲೋಕೋಪಯೋಗಿ ಟೆಂಡರ್ ಇತ್ಯಾದಿಗಳಿಗೆ ಹೋಲಿಸಿದರೆ ಸಿದ್ದು ಭ್ರಷ್ಟ ಮುಖ್ಯಮಂತ್ರಿಯಲ್ಲ, ಅವರ ವಿರೋಧಿಗಳು ಕೂಡ ಈ ಮಾತನ್ನು ವಿರೋಧಿಸುವುದಿಲ್ಲ.

ದಂಡಪಿಂಡ ಹಿಂಡು

ಇನ್ನು ಸಾಮಾಜಿಕ ನ್ಯಾಯ ಮತ್ತು ಅಭಿವೃದ್ಧಿಯ

...ಮತ್ತೆ ಬಂದರೆ ಅನ್ನಭಾಗ್ಯ, ಶಾದಿ ಭಾಗ್ಯ ...ಬಗಳೆಲ್ಲ ಹಿಂದೆ ಯಾರೂ ಮಾಡದ ಅಪರೂಪದ ...ರ್ಯಕ್ರಮಗಳೇ. ಮುಖ್ಯಮಂತ್ರಿಯಾದ ...ದಿನದಲ್ಲೇ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ..., ಸಾವಿರ ಕೋಟಿಯಷ್ಟು ಸಾಲ ಮನ್ನಾ ...ದ್ದು ಚಾರಿತ್ರಿಕವೇ. ಅದೇರೀತಿ ಅಹಿಂದ ವರ್ಗಗಳ ...ರ ಕೋಟಿಯಷ್ಟು ಸಾಲವನ್ನೂ ಮನ್ನಾ ಮಾಡಿದ್ದು, ...ಗೆಂದು ವಿಶೇಷ ಪ್ಯಾಕೇಜ್ ಘೋಷಿಸಿದ್ದು, ...ದಿಗಳೆಲ್ಲವೂ ಅಪ್ಪಟ ಜನಪರ ಕಾರ್ಯಕ್ರಮಗಳೇ. ... ಯಡ್ಡಿ, ಕುಮಾರಸ್ವಾಮಿಯಂತೆ ಈ ಬಗ್ಗೆ ...ರ ಪಡೆಯುವ ಕಲೆ ಗೊತ್ತಿಲ್ಲ ಮತ್ತು ...ಪಿಸಿದ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನದ ... ಯಾರೊಬ್ಬರೂ ತಲೆ ಕೆಡಿಸಿಕೊಳ್ಳಲಿಲ್ಲ.

...ಹೀಗಾಗಿ ಅನ್ನಭಾಗ್ಯ, ಕ್ಷೀರಭಾಗ್ಯ, ಶಾದಿ ಭಾಗ್ಯ ...ದಿಗಳೆಲ್ಲ ಯಾವ ಮಟ್ಟದ ಸಂಚಲನ ಮೂಡಿಸ ...ತ್ತೋ ಅದಾಗದೇ ಕೇವಲ ಸರ್ಕಾರ ತನ್ನ ಬೆನ್ನು ...ಕೊಳ್ಳಲು ಹುಟ್ಟಿಹಾಕಿದ ಕಸರತ್ತಿನಂತಾಗಿಹೋದವು. ...ಬರುವ ಮೇ 13ಕ್ಕೆ ಸಿದ್ದು ಮುಖ್ಯಮಂತ್ರಿಯಾಗಿ ...ರು ವರ್ಷ ತುಂಬುತ್ತದೆ. ದೊಡ್ಡ ದೊಡ್ಡ ...ಣ ಗಳನ್ನೆಸಗಿಯೂ ಜನಪ್ರಿಯ ಮುಖ್ಯಮಂತ್ರಿ ...ಬಂತೆ ಮೆರೆದ ಕುಮಾರಸ್ವಾಮಿ, ಯಡಿಯೂರಪ್ಪ ..., ಎಸ್.ಎಂ. ಕೃಷ್ಣರ ಚಾಲಾಕಿತನವೆಲ್ಲಿ? ಯಾವ ...ಣಕ್ಕೂ ಸಿಲುಕದೆ ತನ್ನ ಉಡಾಫೆ, ನಿರ್ಲಕ್ಷ್ಯ ...ಮತೆ ಯಿಂದಾಗಿ ಪೇಚಿನ ಮೇಲೆ ಪೇಚಿಗೆ ...ಕುವ ಸಿದ್ದು ಎಲ್ಲಿ?

...ಗಣಿಲೂಟಿಯ ವಿರುದ್ಧ ಬಳ್ಳಾರಿಗೆ ಪಾದಯಾತ್ರೆ ...ತಿ ನಾಡಿನುದ್ದಕ್ಕೂ ಸಂಚಲನಗೈದ ಸಿದ್ದು ...ಕ್ಕೂ ಮುಖ್ಯಮಂತ್ರಿಯಾಗಿ ಸಿದ್ದು ಕಳೆದ ಮೂರು ...ಗಳಿಂದ ನಡಕೊಂಡ ರೀತಿಗೂ ಅಜಗಜಾಂತರ ...ಸವಿದೆ. ರಾಹುಲ್ ಗಾಂಧಿಯ ಜೊತೆ ...ಕೆಯಲ್ಲಿದ್ದೇ ನಿದ್ರೆಗೆ ಜಾರಿದವರು ಸಿದ್ದು. ಒಂದಲ್ಲ ...ಲ್ಲ ಅನೇಕ ಕಾರ್ಯಕ್ರಮಗಳ ವೇದಿಕೆಯಲ್ಲೇ ... ಗೊರಕೆ ಹೊಡೆಯುತ್ತಿರುವ ಫೋಟೋಗಳು ...ಗೂ ವಾಟ್ಸಪ್, ಫೇಸ್‌ಬುಕ್‌ಗಳಲ್ಲಿ ಇಟ್ಟಾಡುತ್ತಿವೆ. ... ಹಿಂದಿನಂತೆ ಕೇವಲ ವಿರೋಧಿ ನಾಯಕ, ...ದೋ ಸಂಪುಟದ ಪ್ರಭಾವಿ ಮಂತ್ರಿಯಷ್ಟೇ ಅಲ್ಲ, ...ವೊಂದರ ಮುಖ್ಯಮಂತ್ರಿ. ಆರು ಕೋಟಿ ...ಗರ ಪ್ರತಿನಿಧಿ. ನಿರ್ಲಕ್ಷ್ಯ, ಉಡಾಫೆಗಳೇನಿದ್ದರೂ ...ಮಟ್ಟಿಗೇ ಹೊರತು ತಾನೊಬ್ಬ ...ಮುಖ್ಯಮಂತ್ರಿಯಾಗಿ ರಾಜ್ಯವೊಂದರ ನಾವಿಕನ ಹೊಣೆ ...ತ್ತಿದ್ದೇನೆಂಬ ಎಚ್ಚರಿಕೆ ಸದಾ ಇರಬೇಕಲ್ಲವೇ ಸಿದ್ದು?

ಹಳಸಿದ ಇಮೇಜ್!

...ಚುನಾವಣಾ ಪ್ರಚಾರದ ತನ್ನ ಭಾಷಣದಲ್ಲಿ ಯಾವ ...ಯುವರು ಸುಳ್ಳರು, ಭ್ರಷ್ಟರು, ಕುತಂತ್ರಿಗಳೆಂದು ...ಬೇಕಿತ್ತೋ ಬಿಜೆಪಿಗೆ ಬದಲಾಗಿ ಸಿದ್ದು ಬಾಯಿಂದ ...ದ್ದು ತನ್ನದೇ ಕಾಂಗ್ರೆಸ್ಸೆಂದು. ಒಮ್ಮೆ ಬಾಯಿತಪ್ಪಿ ಬಿಜೆಪಿಗೆ ಬದಲಾಗಿ ಕಾಂಗ್ರೆಸ್ಸೆಂದಿದ್ದರೆ ಆ ಮಾತು ಬೇರೆ. ಒಂದಲ್ಲ ಎರಡಲ್ಲ ಮೂರು ಬಾರಿ ಬಯ್ಯಬೇಕಾದ ಬಿಜೆಪಿಗೆ ಬದಲಾಗಿ ತನ್ನದೇ ಕಾಂಗ್ರೆಸ್ಸನ್ನು ಬಯ್ದು ಆನಂತರ 'ಅಲ್ಲ ಬಿಜೆಪಿ... ಬಿಜೆಪಿ' ಎಂದು ಸಿದ್ದು ಹೇಳಿದ್ದು ಇವತ್ತಿಗೂ ಚಡ್ಡಿಗಳಿಗೆ ತಮಾಷೆಯ ಸಂಗತಿಯಾಗಿದೆ; ಮತ್ತೆ ಮತ್ತೆ ವ್ಯಾಟ್ಸ್‌ಆಪ್‌ನಲ್ಲಿ ಹಂಚಿಕೊಳ್ಳುವ ಸರಕಾಗಿದೆ. ತಾನೇ ಬಿಡುಗಡೆ ಮಾಡಿದ ಪುಸ್ತಕವನ್ನು ತಲೆ ಕೆಳಗಾಗಿ ಹಿಡಿದದ್ದು, ತನ್ನದೇ ಪಕ್ಷವನ್ನು ಬಯ್ಯುವುದು, ಮೋದಿಗೆ ಬದಲಾಗಿ ವಾಜಪೇಯಿಯನ್ನು ಪ್ರಧಾನಮಂತ್ರಿ ಅನ್ನುವುದು ಇವೆಲ್ಲ ಸಿದ್ದು ಪಾಲಿಗೆ ಯಃಕಶ್ಚಿತ್ ತಪ್ಪುಗಳಾಗಿರಬಹುದು. ಆದರೆ ಜನತೆ ಇಂಥ ಸೂಕ್ಷ್ಮಗಳನ್ನೇ ಗಂಭೀರವಾಗಿ ಪರಿಗಣಿಸುತ್ತಾರೆ.

ಇತ್ತೀಚಿನ ವಾಚ್ ಹಗರಣ ಮತ್ತು ಮಗ ಯತೀಂದ್ರನ ಕಂಪೆನಿಗೆ ಟೆಂಡರ್ ಹಗರಣಗಳನ್ನೇ ಪ್ರತಿಪಕ್ಷಗಳು ಯಾಕಿಷ್ಟು ದೊಡ್ಡದಾಗಿಸಿ ಬೊಬ್ಬೆ ಹೊಡೆಯುತ್ತಿವೆಯೆಂದರೆ ಸಿದ್ದು ವಿರುದ್ಧ ಕೂಗಾಡಲು ಗಣಿಲೂಟಿ, ಗಣಿಲಂಚ, ಭೂಕಬಳಿಕೆಯಂಥ ದೊಡ್ಡ ಹಗರಣಗಳಿಲ್ಲದಿರುವುದು. ಆದರೆ ತನ್ನ ಈ ಪರಿಶುದ್ಧತೆಯನ್ನೂ ರಾಜಕೀಯವಾಗಿ ಬಳಸಿಕೊಳ್ಳಲಾಗದಂಥ ನಿಷ್ಕ್ರಿಯತೆ. ಭ್ರಷ್ಟಾಚಾರಿಗಳಾಗಿದ್ದೂ ಅದನ್ನು ಮರೆಸುವಂಥ ಕ್ರಿಯಾಶೀಲತೆಯನ್ನು ಮೆರೆದ ಕುಮಾರಸ್ವಾಮಿ ಮತ್ತು ಯಡ್ಡಿಯ ಮುಂದೆ ಭ್ರಷ್ಟಾಚಾರವೆಸಗದೆಯೂ ತನ್ನ ಜನಪರ ಕಾಳಜಿಯನ್ನು ಕಾರ್ಯಗತಗೊಳಿಸಲಾಗದ ಸಿದ್ದು ನಿಷ್ಪ್ರಯೋಜಕರಂತೆ ಕಾಣಿಸುತ್ತಾರೆ. ಜನತೆಯ ಕಣ್ಣಲ್ಲಿ ಸಿದ್ದು ಸರ್ಕಾರವೆಂದರೆ ಅದು **inactive** ಮತ್ತು **insenstive** ಸರ್ಕಾರವೆಂಬ ಭಾವನೆ ದಿನೇದಿನೇ ಗಟ್ಟಿಯಾಗಲು ಇಂಥ ಹತ್ತಾರು ಕಾರಣಗಳಿವೆ.



ವ್ಯರ್ಥ ಪ್ರಯತ್ನಗಳು

ಮೌಢ್ಯ ವಿರೋಧಿ ಕಾಯ್ದೆ ಮತ್ತು ಮಠಮಾನ್ಯಗಳ ನಿಯಂತ್ರಣ ಕಾಯ್ದೆಗಳೇನಾದರೂ ಜಾರಿಗೆ ಬಂದಿದ್ದರೆ ನಿಜಕ್ಕೂ ಅದೊಂದು ಕ್ರಾಂತಿಕಾರಕ ಹೆಜ್ಜೆಯೆನಿಸಿಕೊಳ್ಳುತ್ತಿತ್ತು. ದೇವರು ಮತ್ತು ಧರ್ಮಗಳ ಹುತ್ತಕ್ಕೆ ಕೈಯಿಕ್ಕುವುದೆಂದರೆ ಅದು ತಮಾಷೆಯೇ? ರಾಜಕೀಯವಾಗಿ ಅತೀವ ತಲೆಗಾರಿಕೆ ಮತ್ತು ತಂತ್ರಗಾರಿಕೆಯಿದ್ದರಷ್ಟೇ ಇಂಥ ದುಸ್ಸಾಹಸಕ್ಕೆ ಕೈಹಾಕಬೇಕು. ಕಪಟ ಜ್ಯೋತಿಷಿಗಳು ಮತ್ತು ವಂಚಕ ಮಾಂತ್ರಿಕರನ್ನು ಬಲಿಹಾಕಲು ಸಹಜವಾಗೇ ಸುಧಾರಣಾವಾದಿ ಮಠಾಧೀಶರನ್ನು ಬಳಸಿಕೊಳ್ಳಬೇಕಿತ್ತು. ಈ ನಿಟ್ಟಿನಲ್ಲಿ ಕ್ರಾಂತಿಯೋಗಿ ಬಸವಣ್ಣ, ಶಿವಶರಣರು, ಸರ್ವಜ್ಞ, ಶಿಶುನಾಳ ಷರೀಫರು ಸೇರಿದಂತೆ ಈ ಕಾಲದ ತೋಂಟದಾರ್ಯ ಸ್ವಾಮಿಗಳು, ಮುರುಘಾ ಶರಣರು, ನಿಡುಮಾಮಿಡಿ ಸ್ವಾಮಿಗಳು, ಸಾಣೇಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಸೇರಿದಂತೆ ನಾಡಿನ ಅನೇಕ ಸಾಧುಸಂತರು ಸಹಜವಾಗೇ ಸರ್ಕಾರದ ಜೊತೆ ಕೈಜೋಡಿಸುತ್ತಿದ್ದರು.

ಆದರೆ ಸಿದ್ದು ಅಗತ್ಯ ಇಚ್ಛಾಶಕ್ತಿಯನ್ನೇ ತೋರಲಿಲ್ಲ. ಜನಪರ ವೈಚಾರಿಕತೆಯನ್ನೇ ಮೂಲಾಧಾರವಾಗಿಸಿಕೊಂಡ ಶಿವಶರಣರ ನಾಡಿನಲ್ಲಿ ಯಾವೊಬ್ಬ ಶರಣರೂ ಇದನ್ನು ವಿರೋಧಿಸುತ್ತಿರಲಿಲ್ಲ. ಸರ್ಕಾರದ ಸ್ವಪ್ರತಿಷ್ಠೆ ಮತ್ತು ಹಠಮಾರಿತನಕ್ಕೆ ಇನ್ನು ಸಿದ್ಧಗಂಗೆ, ಮುರುಘಾ ಶರಣರಂಥವರೇ ಮೇಲೆ ಬಿದ್ದು ಬರುವುದುಂಟೆ?

ಸಿದ್ದು ಅವರಿಗೇ ಉಲ್ಟಾ ಹೊಡೆದಂತೆ ಮಠಮಾನ್ಯಗಳು ಸ್ವಾಮಿಗಳೆಲ್ಲ ತಿರುಗಿಬಿದ್ದರು. ಇದರ ಲಾಭ ಪಡೆದದ್ದು ಬಿಜೆಪಿ. ಅಲ್ಲಿಗೆ ಮೌಢ್ಯ ವಿರೋಧಿ ಕಾಯ್ದೆಯೂ ನೆನೆಗುದಿಗೇ ಬಿತ್ತು, ಮಠಮಾನ್ಯ ನಿಯಂತ್ರಣ ಕಾಯ್ದೆಯೂ ಕಾಲಗರ್ಭ ಸೇರಿತು.

ಜಾತಿಗಣತಿ ಕೂಡ ಸಾಮಾಜಿಕವಾಗಿ ಅತ್ಯಂತ ಆರೋಗ್ಯದಾಯಕ ಯತ್ನವೇ. ಆದರೆ ಬದ್ಧತೆ ಮತ್ತು ಅದನ್ನು ರಾಜಕೀಯವಾಗಿ ಪ್ರಯೋಗಿಸಬಲ್ಲ ಚಾಕಚಕ್ಯತೆ ಇಲ್ಲದಿದ್ದರೆ ಕೊನೆಗೇ ಅದೇ ತನ್ನ ಸೃಷ್ಟಿಕರ್ತನನ್ನು ನುಂಗುತ್ತದೆ. ಜಾತಿಗಣತಿಯ ಅಂಕಿಅಂಶಗಳು ಸೋರಿಕೆಯಾಗಿವೆಯೆಂದು ಚಡ್ಡಿಗಳು ಷಡ್ಯಂತ್ರ ಮಾಡಿ ಸುಳ್ಳು ಅಂಕಿಅಂಶಗಳನ್ನು ವಾಟ್ಸ್‌ಪ್ಪಿಗೆ ಇಟ್ಟರು. ದಲಿತರು ಮತ್ತು ಮುಸ್ಲಿಮರು ಬಲಾಢ್ಯರೆಂಬಂತೆ ಕಳ್ಳ ಅಂಕಿಅಂಶ ಸೃಷ್ಟಿಸಿ ಮೇಲ್ಜಾತಿಗಳನ್ನು ಸರ್ಕಾರದ ವಿರುದ್ಧ ಎತ್ತಿಕಟ್ಟುವ ತಂತ್ರ ಹೆಣೆದ ವಾಟ್ಸಪ್ ಕಿಡಿಗೇಡಿಗಳನ್ನು ಬಂಧಿಸಿ ಜೈಲಿಗಟ್ಟಿದ್ದರೆ ಸಂಘ ಪರಿವಾರದ ಷಡ್ಯಂತ್ರಕ್ಕೆ ಬೆಲೆಯಿರುತ್ತಿರಲಿಲ್ಲ. ಆದರೆ ಸರ್ಕಾರಕ್ಕೆ ತಲೆ ಓಡಬೇಕಲ್ಲ!

ಏಕೆಂದರೆ ಸಿದ್ದು ಸುತ್ತ ಬುದ್ಧಿವಂತರು, ಸಾಮಾಜಿಕ ಹೋರಾಟಗಾರರು, ರಾಜತಂತ್ರ ನಿಪುಣರ್‍ಯಾರೂ ಇದ್ದಂತಿಲ್ಲ. ಇದ್ದರೂ ಅವರ ಸಲಹೆಗಳಿಗೆ ಕಿವಿಗೊಡುವ ವ್ಯವಧಾನವನ್ನು ಸಿದ್ದು ತೋರುತ್ತಿಲ್ಲ.

ಪ್ರಿಯ ಸಿದ್ಧರಾಮಯ್ಯನವರೇ ಮುಖ್ಯಮಂತ್ರಿ ಸ್ಥಾನವೊಂದೇ ಬದುಕಿನ ಸಾರ್ಥಕತೆಗೆ ಮಾನದಂಡವಾಗು ವುದಾದರೆ ಗುಂಡೂರಾಯರೂ ನಿಮಗಿಂತ ಮೊದಲೇ ಆ ಸ್ಥಾನವನ್ನಲಂಕರಿಸಿದ್ದಾರೆ. ಬೊಮ್ಮಾಯಿ, ಧರಂಸಿಂಗ್, ಬಂಗಾರಪ್ಪ, ಯಡಿಯೂರಪ್ಪ ಮುಂತಾದವರಿಗೂ ನಿಮಗೂ ಏನಾದರೂ ವ್ಯತ್ಯಾಸವಿರಬೇಕಲ್ಲವೆ? ವ್ಯತ್ಯಾಸ ಕಟ್ಟಿಕೊಂಡು ನಿಮಗೇನಾಗಬೇಕಿಲ್ಲ ನಿಜ. ಆದರೆ ಜಾತ್ಯತೀತರೂ, ಸಮಾಜವಾದಿಗಳೂ, ಪ್ರಗತಿಪರರೂ ಆದ ನಿಮ್ಮಂಥವರು ಸಿಕ್ಕ ಅವಕಾಶವನ್ನು ಸದುಪಯೋಗಮಾಡಿಕೊಳ್ಳದಿದ್ದರೆ, ನಿಮ್ಮನ್ನು ನಂಬಿ ನೆಚ್ಚಿದವರು ತಲೆ ಚಚ್ಚಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಕನಿಷ್ಠ ನಾಡಿನ ಋಣಕ್ಕಾದರೂ ನೀವು ನೀವಾಗಿಯೇ ಉಳಿಯಬೇಕಿದೆ.

ನಿಮಗಿದು ಥರವಲ್ಲ. ಕಾಂಗ್ರೆಸ್ಸಿನ ಕಾಳಜಿಯೂ ಇದಲ್ಲ. ಇನ್ನು ಎರಡು ವರ್ಷ ಬಾಕಿಯಿದೆ. ದಯವಿಟ್ಟು ಎಚ್ಚೆತ್ತುಕೊಳ್ಳಿ. ಈ ನಿಮ್ಮ ವೈಖರಿಯನ್ನು ಇನ್ನು ಮುಂದಾದರೂ ಬದಲಾಯಿಸಿಕೊಳ್ಳಿ. ಇಂಥ ಅವಕಾಶ ಮತ್ತೆಮತ್ತೆ ಬರುವುದಿಲ್ಲ. ಈಗಲೂ ಕಾಲ ಮಿಂಚಿಲ್ಲ....!

● ರಾ. ಸೋಮನಾಥ್

...ಪ್ರೀತಿಗೆ ಜಾತಿ, ಧರ್ಮ...

...03 ⇦

...ಮಹಾದೇವಿಯವರು ನಮ್ಮ ವಿಮಲಾ ಅವರನ್ನು ...ಕೊಂಡು "ನಮ್ಮ ಜೊತೆ ನಿಂತಿದ್ದಕ್ಕೆ ನಮಗೆ ...ರ್ಟ್ ಕೊಟ್ಟದ್ದಕ್ಕೆ ಥ್ಯಾಂಕ್ಸ್" ಎಂದು ಹೇಳಿದರು. ...ತರವಾಗಿ ಕಾಣುತ್ತಿದ್ದ ಅಶಿತಾ ಕೂಡ ವಿಮಲಾ ... ನಮ್ಮ ಪತ್ರಿಕೆಯ ಬಳಗಕ್ಕೆ ಥ್ಯಾಂಕ್ಸ್ ...ದಳು.

...ಕೊರಗಡೆಯ ಹುಲ್ಲುಹಾಸಿನಲ್ಲಿ ನಿರ್ಮಿಸಲಾಗಿದ್ದ ... ಮೇಲೆ ನಿಂತಿದ್ದ ಶಕೀಲ್ ಮದುವೆಗೆ ...ವರನ್ನು ಆಹ್ವಾನಿಸುತ್ತಿದ್ದ, ಅಶಿತಾಳ ತಂದೆ ಡಾ. ...ದ್ರ ಬಾಬು ತಮ್ಮ ಹಿಂದೂ ಮಿತ್ರರನ್ನು ...ಗಿದೋ ಅಥವಾ ಕೈಕುಲುಕಿಯೋ ...ಸುತ್ತಿದ್ದರೆ, ತಮ್ಮ ಮುಸಲ್ಮಾನ ಬಾಂಧವರನ್ನು ...ರು ಬಾರಿ ಅಪ್ಪಿಕೊಂಡು ...ಮಾಡಿಕೊಳ್ಳುತ್ತಿದ್ದರು.

...ಶಕೀಲನ ತಂದೆ ಮುಖ್ತಾರ್ ಅಹಮದ್ ಅವರಿಗೆ ...ಕ್ಕೂ ಹಾಜರಾದದ್ದು ಸಂತೋಷ ತಂದಿತ್ತು. ...ಕ್ ಮದುವೆ ನಡೆಯುತ್ತಿದ್ದ ಸ್ಥಳಕ್ಕೆ ಚಡ್ಡಿಗಳು ... ಎಲ್ಲವನ್ನೂ ಗಮನಿಸಿದರೆ ಎಂಬ [illegible] ಮುಂಚಿತವಾಗಿಯೇ [illegible]. ಅದರಿಂದ "ಯಾವ ತರಹ ... ಮಾಡುತ್ತೀರಾ?" ಎಂದು ಮುಖ್ತಾರ್ [illegible] ನಾನು ಕೇಳಿದಾಗ ಅವರು "ನಿಖಾ ಆಗಲೇ ಮುಗಿಯಿತು. ಆದರೂ ನಾನು ನನ್ನ ಸೊಸೆಯನ್ನು ಕೇಳಿದೆ. ನಿನಗೆ ಹಿಂದೂ ಸಂಪ್ರದಾಯದಂತೆ ನೀನು ಮತ್ತು ನಿನ್ನ ಗಂಡ ಪರಸ್ಪರರಿಗೆ ಹಾರಗಳನ್ನು ತೊಡಿಸಬೇಕು ಅನ್ನಿಸಿದರೆ ಅದನ್ನೂ ಮಾಡೋಣ, ನನ್ನ ಅಭ್ಯಂತರವೇನೂ ಇಲ್ಲ ಎಂದು ಅವಳಿಗೆ ಹೇಳಿದೆ" ಎಂದು ಮುಗುಳ್ನಕ್ಕರು.

ಒಟ್ಟಾರೆಯಾಗಿ ಅಲ್ಲಿ ಅವತ್ತು ಜಾತಿ ಮತ್ತು ಧರ್ಮ ಎಂಬ ಸಂಕುಚಿತ ಭಾವನೆಗಳು ಮರೆಯಾಗಿ ಇಬ್ಬರು ಯುವಪ್ರೇಮಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟದ್ದು ಎಲ್ಲರೂ ಸಂಭ್ರಮಿಸುವ ವಿಷಯವಾಗಿತ್ತು.

ಈ ಮದುವೆಯ ಫೋಟೋಗಳನ್ನು ನಾನು ಫೇಸ್‌ಬುಕ್‌ನಲ್ಲಿ ಹಂಚಿಕೊಂಡಾಗ, ಚಡ್ಡಿ ಒಬ್ಬ "ನೀವು ಹೀಗೆ ಒಬ್ಬ ಮುಸ್ಲಿಮ್ ಹುಡುಗಿಗೆ ಹಿಂದೂ ಹುಡುಗನೊಂದಿಗೆ ಮದುವೆ ಮಾಡಿಸಿ ನೋಡಿ ಏನಾಗುತ್ತೆ ಅಂತ" ಎಂದು ಸವಾಲು ಹಾಕಿದ್ದ. ಆತನಂಥವರಿಗೆ ಗೊತ್ತಿಲ್ಲದಿರುವುದು ಏನೆಂದರೆ ಅಂತಹ ಮದುವೆಯೊಂದನ್ನು ನಾನೀಗಾಗಲೆ ಮಾಡಿಸಿದ್ದಾಗಿದೆ. ಹುಡುಗ ದಲಿತ, ಹುಡುಗಿ ಮುಸ್ಲಿಮ್. ಅವರಿಬ್ಬರೂ ಕಾನೂನು ಓದಿದವರಾಗಿದ್ದರು. ಆದರೆ ತಮ್ಮ ಮದುವೆಗೆ ಇಬ್ಬರ ಕುಟುಂಬಗಳು ಒಪ್ಪುವುದಿಲ್ಲ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಒಂದು ದಿನ ಅವರಿಬ್ಬರೂ ತಮ್ಮ ಊರಿನಿಂದ ಓಡಿಬಂದವರು ಪ್ರತ್ಯಕ್ಷವಾಗಿದ್ದು ನನ್ನ ಕಚೇರಿಯಲ್ಲಿ. ಅವರಿಗೆ ಮದುವೆ ಮಾಡಿಸಲಾಯಿತು. ಇವತ್ತು ಅವರಿಗೆ ಒಬ್ಬ ಚಿಕ್ಕ ಮಗನೂ ಇದ್ದು ಅವರದ್ದು ನೆಮ್ಮದಿಯ ಕುಟುಂಬವಾಗಿದೆ.

ಹಾಗೆಯೇ ಜಾತಿಮುಕ್ತ ಸಂಬಂಧ ವೇದಿಕೆಯನ್ನು ಪ್ರಗತಿಪರರೊಂದಿಗೆ ಸ್ಥಾಪಿಸಿರುವ ನಮ್ಮ ಹಯವದನ ಮೂಡುಸಗ್ರಿಯವರು ಕೂಡ ಒಬ್ಬ ಬ್ರಾಹ್ಮಣ ಯುವಕ ಓರ್ವ ಮುಸ್ಲಿಮ್ ಯುವತಿಯನ್ನು ಮದುವೆಯಾಗಲು ನೆರವಾಗಿದ್ದರು. ಹಾಗೆಯೇ ಒಬ್ಬ ಮುಸ್ಲಿಮ್ ಹುಡುಗ ಮತ್ತು ದಲಿತ ಯುವತಿಯ ಮದುವೆಗೂ ಸಹಕರಿಸಿದ್ದರು. ಹಯವದನ ಅವರು ಹೇಳುವಂತೆ "ಅವರೆಲ್ಲರೂ ಸುಖವಾದ ದಾಂಪತ್ಯ ಜೀವನವನ್ನು ನಡೆಸುತ್ತಿದ್ದಾರೆ." ಅಂದಹಾಗೆ ಈ ಮದುವೆಗಳು ನಡೆದಿರುವುದು ಕರಾವಳಿ ಜಿಲ್ಲೆಗಳಲ್ಲಿ ಎಂಬುದೇ ವಿಶೇಷ!

ಅಪ್ಪನ ಮಿತ್ರ ರಾಮದಾಸ್ ಅವರು 'ಮಾನವ ಮಂಟಪ' ಎಂಬ ಕೂಟವನ್ನು ರಚಿಸಿಕೊಂಡು ತಮ್ಮ ಮೈಸೂರಿನ ಮನೆಯಲ್ಲೇ ಮಾಡಿಸಿದ ಅಂತರಜಾತಿ ಮತ್ತು ಅಂತರಧರ್ಮೀಯ ಮದುವೆಗಳಿಗೆ ಲೆಕ್ಕವಿಲ್ಲ. ರಾಮದಾಸ್ ಅವರ ಹೂತೋಟದಲ್ಲಿ ನೆಟ್ಟಿದ್ದ ಒಂದು ಬೋಗನ್‌ವಿಲ್ಲಾ ಗಿಡ ಅವರ ತಾರಸಿಯ ತನಕ ಬೆಳೆದು ಅಲ್ಲಿ ಒಂದು ಮಂಟಪದ ಆಕಾರವನ್ನು ಪಡೆದಿತ್ತು. ನಾನೊಮ್ಮೆ "ಓ, ಈ ಮಂಟಪದಡಿನಾ ನೀವು ಮದುವೆಗಳನ್ನು ಮಾಡಿಸುವುದು?" ಎಂದು ರಾಮದಾಸ್ ಅವರಿಗೆ ತಮಾಷೆ ಮಾಡಿದ್ದೆ. ಅದರೀಗ, ರಾಮದಾಸ್ ಅವರ ಪುತ್ರಿ, ಸ್ನೇಹ ಮತ್ತು ಅಳಿಯ ಓಂಕಾರ್ ಮನೆಯ ಹಿಂದೆ ಇರುವ ಜಾಗದಲ್ಲೇ ಒಂದು ಚಿಕ್ಕದಾದ ಮತ್ತು ಚೊಕ್ಕದಾದ ಮಂಟಪವನ್ನು ನಿರ್ಮಿಸಿದ್ದಾರೆ ಮತ್ತು ಜನರಿಗೆ ಕೂರಲು ಜಾಗವನ್ನು ಕಲ್ಪಿಸಿದ್ದಾರೆ. ಆ ಜಾಗದಲ್ಲಿ ಇವತ್ತಿಗೂ ಸ್ನೇಹ ಅಂತರಜಾತಿ ಮದುವೆಗಳನ್ನು ನಡೆಸಿಕೊಡುತ್ತಿದ್ದಾಳೆ.

ಬಾಬಾಸಾಹೇಬ್ ಅಂಬೇಡ್ಕರ್ ಅವರು ತಮ್ಮ 'ಜಾತಿವಿನಾಶ' ಲೇಖನದಲ್ಲಿ ಸಹಭೋಜನ, ಅಂತರಜಾತಿ ಮತ್ತು ಅಂತರಧರ್ಮೀಯ ಮದುವೆಗಳನ್ನು ಪ್ರೋತ್ಸಾಹಿಸುವುದು ಜಾತಿವಿನಾಶಕ್ಕೆ ಒಂದು ಪರಿಹಾರ ಎಂದಿದ್ದರು. "ರಕ್ತ ಬೆಸುಗೆ ಮಾತ್ರವೇ ಜನರಲ್ಲಿ ಬಂಧುತ್ವ ಭಾವನೆಯನ್ನು ಸೃಷ್ಟಿಸುತ್ತದೆ. ಜಾತಿ ವ್ಯವಸ್ಥೆಯು ಜನರಲ್ಲಿ ಪರಕೀಯ ಭಾವನೆಯನ್ನು ಬೆಳೆಸಿದೆ. ಆದರೆ ರಕ್ತ ಬೆಸುಗೆ ಪರಕೀಯ ಭಾವನೆಯನ್ನು ಅಳಿಸಿ ನಾವೆಲ್ಲರೂ ರಕ್ತಸಂಬಂಧಿಗಳು ಎಂಬ ಭಾವನೆಯನ್ನು ಗಟ್ಟಿಗೊಳಿಸುತ್ತದೆ. ಆಗ ಜಾತಿ ನಿರ್ನಾಮವಾಗುತ್ತದೆ" ಎಂದಿದ್ದರು ಅಂಬೇಡ್ಕರ್.

"ಜಾತಿ ಎಂಬುದು ಇಟ್ಟಿಗೆಗಳಿಂದ ಕಟ್ಟಿರುವ ಗೋಡೆ ಅಲ್ಲ, ಮುಳ್ಳುತಂತಿಯಿಂದ ನಿರ್ಮಿಸಿರುವ ಬೇಲಿಯೂ ಅಲ್ಲ, ಅದು ಜನರ ತಲೆಗಳಲ್ಲಿರುವ ಭಾವನೆ ಅಷ್ಟೇ" ಎಂದೂ ಬಾಬಾಸಾಹೇಬ್ ಹೇಳಿದ್ದರು.

ಅಶಿತಾ, ಶಕೀಲ್ ಮತ್ತು ಅವರಿಬ್ಬರ ಕುಟುಂಬದವರು ಮದುಳಿನಲ್ಲಿರುವ ಜಾತಿ ಮತ್ತು ಧರ್ಮ ಎಂಬ ಗೋಡೆಗಳನ್ನು ಮೀರಿ ಮಾನವ ಸಂಬಂಧವೇ ಮುಖ್ಯ ಎಂದು ತೋರಿಸಿದ್ದಾರೆ. ಅವರೆಲ್ಲರಿಗೂ ನಮ್ಮ ಬಳಗದ ಪರವಾಗಿ ಅಭಿನಂದನೆಗಳು.

● ಗೌರಿ ಲಂಕೇಶ್

ಕರ್ನಾಟಕದಲ್ಲಿ ಕುಸಿದಿರುವ ಅಂಬೇಡ್ಕರ್ ಧಮ್ಮ ಮಾರ್ಗ

ಡಾ. ಬಾಬಾಸಾಹೇಬ ಅಂಬೇಡ್ಕರ್‌ರವರು ಹಿಂದೂ ಧರ್ಮ ತಿರಸ್ಕರಿಸಿ ಬೌದ್ಧ ಧರ್ಮ ಅಪ್ಪಿಕೊಂಡದ್ದು ಆಕಸ್ಮಿಕವೂ ಅಲ್ಲ, ಆತುರದ ಕ್ರಮವೂ ಅಲ್ಲ ಮತ್ತು ಹಿಂದೂ ಧರ್ಮದ ಅನಿಷ್ಠಗಳ ಬಗ್ಗೆ ಕೇವಲ ಜಿಗುಪ್ಸೆಯಿಂದಲ್ಲ, ಈ ನಕಾರಾತ್ಮಕ ಅಂಶಗಳು ಸತ್ಯವಾಗಿದ್ದರೂ, ಅಂಬೇಡ್ಕರರವರು ಎಲ್ಲಾ ನಕಾರಾತ್ಮಕ ಸತ್ಯಗಳನ್ನು ಹಿನ್ನಲೆಗೆ ಸರಿಸಿ, ಬುದ್ಧನ ಸಕಾರಾತ್ಮಕ ತತ್ವಗಳಿಗೆ ಮನ್ನಣೆ ನೀಡಿ ಬೌದ್ಧ ಧರ್ಮಕ್ಕೆ ಒಲಿದಿದ್ದರು. ಅಂಬೇಡ್ಕರ್ ದೃಷ್ಟಿಯಲ್ಲಿ ಹಿಂದೂ ಧರ್ಮದ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಟದ ತಾರ್ಕಿಕ ಅಂತ್ಯವೇ ಬೌದ್ಧ ಧರ್ಮಕ್ಕೆ ಮತಾಂತರ. ಆದರೆ ಇದು ಅಂತ್ಯವಲ್ಲ, ಬೌದ್ಧ ಜೀವನದ ಆರಂಭ. ಪ್ರಜ್ಞಾ, ಶೀಲ, ಸಂಸ್ಕಾರಯುತ ಬದುಕು. ನಾವು ಸಾಮಾಜಿಕವಾಗಿ ಹಾಗೂ ಮಾನಸಿಕವಾಗಿ ಬೌದ್ಧರೆಂದು ಘೋಷಿಸಿ ದಾಖಲೀಕರಣಗೊಳ್ಳುವ ಸಾಂಸ್ಕೃತಿಕ ಪರಿವರ್ತನೆ. "ಪ್ರಬುದ್ಧ ಭಾರತ್" ನಿರ್ಮಾಣಕ್ಕೆ ಅಂಬೇಡ್ಕರ್ ಕರೆಕೊಟ್ಟು ಕನಸು ಕಂಡರು. ಅಂಬೇಡ್ಕರರ ಈ ಕರೆಗೆ 60 ವರ್ಷವಾಗುತ್ತ ಬಂತು. ಅವರ ಹುಟ್ಟು 125ನೇ ದಿನಾಚರಣೆಗೆ ಕಾಲಿಟ್ಟಿದೆ. ಈ ಸಂದರ್ಭದಲ್ಲಿ ಅವರ ಕನಸಿನ ಕರೆಯ ಬಗ್ಗೆ ಅಂಬೇಡ್ಕರ್ ನಂತರದ ಧಮ್ಮ ಮಾರ್ಗದ ಬಗ್ಗೆ ವಿಶ್ಲೇಷಿಸುವುದು ಅಗತ್ಯವಿದೆ. ಸಾಮಾಜಿಕ ಪರಿವರ್ತನೆಯ ಹರಿಕಾರ, ಸತ್ಯ ಶೋಧಕ ಸಮಾಜದ ಸಂಸ್ಥಾಪಕ ಮಹಾತ್ಮ ಜ್ಯೋತಿಬಾ ಪುಲೆಯವರ ಕುರಿತು ಅಂಬೇಡ್ಕರರವರು ಸತ್ಯಶೋಧಕ ಸಮಾಜದ 16ನೇ ಅಧಿವೇಶನದ ಸಂದೇಶದಲ್ಲಿ "ಬ್ರಾಹ್ಮಣೇತರ ವರ್ಗವು ಜ್ಯೋತಿಬಾ ಪುಲೆಯವರನ್ನು ಸಂಪೂರ್ಣವಾಗಿ ಮರೆತಿರುವುದು ಅಷ್ಟೇ ಅಲ್ಲ, ಅವರ ತತ್ವಜ್ಞಾನದ ವಿಷಯದಲ್ಲಿ ಭಾರಿ ನಾಚಿಕೆಗೇಡಿನ ವಂಚನೆಯನ್ನೇ ಮಾಡಿದೆ" ಎಂದು ನೊಂದಿದ್ದರು. ಇದೇ ಮಾತನ್ನು ಅಂಬೇಡ್ಕರರವರ ಚಳವಳಿ ಕುರಿತು ಅನ್ವಯಿಸಿದರೆ, ಅಂಬೇಡ್ಕರ ಬಳಸಿದ "ನಾಚಿಕೆಗೇಡಿನ ವಂಚನೆ" ಪದಕ್ಕೆ ನಾವೇ ಗುರಿಯಾಗಬಹುದೇನೋ ಎಂಬುದು ಅಪ್ರಿಯ ಸತ್ಯವಾಗಿದೆ. ಇದನ್ನು ಕೋಷ್ಟಕಗಳಲ್ಲಿನ ಅಂಕಿ ಅಂಶಗಳನ್ನು ವಿಶ್ಲೇಷಿಸಿ ಪರಿಶೀಲಿಸಬಹುದಾಗಿದೆ.

ನಾನು ಹಿಂದೂವಾಗಿ ಹುಟ್ಟಿದ್ದೇನೆ ಆದರೆ ಹಿಂದೂವಾಗಿ ಸಾಯಲಾರೆ

13-10-1935ರ ಯೆವ್ಲೋಲಾ ಸಮ್ಮೇಳನದಲ್ಲಿ "ನಾನು ಹಿಂದೂವಾಗಿ ಹುಟ್ಟಿದ್ದೇನೆ ಆದರೆ ಹಿಂದೂವಾಗಿ ಸಾಯಲಾರೆ" ಎಂದು ಘೋಷಿಸಿದ ಅಂಬೇಡ್ಕರ್ 14-10-1956ರಂದು ನಾಗಪೂರದಲ್ಲಿ ತಮ್ಮ ಲಕ್ಷಾಂತರ ಅನುಯಾಯಿಗಳೊಂದಿಗೆ ಬೌದ್ಧಧರ್ಮಧೀಕ್ಷೆ ಪಡೆದರು. 1935 ರಿಂದ 1956ರ ವರೆಗೆ ಹಲವಾರು ಮಹತ್ವದ ಸಾಮಾಜಿಕ ಮತ್ತು ರಾಜಕೀಯ ಘಟನೆಗಳು ಜರುಗಿದವು. ಹಾಗೆಯೇ ಅವರ ಧರ್ಮಾಂತರಕ್ಕೆ ತಣ್ಣೀರೆರಚುವ ಚಟುವಟಿಕೆಗಳು ನಡೆದವು.

ಗಾಂಧೀಜಿಯವರು "ಇದು ದುರ್ದೈವದ ಸಂಗತಿ. ಧರ್ಮವೆಂಬುದು ಮೈಮೇಲಿನ ಬಟ್ಟೆಯಲ್ಲ, ನಮ್ಮ ಆತ್ಮದ ಒಂದು ಭಾಗ. ಅದನ್ನು ಬದಲಾಯಿಸಲು ಸಾಧ್ಯವಿಲ್ಲ, ಯಾವ ಉದ್ದೇಶಕ್ಕಾಗಿ ಅಂಬೇಡ್ಕರ್ ಧರ್ಮ ಬಿಡಲು ಆಲೋಚಿಸುತ್ತಿರುವರೋ ಅದು ಈಡೇರುವುದಿಲ್ಲ, ಅಂಬೇಡ್ಕರ್ ಪ್ರಭಾವಕ್ಕೆ ಬಾರದ ಕೋಟ್ಯಾಂತರ ಅಸ್ಪೃಶ್ಯರಿದ್ದಾರೆ. ಅವರು ಅಂಬೇಡ್ಕರ್‌ರವರನ್ನು ಹಿಂಬಾಲಿಸುವುದಿಲ್ಲ, ಹಿಂದೂ ಧರ್ಮ ತಿರಸ್ಕರಿಸದೇ ಅದರಲ್ಲೇ ಉಳಿಯುತ್ತಾರೆ. ಅವರ ದೇಹ ಬುದ್ಧಿ ಮತ್ತು ಆತ್ಮ ಹಿಂದೂ ಧರ್ಮದಲ್ಲಿದೆ. ಇದನ್ನು ತಪ್ಪಿಸಲು ಅಂಬೇಡ್ಕರ್‌ರವರಿಗೆ ಸಾಧ್ಯವಿಲ್ಲ" ಎಂದಿದ್ದರು. ಅಂಬೇಡ್ಕರ್ ಜನ್ಮದಿನವನ್ನು ಸಂಭ್ರಮಿಸುವ ನಾವು, ಅಂಬೇಡ್ಕರ್ ನಾಮ ಜಪಿಸುತ್ತ ನಮ್ಮ ಅನುಕೂಲಕ್ಕೆ ತಕ್ಕಂತೆ ಅವರನ್ನು ಗುರಾಣಿಯಾಗಿ ಬಳಸುತ್ತಿದ್ದೇವೆ. ಪ್ರಸ್ತುತ ನಮ್ಮ ನೋವುಗಳಿಗೆ ಅಂಬೇಡ್ಕರ್ ನೆನಕೆಯಲ್ಲಿ ಸಾಂತ್ವನವಿರುವುದು ದಿಟ. ಆದರೆ, ಪ್ರತಿಮೆ ಮತ್ತು ಭಾವಚಿತ್ರದಲ್ಲಿರುವ ಅಂಬೇಡ್ಕರ್‌ರನ್ನು ರಕ್ಷಿಸುತ್ತಾ, ಸಮ್ಮೋಹನಕ್ಕೊಳಗಾಗಿ ಅದ್ದೂರಿ ಮೆರವಣಿಗೆ ಮಾಡುತ್ತಾ ಭಾವನೆಗಳ ಅಂಬೇಡ್ಕರ್‌ರನ್ನು ನಿರ್ಲಕ್ಷಿಸುತ್ತಾ ಮರೆತ್ತಿದ್ದೇವೆ. ಅಂಬೇಡ್ಕರ್ ಚಿಂತನೆಗಳನ್ನು ಮರೆಮಾಚಿ, ವಾಸ್ತವಿಕವಾಗಿ ಗಾಂಧಿ ಚಿಂತನೆಯಲ್ಲಿ ಬದುಕುತ್ತಿದ್ದೇವೆ ಎಂಬುದು ನಿಜವಲ್ಲವೇ? ಒಂದುಕ್ಷಣ ಆತ್ಮಾವಲೋಕನ ಮಾಡಿಕೊಳ್ಳೋಣ.

"ಯೆವ್ಲೋಲಾ ನಿರ್ಣಯ ನನಗೆ ದಿಗ್ಭ್ರಮೆ ತಂದಿದೆ, ದಲಿತರು ಹಿಂದೂ ಧರ್ಮ ಬಿಡುವ ಅಗತ್ಯವಿಲ್ಲ" ಎಂದು ಅಂದಿನ ದಲಿತ ನಾಯಕ ಕಾಜ್ರೋಳಕರ್ ಹೇಳಿದರೆ, "ಹಿಂದೂ ಧರ್ಮ ಬಿಟ್ಟು ನಾವು ಎಲ್ಲಿ ಹೋದರೂ ನಮ್ಮ ಅಸ್ಪೃಶ್ಯತೆ ನಿರ್ಮೂಲನೆ ಆಗುವದಿಲ್ಲ" ಎರಿದು ಇನ್ನೊಬ್ಬ ದಲಿತ ಮುಖಂಡ ದೇವ್ರೂರಕರ್ ಹೇಳಿದರು. ಡಾ. ಸೋಲಂಕಿ ಅವರು "ಹಿಂದೂ ಧರ್ಮದಲ್ಲಿದ್ದುಕೊಂಡೆ ಸಮಾನತೆಗಾಗಿ ಹೋರಾಡೋಣ" ಎಂದು ಧರ್ಮಾಂತರ ಚಳವಳಿಗೆ ಬೆನ್ನು ತೋರಿದರು. ದುಂದುಮೇಜಿನ ಸಭೆಯಲ್ಲಿ ಅಂಬೇಡ್ಕರರ ಸಹವರ್ತಿಯಾಗಿದ್ದ ರಾವ್ ಬಹದ್ದೂರ್ ಶ್ರೀನಿವಾಸನ್ "ಎಲ್ಲಾ ಅಸ್ಪೃಶ್ಯರು ಏಕಕಾಲಕ್ಕೆ ಹಿಂದೂ ಧರ್ಮ ಬಿಡುವುದು ಅಸಾಧ್ಯ. ಕೆಲವರು ಬಿಟ್ಟು ಕೆಲವರು ಉಳಿದರೆ ದಲಿತ ವರ್ಗಗಳ ಏಕತೆಗೆ ಧಕ್ಕೇ ಬರುತ್ತದೆ. ಇದರ ಬದಲು ದಲಿತ ವರ್ಗಗಳನ್ನು ಇನ್ನೂ ಯಶಸ್ವಿಯಾಗಿ ಸಂಘಟಿಸಿ ಅವರ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಹಕ್ಕುಗಳಿಗೆ ಹೋರಾಡುವುದೇ ಸೂಕ್ತ" ಎಂದು ಹೇಳಿ ಅಂಬೇಡ್ಕರರಿಂದ ದೂರವಾದರೂ ಅಂಬೇಡ್ಕರರ ಧಾರ್ಮಿಕ ನಿಲುವು ಬದಲಾಗಲಿಲ್ಲ, ಈ ಹೊತ್ತು ಸಹ ಕಾಜ್ರೋಳಕರ್, ದೇವ್ರೂರಕರ್, ಡಾ.ಸೋಲಂಕಿ ಮತ್ತು ರಾವ್‌ಬಹದ್ದೂರ್ ಶ್ರೀನಿವಾಸನ್‌ರ ಭೂತ ಹಿಡಿದವರಂತೆ ನಾವು ಮಾತನಾಡುತ್ತ ಧರ್ಮಾಂತರದ ವಿಷಯವನ್ನು ಯಾವ್ಯಾವದೋ ನೆಪ ಹೇಳಿ ಮುಂದೂಡುತ್ತಿದ್ದೇವೆ.

ಅಂಬೇಡ್ಕರ್ ನಿಲುವಿನಿಂದ ಘಾಸಿಗೊಂಡಿದ್ದ ಹಿಂದೂ ಸುಧಾರಣಾವಾದಿಗಳ ಮನಸೂರಕರ್ ಮಹಾರಾಜರ ಮೂಲಕ ಅಂಬೇಡ್ಕರರ ಮನವೊಲಿಸಿ ತಮ್ಮ ಸುಧಾರಣಾ ಕಾರ್ಯದ ಬಗ್ಗೆ ಮನವರಿಕೆ ಮಾಡಲು ಯತ್ನಿಸಿದರು. ಆದರೆ ಹಿಂದೂ ಧರ್ಮದ ಬೂಟಾಟಿಕೆ ಕುರಿತು ಅರಿವಿದ್ದ ಅಂಬೇಡ್ಕರರಿಗೆ ಇದ್ಯಾವುದೂ ಮನವರಿಕೆಯಾಗಲಿಲ್ಲ.

ಗಾಂಧೀಜಿ ಮತ್ತು ಅಂಬೇಡ್ಕರ್‌ರವರ ಧಾರ್ಮಿಕ ಚಿಂತನೆ ಪರಸ್ಪರ ವಿರುದ್ಧ ಮುಖವಾಗಿ ಚಲಿಸುತ್ತಿರುವುದರಿಂದ ದಿಗಿಲುಗೊಂಡ ಕಾಂಗ್ರೆಸ್ ಮುಖಂಡರು ಹೇಗಾದರು ರಾಜಿ ಮಾಡಲು ಯತ್ನಿಸಿದರು. ಮೊದಲು ವಾರ್ಧಾದಲ್ಲಿ ನಂತರ ಸೇವಾ ಗ್ರಾಮದಲ್ಲಿ ಭೇಟಿ ಮಾಡಿದರು. ಯಾವುದೆ ಫಲ ಕಾಣಲಿಲ್ಲ, ಸಂಧಾನ ಏರ್ಪಡಿಸಿದ್ದ ಸೇಠ ವಾಲಚಂದ ಹೀರಾಚಂದ ಮತ್ತು ಸೇಠ ಜಮ್ನಲಾಲ್ ಬಜಾಜ್ ಅಂಬೇಡ್ಕರ್ ಕುರಿತು "ನೀವು ಗಾಂಧೀಜಿ ಜೊತೆ ಉಳಿದರೆ ನಿಮ್ಮ ಹೋರಾಟಕ್ಕೆ ಅಪಾರ ಆರ್ಥಿಕ ನೆರವು ನೀಡುತ್ತೇವೆ" ಎಂದು ತಿಳಿಸಿದರು. ಈ ಪ್ರಸ್ತಾವನೆಯನ್ನು ಅಂಬೇಡ್ಕರ್ ತಿರಸ್ಕರಿಸಿದಾಗ, ಕೊನೆಯದಾಗಿ "ನೀವ್ಯಾಕೆ ನೆಹರು ಮಾರ್ಗ ಹಿಡಿಯಬಾರದು?" ಎಂದು ಸಲಹೆ ನೀಡಿದರು. ಆಗ ಅಂಬೇಡ್ಕರ್ "ಯಶಸ್ಸು ಗಳಿಸಲು ಆತ್ಮಸಾಕ್ಷಿ ಕೊಂದುಕೊಳ್ಳಲಾರೆ" ಎಂದು ಸ್ಪಷ್ಟಪಡಿಸಿದರು. ಇದು ಜಗತ್ತು ಮೆಚ್ಚಿದ ಡಾ.ಅಂಬೇಡ್ಕರ್ ಅವರ ದೃಢತೆ.



ಯೆವ್ಲೋಲಾ ನಿರ್ಣಯಕ್ಕೆ ಇನ್ನೊಂದು ಕಡೆಯಿಂದ ಪ್ರೋತ್ಸಾಹದಾಯಕ ಪ್ರತಿಕ್ರಿಯೆ ಬಂದವು. ಮುಸ್ಲಿಂ ನಾಯಕ ಕೆ.ಎಲ್.ಗೌಬಾ, ವಾರಣಾಸಿಯ ಮಹಾಬೋಧಿ ಸೊಸೈಟಿ, ಮುಂಬೈ ಮೆಥೋಡಿಸ್ಟ್ ಚರ್ಚ್‌ನ ಬಿಷಪ್ ಬಾಡ್ಲೆ ಅಮೃತಸರ್ ಸ್ವರ್ಣಮಂದಿರದ ಉಪಾಧ್ಯಕ್ಷ ಸರ್ದಾರ್ ದಲಿಪ್ ಸಿಂಗ ದೋವಾಲಿಯಾ ತಂತಿ ಸಂದೇಶ ಕಳುಹಿಸಿ ಅಂಬೇಡ್ಕರರನ್ನು ತಮ್ಮ ತಮ್ಮ ಧರ್ಮಕ್ಕೆ ಆಹ್ವಾನಿಸಿದರು. ಹಲವು ಆಸೆಆಮಿಷ ಭರವಸೆಗಳ ಸುರಿಮಳೆಯಾದವು. ಕೊನೆಗೆ ಅಂಬೇಡ್ಕರ್ ಆಯ್ಕೆ ನಿಶ್ಚಲ ಹಾಗು ನಿರ್ಮಲವಾಗಿತ್ತು.

ಅಂಬೇಡ್ಕರ್ ನಿಲುವು ಅಚಲವಾಗಿರುವುದರಿಂದ ಅವರನ್ನು ದಲಿತ ಸಮುದಾಯ ಹಿಂಬಾಲಿಸದಂತೆ ಅಪಪ್ರಚಾರ ತಂತ್ರ ಹೆಣೆಯಲಾಯಿತು. ದಲಿತರು ಮತಾಂತರ ಹೊಂದಿದರೆ ಮೀಸಲಾತಿ ಸಿಗುವುದಿಲ್ಲ, ಶೈಕ್ಷಣಿಕ ಸೌಲಭ್ಯಗಳು ರದ್ದಾಗುತ್ತವೆ, ಬಿಟ್ಟಿ ಚಾಕರಿ ಮಾಡಿದ್ದಕ್ಕಾಗಿ ಹಿಂದೂಗಳು ದಲಿತರಿಗೆ ಕೊಟ್ಟ ಇನಾಮ್ ಭೂಮಿ ವಾಪಸ್ಸು ಹೋಗುತ್ತದೆ, ದಲಿತರ ರಾಜಕೀಯ ಹಕ್ಕು ನಷ್ಟವಾಗುತ್ತವೆ, ಮತಾಂತರ ಆಗಿ ಸತ್ತ ದನ ಎಳೆಯುವುದನ್ನು ಬಿಟ್ಟರೆ ದಲಿತರಿಗೆ ಆರ್ಥಿಕ ನಷ್ಟವಾಗುತ್ತದೆ. ಹೀಗೆ ಹಲವು ರೀತಿಯಲ್ಲಿ ದಲಿತರನ್ನು ಹೆದರಿಸಲಾಯಿತು.

ಇದಕ್ಕೆ ಪ್ರತ್ಯುತ್ತರ ಎಂಬಂತೆ ಬಾಬಾ ಸಾಹೇಬರು ಜಾಗೃತಿ ಅಭಿಯಾನ ಮಾಡಿ "ಈಗಿರುವ ಮೀಸಲಾತಿ ತಾತ್ಕಾಲಿಕ, ನಿಮಗೆ ಶಾಶ್ವತ ಮೀಸಲಾತಿ ಬೇಕಾದರೆ ಧರ್ಮಾಂತರ ಆಗಲೇಬೇಕು. ಜಾತಿವ್ಯವಸ್ಥೆಗೆ ಹೆದರಿ ಸುಳ್ಳು ಜಾತಿ ಹೇಳಿ ಮತಾಂತರವಾಗುವ ಬದಲು ಧರ್ಮಾಂತರವಾಗಬೇಕು. ಮತಾಂತರದಿಂದ ದಲಿತರ ಯಾವುದೇ ಚಿರ ಆಸ್ತಿ ನಷ್ಟವಾಗುವುದಿಲ್ಲ ಇದಕ್ಕೆ ಕಾನೂನಿನ ರಕ್ಷಣೆಯಿದೆ. ಸತ್ತ ದನ ಎಳೆಯುವುದರಿಂದ ಬರುವ ಆದಾಯಕ್ಕಿಂತ ಗುಲಾಮಿತನ ಅಧಿಕವಾದದ್ದು, ಗುಲಾಮಿತನ ಧಿಕ್ಕರಿಸಲು ಮತಾಂತರವಾಗಬೇಕು. ರಾಜಕೀಯ ಹಕ್ಕುಗಳು ಮತಾಂತರದಿಂದ ನಷ್ಟವಾಗದೆ ನಿಮ್ಮ ಹಿಂದೆ ಬರುತ್ತವೆ. ನೀವು ಸಂಘಟಿತರಾಗಿ ನಿಮ್ಮ ರಾಜಕೀಯ ಪಾಲನ್ನು ಇತರ ಧರ್ಮೀಯರಂತೆ ಪಡೆದುಕೊಳ್ಳಬೇಕು. ಹಾಗೆಯೇ ಮುಂದೊಂದು ದಿನ ಹಿಂದೂಗಳು 'ಹಿಂದೆ ನೀವು ಅಸ್ಪೃಶ್ಯರಾಗಿದ್ದಿರಿ, ಬಡವರಾಗಿದ್ದಿರಿ. ಇಂದು ಅಂತಹ ಸ್ಥಿತಿ ಇಲ್ಲ, ಅದಕ್ಕಾಗಿ ಮೀಸಲಾತಿ ಇಲ್ಲ' ಎನ್ನಬಹುದು. ಆದರೆ ಧರ್ಮಾಂತರವಾದರೆ ನಿಮ್ಮ ಧರ್ಮದ ಜನಸಂಖ್ಯೆಗೆ ಅನುಗುಣವಾಗಿ ಎಲ್ಲಾ ರಂಗದಲ್ಲಿ ನೀವು ನಿಮ್ಮ ಪಾಲನ್ನು ಕೇಳಬಹುದು" ಎಂದು ದಲಿತರನ್ನು ಎಚ್ಚರಿಸಿದ್ದರು.

"ನನ್ನ ಧಾರ್ಮಿಕ ಚಳವಳಿಗೆ ಎರಡು ಮುಖಗಳಿವೆ. ಒಂದು ಸಾಮಾಜಿಕ/ಭೌತಿಕ ಮುಖ, ಇನ್ನೊಂದು ಆಧ್ಯಾತ್ಮಿಕ ಮುಖ. ಇದನ್ನು ಅರ್ಥಮಾಡಿಕೊಳ್ಳಬೇಕು. ಮಾರ್ಗದಾತ ಬುದ್ಧನ ದಾರಿ ಹಿಡಿದು ಜೀವನದಲ್ಲಿ ಮುಕ್ತಿ ಕಾಣಬೇಕು" ಎಂದು ತಮ್ಮ ಆಧ್ಯಾತ್ಮಿಕ ಹಸಿವನ್ನು ವ್ಯಕ್ತಪಡಿಸಿದ್ದರು.

ಇಂದು ಸಹ ಹಿಂದೆ ಕಾಡಿದ ಇವೇ ಹಳೆ ಪ್ರಶ್ನೆಗಳನ್ನು ಮತ್ತೆ ಮತ್ತೆ ಕೇಳಲಾಗುತ್ತಿದೆ. ಈ ಬಗ್ಗೆ ವಿಚಾರಿಸಿ ದಿಟ್ಟ ಹೆಜ್ಜೆ ಇಡಬೇಕಾಗಿದೆ. ಇಲ್ಲವಾದರೆ ಅಂಬೇಡ್ಕರ್ ಅರ್ಥವಿಲ್ಲದ ಆಚರಣೆಯ ಸಂಕೇತವಾಗಿ ಉಳಿಯುತ್ತಾರೆ.

ಧಮ್ಮ ಚಕ್ರದ ವಿರಳಿತ

ಭಾರತದಲ್ಲಿ ಬೌದ್ಧರ ಜನಸಂಖ್ಯೆ ಸ್ಥಿತಿಗತಿ

ವರ್ಷ	ಭಾರತ	ಮಹಾರಾಷ್ಟ್ರ	ಕರ್ನಾಟಕ
1951	1,80,823	2,482	-
1961	32,50,227	27,89,501	9,770
1971	38,12,325	32,64,223	14,139
1981	47,19,296	39,46,149	42,251
1991	63,87,500	50,40,786	73,012
2001	79,55,207	58,38,710	3,93,300
2011	84,42,972	65,31,200	95,710

ಅಂಬೇಡ್ಕರ್ ಬೌದ್ಧ ಧಮ್ಮಕ್ಕೆ ಮತಾಂತರ ಆಗುವುದಕ್ಕಿಂತ ಮೊದಲು 1951ರಲ್ಲಿ ಮಹಾರಾಷ್ಟ್ರ ರಾಜ್ಯದಲ್ಲಿ ಬೌದ್ಧರ ಜನಸಂಖ್ಯೆ ಕೇವಲ 2,482 ಇತ್ತು ಧರ್ಮಾಂತರದ ನಂತರ 27,89,501ಕ್ಕೆ ಏರಿ ಜಾಗತಿಕ ದಾಖಲೆಯಾಯಿತು. 1951 ರಲ್ಲಿ 40 ಲಕ್ಷ ಇದ್ದ ಪರಿಶಿಷ್ಟ ಜಾತಿಯ ಜನಸಂಖ್ಯೆ 1961ಕ್ಕೆ 22 ಲಕ್ಷಕ್ಕೆ ಕುಸಿದು ಸುಮಾರು 27 ಲಕ್ಷ ಜನ ಮಹಾರಾಷ್ಟ್ರದಲ್ಲಿ ತಮ್ಮ ಪ.ಜಾತಿ ಮೀಸಲಾತಿಯನ್ನು ಕಳೆದುಕೊಂಡರು. ಆದರೆ ಮಹಾರಾಷ್ಟ್ರದ ನವ ಬೌದ್ಧರು ಪರಿಶಿಷ್ಟ ಜಾತಿಯ ಸೌಲಭ್ಯಕ್ಕಾಗಿ ನಿರಂತರ ಹೋರಾಡಿ 1990ರಲ್ಲಿ ವಿ.ಪಿ.ಸಿಂಗ ಪ್ರಧಾನಿಯಾಗಿದ್ದಾಗ ಪರಿಶಿಷ್ಟ ಜಾತಿಯಿಂದ ಬೌದ್ಧ ಧರ್ಮಕ್ಕೆ ಮತಾಂತರ ಆದವರಿಗೆ ಮೀಸಲಾತಿ ನೀಡಲು ಸಂವಿಧಾನಕ್ಕೆ ತಿದ್ದುಪಡಿ ತಂದರು. 1981ರಲ್ಲಿ 44 ಲಕ್ಷ ಇದ್ದ ಪರಿಶಿಷ್ಟ ಜಾತಿಯ ಜನಸಂಖ್ಯೆ 1991ಕ್ಕೆ 87.5 ಲಕ್ಷಕ್ಕೆ ಏರಿತು, ಅದರಲ್ಲಿ 50.40 ಲಕ್ಷ ಬೌದ್ಧರೆಂದರೆ ಅತಿಶಯೋಕ್ತಿಯಲ್ಲ, ಇಂದು 2011ರ ಗಣತಿಯಂತೆ ಮಹಾರಾಷ್ಟ್ರದಲ್ಲಿ 65.31 ಲಕ್ಷ ಬೌದ್ಧರಿದ್ದಾರೆ. ಈ ಧಮ್ಮ ಚಳವಳಿಯಲ್ಲಿ ಮಹರ್ ಜನಾಂಗ ಪ್ರಮುಖವಾಗಿದ್ದರೂ, ಇನ್ನುಳಿದ ಜಾತಿಗಳ ಕೊಡುಗೆ ನಿರ್ಲಕ್ಷಿಸುವಂತಿಲ್ಲ, ಇತ್ತೀಚೆಗೆ ಲಕ್ಷ್ಮಣ ಗಾಯಕವಾಡರಂತಹ ಅಲೆಮಾರಿ ಜನಾಂಗದ ಖ್ಯಾತ ಸಾಹಿತಿಗಳು ಮತ್ತು ವಿಚಾರವಂತರು ತಮ್ಮ ಸಾವಿರಾರು ಹಿಂಬಾಲಕರೊಂದಿಗೆ ಬೌದ್ಧ ಧರ್ಮಕ್ಕೆ ಸೇರಿದ್ದು ಚಾರಿತ್ರಿಕ ಸಂಗತಿಯಾಗಿದೆ. ಮಹಾರಾಷ್ಟ್ರದ ಪರಿಶಿಷ್ಟ ಜಾತಿಯ ಎಲ್ಲಾ ಉಪ ಜಾತಿಗಳು ಧಮ್ಮ ಕ್ರಾಂತಿಯಲ್ಲಿ ಕೈ ಜೋಡಿಸಿವೆ. ಮಹಾರಾಷ್ಟ್ರದಲ್ಲಿ ಅರ್ಥವಾದ ಅಂಬೇಡ್ಕರ್‌ರ ಧಮ್ಮ ವಿಚಾರ ಇತರ ಕಡೆ ಏಕೆ ಅರ್ಥವಾಗಿಲ್ಲ?

ಕರ್ನಾಟಕದಲ್ಲಿ ಧಮ್ಮಚಕ್ರದ ದಿಡೀರ್ ಹಿಮ್ಮುಖ ಚಲನೆ

ಕರ್ನಾಟದಲ್ಲಿ ಬೌದ್ಧರ ಜನಸಂಖ್ಯೆ 1961ಕ್ಕೆ 9,770, 1971ಕ್ಕೆ 14,139, 1981ಕ್ಕೆ 42,251, 1991ಕ್ಕೆ 73,012 ಹಾಗೂ 2001ರಲ್ಲಿ ಆರ್.ಎ.ಔದಿ, ಇನ್ನಿತರರ ನೇತೃತ್ವದಲ್ಲಿ ದಕ್ಷಿಣ ಭಾರತ ಧಮ್ಮ ಯಾತ್ರೆ, ಧಮ್ಮಧೀಕ್ಷಾ ಕಾರ್ಯಕ್ರಮ ಹಾಗೂ ಬೌದ್ಧ ಜನಗಣತಿ ಆಂದೋಲನ ಕಾರ್ಯಕ್ರಮಗಳ ಫಲವಾಗಿ ಕರ್ನಾಟಕದ ಬೌದ್ಧರ ಜನಸಂಖ್ಯೆ 3,93,300ಕ್ಕೆ ಏರಿ, ದೇಶದಲ್ಲಿಯೇ 2ನೇ ಸ್ಥಾನ ಪಡೆದಿತ್ತು, ಪ್ರಥಮಸ್ಥಾನ ಮಹಾರಾಷ್ಟ್ರ, ತೃತೀಯಸ್ಥಾನ ಉತ್ತರ ಪ್ರದೇಶ ಪಡೆದಿದ್ದವು. 2001ರಲ್ಲಿ, 3.9 ಲಕ್ಷ ಏರಿಕೆಯಾಗಿದ್ದ ಬೌದ್ಧರ ಜನಸಂಖ್ಯೆ ಏಕಾಏಕಿ 2011ಕ್ಕೆ 95 ಸಾವಿರಕ್ಕೆ ಕುಸಿದು ದೇಶದಲ್ಲಿಯೇ ಅತ್ಯಧಿಕ ನಕಾರಾತ್ಮಕ ಬೆಳವಣಿಗೆ ಹೊಂದಿ ಬೌದ್ಧ ಧಮ್ಮ ಆಸಕ್ತರನ್ನು ಆಘಾತಗೊಳಿಸಿದೆ. 2.97 ಲಕ್ಷ ಜನ ವಾಪಸ್ಸು ಹಿಂದೂ ಎಂದು ದಾಖಲಿಸಿಕೊಂಡಿದ್ದಾರೆ, ಕಾರಣ ಅರಿಯಬೇಕಾಗಿದೆ. ಇದರಲ್ಲಿ ಹಿಂದೂತ್ವವಾದಿಗಳ ಕಾಣದ ಕೈಚಳಕವನ್ನು ಅಲ್ಲಗಳೆಯಲಾಗದು.

ಉತ್ತರ ಪ್ರದೇಶದಲ್ಲಿ 95,746, ಪಂಜಾಬ್ 8,250, ದೆಹಲಿಯಲ್ಲಿ 5,256 ಜನ ವಾಪಸ್ಸು ಹಿಂದೂ ಎಂದು ದಾಖಲಿಸಿಕೊಂಡಿದ್ದಾರೆ. ಇದು ಅಂಬೇಡ್ಕರ್‌ರ ಪರಿವರ್ತನಾ ಚಳವಳಿಗೆ ದೊಡ್ಡ ಸವಾಲಾಗಿದೆ. ಇದು ಸಂಘಪರಿವಾರದ "ಘರ್ ವಾಪಸ್ಸಿ ಆಂದೋಲನ" ವಿರೋಧಿಸುವ ದಲಿತ ಸಂಘಟನೆಗಳು, ಬುದ್ಧಿಜೀವಿಗಳು ಅಂತರಂಗದ ಈ ಲೋಪ ಗಮನಿಸದೆ ಇರುವುದು ದುರಂತವಾಗಿದೆ.

ಹಿಂದೂ ಧರ್ಮಕ್ಕೆ ಮರು ದಾಖಲಿಸಿಕೊಂಡ ವಿವರ

ಕ್ರಮ ಸಂಖ್ಯೆ ಜಿಲ್ಲೆ	ದಾಖಲೆಯಂಲ್ಲಿ ಹಿಂದೂ ಧರ್ಮಕ್ಕೆ ವಾಪಸ್ಸಾದ ಜನಸಂಖ್ಯೆ	ಶೇಕಡಾ ?
01 ಕಲಬುರಗಿ	1,17,558	39.50%
02 ಬೀದರ	91,630	30.17%
03 ಯಾದಗಿರಿ	18,493	6.21%
04 ಮೈಸೂರು	21,730	7.30%
05 ಮಂಡ್ಯ	10,794	3.62%
06 ಚಾಮರಾಜನಗರ	29,242	9.82%
07 ಉಳಿದ 18 ಜಿಲ್ಲೆ	8,143	3.38 %
ಒಟ್ಟು	2,97,590	100 %

ಈ ಮೇಲಿನ ಅಂಕಿಅಂಶಗಳನ್ನು ಗಮನಿಸಿದರೆ ಈ ಹಿಂದೆ ಅಂಬೇಡ್ಕರ್ ಅನುಯಾಯಿಗಳ ಸಂಖ್ಯೆ ಎಲ್ಲಿ ಅಧಿಕವಾಗಿತ್ತೋ ಅದೇ ಜಿಲ್ಲೆಗಳಲ್ಲಿ ಅಧಿಕ ಕುಸಿತ ಕಂಡುಬಂದಿದೆ. ಆದರೆ ಉತ್ತರ ಕನ್ನಡ, ಬೆಂಗಳೂರ ನಗರ, ರಾಯಚೂರ, ದಾವಣಗೆರೆ, ಬೆಂಗಳೂರ ಗ್ರಾಮಾಂತರ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಒಟ್ಟು ಬೌದ್ಧರ ಸಂಖ್ಯೆ ಕಡಿಮೆ ಇದ್ದರೂ ಹಿಮ್ಮುಖ ಚಲನೆ ಆಗಿಲ್ಲ, ಇದು ಆ ಜಿಲ್ಲೆಗಳ ಜನರ ಹೆಗ್ಗಳಿಕೆಯಾಗಿದೆ.

ಈ ಬಗ್ಗೆ ಅಕ್ಟೋಬರ್ 04, 2015ಕ್ಕೆ ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಸಂವಾದ ಏರ್ಪಡಿಸಲಾಗಿತ್ತು, ಅಲ್ಲಿ ವ್ಯಕ್ತವಾದ ಅಂಶಗಳು ಎಲ್ಲಾ ದಲಿತ ಸಂಘಟನೆಗಳಿಗೆ ಮನವರಿಕೆಯಾಗಿ ಸರ್ಕಾರದ ಕ್ರಮಕ್ಕಾಗಿ ಆಗ್ರಹಿಸಬೇಕಾಗಿದೆ.

ಹಿನ್ನಡೆಗೆ ಕಾರಣಗಳು ಮತ್ತು ಪರಿಹಾರಗಳು

1) ಪರಿಶಿಷ್ಟ ಜಾತಿಯಿಂದ ಬೌದ್ಧ ಧರ್ಮಕ್ಕೆ ಮತಾಂತರ ಹೊಂದಿದ ಜನರಿಗೆ ಈ ಹಿಂದೆ ಕೈಬರಹದಲ್ಲಿ ಫಾರಂ ನಂ-01 ರಲ್ಲಿ ಬೌದ್ಧ ನವ ಬೌದ್ಧ ಎಂದು ಪರಿಶಿಷ್ಟ ಜಾತಿ ಪ್ರಮಾಣಪತ್ರ ದೊರಕುತ್ತಿತ್ತು, ಆದರೆ ಈಗ ಜಾತಿ ಪ್ರಮಾಣಪತ್ರ ವಿತರಣೆ ಆನ್‌ಲೈನ್‌ನಲ್ಲಿ ಕಂಪ್ಯೂಟರ್ ಮೂಲಕ ನೀಡುತ್ತಿದ್ದು ಅದರಲ್ಲಿ ಮತಾಂತರಗೊಂಡ ಪರಿಶಿಷ್ಟ ಜಾತಿ ಜನರು ತಮ್ಮ ಜಾತಿ ಬೌದ್ಧ ನವ ಬೌದ್ಧ ಎಂದು ದಾಖಲಿಸಿದರೆ ತಿರಸ್ಕರಿಸಲಾಗುತ್ತಿದೆ. ನವ ಬೌದ್ಧರಿಗೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ದೊರಕುತ್ತಿಲ್ಲ, ಕೂಡಲೇ ಸರಕಾರ ಕ್ರಮ ಜರುಗಿಸಬೇಕು.
2) 1990ರಲ್ಲಿ ಸಂವಿಧಾನಕ್ಕೆ ತಿದ್ದುಪಡಿ ತಂದು 25 ವರ್ಷವಾದರೂ, ಸಂವಿಧಾನದ ಹಕ್ಕು ದಲಿತರಿಗೆ ತಲುಪಲು ಕರ್ನಾಟಕ ರಾಜ್ಯ ಸರ್ಕಾರ ಚಾಲ್ತಿಯಲ್ಲಿರುವ 101 ಉಪ ಜಾತಿಗಳ ಪರಿಶಿಷ್ಟರ ಪಟ್ಟಿಯಲ್ಲಿ ನವ ಬೌದ್ಧ ಬೌದ್ಧ ಪದ ಸೇರಿಸಿ ಪಟ್ಟಿ ಪರಿಷ್ಕರಿಸಿ ಪ್ರಕಟಿಸಿಲ್ಲ, ಕೂಡಲೇ ಪ್ರಕಟಿಸಬೇಕು.
3) ಈ ಹಿಂದೆ ಪಡೆದ ನವ ಬೌದ್ಧ ಬೌದ್ಧ ಎಂಬ ಪರಿಶಿಷ್ಟ ಜಾತಿಯ ಕೈ ಬರಹದ ಜಾತಿ ಪ್ರಮಾಣಪತ್ರಗಳನ್ನು ಹಲವಾರು ಕಡೆ ತಿರಸ್ಕರಿಸಿ ನವ ಬೌದ್ಧರಿಗೆ ಶಿಕ್ಷಣದಲ್ಲಿ ಹಾಗೂ ಉದ್ಯೋಗಗಳಲ್ಲಿ ವಂಚನೆ ಮಾಡುತ್ತಿದ್ದು ಕೂಡಲೇ ಇದನ್ನು ನಿಲ್ಲಿಸಬೇಕು.
4) ಪರಿಶಿಷ್ಟ ಜಾತಿಯ ಉಪಜಾತಿ ಸಂಘಟನೆಗಳು ತಮ್ಮ ತಮ್ಮ ಉಪ ಜಾತಿಗೆ ಒತ್ತುಕೊಟ್ಟು ಒಬ್ಬರ ಮೇಲೊಬ್ಬರು ಪೈಪೋಟಿ ನಡೆಸಿ ಜನಸಂಖ್ಯಾ ಬಲ ಪ್ರದರ್ಶಿಸಲು ಧರ್ಮದ ಕಾಲಂನಲ್ಲಿ ಬೌದ್ಧ ಎಂದು ದಾಖಲಿಸದೆ ಹಿಂದೂ ಎಂದು ದಾಖಲಿಸಲು ಒತ್ತುಕೊಟ್ಟಿರುವುದು. ಉದಾ: ಹಿಂದೂ-ಚಲುವಾದಿ, ಹಿಂದೂ-ಮಾದಿಗ ಇತ್ಯಾದಿ. ಈ ಅನಾರೋಗ್ಯಕರ ಬೆಳವಣಿಗೆ ನಿಲ್ಲಬೇಕು.

ಇದುವೇ ನಾವು ಮತ್ತು ನಮ್ಮ ಸರಕಾರ ಅಂಬೇಡ್ಕರರಿಗೆ ಸಲ್ಲಿಸುವ ಅರ್ಥಪೂರ್ಣ ಗೌರವವಾಗಿದೆ. ಇಲ್ಲವಾದರೆ ಮೆರವಣಿಗೆ ನೆಪದಲ್ಲಿ ಅಂಬೇಡ್ಕರ್ ತತ್ವಗಳ ಅಪಮಾನವಾಗಲಿವೆ.

■ ಬುದ್ಧಘೋಷ ದೇವೇಂದ್ರ ಹೆಗ್ಗಡೆ
ಬೌದ್ಧ ಸಾಹಿತಿಗಳು ಹಾಗೂ ಸಂಶೋಧಕರು, ಶಹಾಪೂರ

(ಸ್ವರ್ಗ)ನಾಮಾ

...ರು 17 ಲಕ್ಷ ರೂಪಾಯಿ ಗಳನ್ನು ವಿದೇಶಗಳಲ್ಲಿ ...ಗಿಸಲು ಅನುವು ಮಾಡಿ ಕೊಟ್ಟಿತು. ನಂತರ ಈ ...ಯನ್ನು 25 ಸಾವಿರ ಡಾಲರ್‌ಗಳಿಂದ ಏರಿಕೆ ಮಾಡುತ್ತಾ ...ಯುಪಿಎ ಸರ್ಕಾರದ ಕೊನೆಯ ವೇಳೆಗೆ 75 ಸಾವಿರ ...ರ್‌ಗಳ ಮಿತಿಗೆ ಏರಿಸಲಾಗಿತ್ತು. ಈ ಹಣವನ್ನು ... ಆರೋಗ್ಯ ಚಿಕಿತ್ಸೆಗೋ, ಮಕ್ಕಳ ವಿದ್ಯಾಭ್ಯಾಸಕ್ಕೋ, ...ಗೊರೆ ಕೊಡಲಿಕ್ಕಾಗಿಯೋ, ಷೇರುಗಳನ್ನು ...ಲಿಕ್ಕಾಗಿಯೋ ಅಥವ ತಮ್ಮಿಚ್ಛಾನುಸಾರ ಯಾವುದೇ ...ಶಕ್ಕೆ ಬಳಸಲು ಅವಕಾಶ ಕಲ್ಪಿಸಿತು.

ಈಗ ಹೇಳಿಕೇಳಿ ಮೋದಿಯವರ ದರಬಾರು. ಮಾನ್ಯ ...ದಿಯ ಆಡಳಿತದ ಈ ಎರಡು ವರ್ಷಗಳಲ್ಲಿ ಈ ...ಯನ್ನು 2.5 ಲಕ್ಷ ಡಾಲರ್‌ಗಳಿಗೆ ಅಂದರೆ ಸುಮಾರು ... ಲಕ್ಷ ರೂಪಾಯಿಗಳಿಗೆ ಏರಿಕೆ ಮಾಡಲಾಗಿದೆ. ಈ ...ವನ್ನು ಹೇಗೆ ಬೇಕಾದರೂ ವಿನಿಯೋಗಿಸಬಹುದು, ...ಗಳನ್ನು ಬೇಕಾದರೂ ಕೊಳ್ಳಬಹುದು, ಆದರೆ ...ಶಗಳಲ್ಲಿ ವ್ಯಕ್ತಿಗತವಾಗಿ ಸ್ವತಃ ಕಂಪನಿಗಳನ್ನು ...ಸುವಂತಿಲ್ಲ.

ಆದರೆ ಹಲವಾರು ಖತರ್‌ನಾಕ್ ಖದೀಮರು ಈ ...ವನ್ನು ಮಣ್ಣುಪಾಲು ಮಾಡಲು ಕಳ್ಳಮಾರ್ಗಗಳನ್ನು ...ಷಣೆ ಮಾಡಿಕೊಂಡರು. ಅವರ ಪ್ರಕಾರ ಭಾರತೀಯ ...ಳು ಹೊಸ ಕಂಪನಿಗಳನ್ನು ಆರಂಭಿಸುವಂತಿಲ್ಲ; ಆದರೆ ...ಗಲೇ ಅಸ್ತಿತ್ವದಲ್ಲಿರುವ ವಿದೇಶಿ ಕಂಪನಿಗಳನ್ನು ...ೀನಪಡಿಸಿಕೊಳ್ಳಲು ಯಾವುದೇ ನಿರ್ಬಂಧವಿಲ್ಲವೆಂದು ...ಕೂಲ ಸಿಂಧು ವ್ಯಾಖ್ಯಾನ ನೀಡಿ, 'ಅಸ್ತಿತ್ವದಲ್ಲಿರುವ' ...ನಿಗಳನ್ನು ಸ್ವಾಧೀನಪಡಿಸಿಕೊಳ್ಳಲು ಆರಂಭಿಸಿದರು. ...ೆ ತೆರಿಗೆ ಸ್ವರ್ಗಗಳಲ್ಲಿ ಕಂಪನಿಗಳಿಗೆ ಭಾರೀ ಬೇಡಿಕೆ ...ಯಾಗಿದ್ದರಿಂದ ಹೊಸ ಹೊಸ ಕಂಪನಿಗಳನ್ನು ...ಾದಿಸುವ ಕಾರ್ಖಾನೆಗಳೇ ಆರಂಭವಾಗಿವೆ.

ಕಾನೂನು ಸೇವೆ ಒದಗಿಸುವ ಹೆಸರಿನಲ್ಲಿ ಕಾರ್ಯಾಚರಣೆ ...ಸುತ್ತಿರುವ 'ಮೊಸ್ಸಾಕ್ ಫೊನ್ಸಿಕಾ' ಕಂಪನಿ ಕೂಡ ...ಥಾ ದಂಧೆಯಲ್ಲಿ ತೊಡಗಿಸಿಕೊಂಡಿರುವ ಪ್ರಮುಖ ...ಕ ಕಂಪನಿಗಳಲ್ಲೊಂದು. ಇವರು ಪ್ರತಿನಿತ್ಯ ಹೊಸಹೊಸ ...ನಿಗಳನ್ನು ತಮ್ಮ ಗಿರಾಕಿಗಳ ಅಗತ್ಯಕ್ಕೆ ಅನುಗುಣವಾಗಿ, ...ಕಿಗಳ ಆಯ್ಕೆಯ ಬೇನಾಮಿ ಹೆಸರಿನಲ್ಲೇ ರಿಜಿಸ್ಟರ್ ...ಡಿಸುತ್ತಾರೆ. ನಂತರ ಕಾನೂನುಬದ್ಧವಾಗಿಯೇ ಅಂಥ ...ನಿಗಳ ಷೇರುಗಳನ್ನು ಪರಭಾರೆ ಮಾಡುವ ಮೂಲಕ ...ಪನಿಗಳನ್ನು ತಮ್ಮ ಗಿರಾಕಿಗಳಿಗೆ ಸ್ವಾಧೀನ ...ಡಿಕೊಡುತ್ತಾರೆ. ಇದು ಈ ಕಂಪನಿಯ ಪ್ರತಿನಿತ್ಯದ ...ಕ. ಮೊಸ್ಸಾಕ್ ಫೊನ್ಸಿಕ ಕಂಪನಿ ತಾನು 42 ದೇಶಗಳಲ್ಲಿ ...ರಿಗಳನ್ನು ಹೊಂದಿದೆಯೆಂದು ಅದರ ವೆಬ್‌ಸೈಟ್‌ನಲ್ಲಿ ...ಳಿಕೊಂಡಿದೆ; ಅಂದರೆ ಅದೆಷ್ಟು ಪ್ರಮಾಣದ ಅಕ್ರಮಗಳು ...ಜಾರೋಷವಾಗಿ ನಡೆಯುತ್ತಿವೆ ಎಂಬುದನ್ನು ನೀವು ...ಹಿಸಬಹುದು (ವಿವರಗಳಿಗೆ ಬಾಕ್ಸ್ ನೋಡಿ).

ಹೀಗೆ ದಂಧೆ ರಾಜಾರೋಷವಾಗಿ ನಡೆಯುತ್ತಿರುವು...ಂದ ರಿಸರ್ವ್ ಬ್ಯಾಂಕ್ ನಿಯಮಾವಳಿಯ ...ದ್ದೇಶವನ್ನೇ ಮಣ್ಣುಪಾಲು ಮಾಡಿದಂತಾಯ್ತು. ತೆರಿಗೆ ಸ್ವರ್ಗಗಳ ಮಾರ್ಗವನ್ನು ಬಳಸಿ, ಸ್ವದೇಶಿ ಸಂಪತ್ತಿಗೆ ವಿದೇಶಿ ಮುಸುಕು ತೊಡಿಸಿ ಭಾರತಕ್ಕೆ ತರುವ ದಂಧೆಯೂ ಬಿರುಸಿನಲ್ಲಿ ನಡೆದಿದೆ. ಇಂಥಾ ಘನಘೋರ ದೇಶದ್ರೋಹಿ ದಂಧೆಯಲ್ಲಿ ತೊಡಗಿಸಿಕೊಂಡಿರುವವರ ವಿವರ ನೋಡಿ.

ರಿಯಲ್ ಎಸ್ಟೇಟ್ ದಿಗ್ಗಜ ಡಿಎಲ್‌ಎಫ್ ಕಂಪನಿ ಎಲ್ಲರಿಗೂ ಗೊತ್ತು. ಅದರ ಮಾಲಿಕ ಕೆ.ಪಿ.ಸಿಂಗ್ ಇದೇ ಮಾರ್ಗ ಬಳಸಿ ಬ್ರಿಟಿಷ್ ವರ್ಜಿನ್ ಐಲ್ಯಾಂಡ್‌ನಲ್ಲಿ ಒಂದು ಕಂಪನಿಯನ್ನು ಸ್ವಾಧೀನಪಡಿಸಿಕೊಂಡಿದ್ದಾನೆ. ಆತನ ಹೆಂಡತಿ ಇಂದಿರಾ ಸಿಂಗ್ ಮತ್ತಿತರ ಕುಟುಂಬ ಸದಸ್ಯರೂ ವಿವಿಧ ಕಂಪನಿಗಳಲ್ಲಿ ಷೇರುದಾರರಾಗಿದ್ದಾರೆ.

ಅಪೋಲೋ ಗ್ರೂಪ್‌ನ ಮಾಲಿಕ ಓಂಕಾರ್ ಕನ್ವರ್ 2010ರಲ್ಲಿ ಎರಡು ಕಂಪನಿಗಳನ್ನು, 2014ರಲ್ಲಿ ಎರಡು ಟ್ರಸ್ಟ್‌ಗಳನ್ನು ಬ್ರಿ.ವ.ಐಲ್ಯಾಂಡ್‌ನಲ್ಲಿ ಸ್ಥಾಪಿಸಿದ್ದು ಬೆಳಕಿಗೆ ಬಂದಿದೆ. ಸಿಂಗಾಪುರ್‌ನ ಬರ್ಕಲೇಸ್ ಬ್ಯಾಂಕ್ ಮತ್ತು ಕೇಮನ್ ಐಲ್ಯಾಂಡ್‌ನ ನ್ಯಾಷನಲ್ ಬ್ಯಾಂಕುಗಳಲ್ಲಿ ಖಾತೆ ಹೊಂದಿರುವುದು ಬಯಲಾಗಿದೆ.

ವಿಶ್ವಸುಂದರಿ ಐಶ್ವರ್ಯ ರೈ, ಆಕೆಯ ತಂದೆ ಕೆ.ಆರ್.ಕೃಷ್ಣ ರೈ, ತಾಯಿ ವೃಂದಾ ರೈ ಮತ್ತು ಸೋದರ ಆದಿತ್ಯ ರೈ ಇವರು 2005ರ ಮೇ 14ರಂದು 'ಅಮಿಕ್ ಪಾರ್ಟನರ್ಸ್' ಎಂಬ ವಿದೇಶಿ ಕಂಪನಿಯ ಡೈರೆಕ್ಟರ್‌ಗಳಾಗಿ ನೇಮಕಗೊಂಡಿದ್ದಾರೆ. ಈ ಕಂಪನಿಯ ಆರಂಭಿಕ ಬಂಡವಾಳ 50 ಸಾವಿರ ಡಾಲರ್‌ಗಳು. ಬ್ರಿಟಿಷ್ ವರ್ಜಿನ್ ಐಲ್ಯಾಂಡ್‌ನಲ್ಲಿ ರಿಜಿಸ್ಟರ್ ಆಗಿದ್ದ ಈ ಕಂಪನಿಯನ್ನು 2008ರಲ್ಲಿ ಮುಚ್ಚಿಹಾಕಲಾಗಿದೆ. ನಂತರ ಮತ್ತಾವ ತೆರಿಗೆ ಸ್ವರ್ಗದಲ್ಲಿ, ಯಾವ್ಯಾವ ಹೆಸರಿನಲ್ಲಿ ಬೇನಾಮಿ ಶುರುವಿಟ್ಟುಕೊಂಡಿದ್ದಾರೆಂಬ ವರದಿ ಬಹಿರಂಗಗೊಳ್ಳಬೇಕಿದೆ.

'ಅಮಿತಾಭ್ ಬಚ್ಚನ್ ಕಾರ್ಪೋರೇಷನ್ ಲಿಮಿಟೆಡ್' ಎಂಬ ಕಂಪನಿ ಶುರು ಮಾಡುವ ಎರಡು ವರ್ಷ ಮೊದಲೇ ನಮ್ಮ ಬಾಲಿವುಡ್‌ನ ದಿಗ್ಗಜ ಅಮಿತಾಭ್ ನಾಲ್ಕು ಸಾಗರೋತ್ತರ ಶಿಪ್ಪಿಂಗ್ ಕಂಪನಿಗಳಲ್ಲಿ ಡೈರೆಕ್ಟರ್ ಹುದ್ದೆಯಲ್ಲಿದ್ದರು. ಅವುಗಳಲ್ಲಿ ಒಂದು ಬ್ರಿಟಿಷ್ ವರ್ಜಿನ್ ಐಲ್ಯಾಂಡ್‌ನಲ್ಲಿ ರಿಜಿಸ್ಟರ್ ಆಗಿದ್ದರೆ ಉಳಿದ ಮೂರು ಕಂಪನಿಗಳು ಮತ್ತೊಂದು ತೆರಿಗೆ ಸ್ವರ್ಗ ಬಹಮಾಸ್ ದ್ವೀಪದಲ್ಲಿ ರಿಜಿಸ್ಟರ್ ಆಗಿದ್ದವು.

ಪ್ರಧಾನಿ ಮೋದಿಯವರಿಗೆ ಆಪ್ತರಾಗಿರುವ ಗೌತಮ್ ಅದಾನಿಯ ಅಣ್ಣ ವಿನೋದ್ ಅದಾನಿಯ ದಾಖಲೆಗಳೂ ಹೊರಬಂದಿವೆ. ಬಿಲಿಯಾಧೀಶ ಸೈರಸ್ ಪೂನಾವಾಲಾನ ತಮ್ಮ ಝುವಾರೆ ಪೂನಾವಾಲಾನ ಕಂಪನಿಗಳು ಕೂಡ ಪಟ್ಟಿಯಲ್ಲಿವೆ. ಕರ್ನಾಟಕದ ಕಾಂಗ್ರೆಸ್ ಮುಖಂಡ ಹಾಲಿ ಮಂತ್ರಿ ಶಾಮನೂರು ಶಿವಶಂಕರಪ್ಪನ ಅಳಿಯ ರಾಜೇಂದ್ರ ಪಾಟೀಲ್ ಮಾತ್ರವಲ್ಲದೆ ಬೆಂಗಳೂರು ನಿವಾಸಿಗಳಾಗಿರುವ ಹಲವು ಉದ್ಯಮಿಗಳ ಹೆಸರೂ ಕೇಳಿಬಂದಿದೆ.

ಇನ್ನೂ ಕುತೂಹಲದ ಸಂಗತಿ ಇಲ್ಲಿದೆ ನೋಡಿ. ಸುಪ್ರೀಂಕೋರ್ಟ್‌ನ ಖ್ಯಾತ ವಕೀಲ, ಕಾನೂನುಪಂಡಿತ, ವಾಜಪೇಯಿ ಸರ್ಕಾರದಲ್ಲಿ ಸಾಲಿಸಿಟರ್ ಜನರಲ್ ಹುದ್ದೆಯನ್ನು ಅಲಂಕರಿಸಿದ್ದ ಶ್ರೀಮಾನ್ ಹರೀಶ್ ಸಾಳ್ವೆ ಮತ್ತು ಆತನ ಕುಟುಂಬ ಸದಸ್ಯರು ಇದೇ ಬ್ರಿಟಿಷ್ ಐಲ್ಯಾಂಡ್‌ನಲ್ಲಿ ಕ್ರೆಸ್ಟ್ ಬ್ರೈಟ್ ಲಿಮಿಟೆಡ್, ಹೈಬುಷ್ ಗ್ರೂಪ್ ಲಿ ಮತ್ತು ಎಡೆನ್ವಾಲ್ ಲಿ ಎಂಬ ಮೂರು ಕಂಪನಿಗಳನ್ನು ರಿಜಿಸ್ಟರ್ ಮಾಡಿಸಿದ್ದಾರೆ.

ಮಾಜಿ ಸಾಲಿಸಿಟರ್ ಜನರಲ್ ಸೋಲಿ ಸೊರಾಬ್ಜಿಯವರ ಸುಪುತ್ರ ಜಹಾಂಗೀರ್ ಸೊರಾಬ್ಜಿ 'ಮೂನ್‌ಗ್ಲೋ ಇನ್‌ವೆಸ್ಟ್‌ಮೆಂಟ್ ಗ್ಲೋಬಲ್ ಲಿಮಿಟೆಡ್' ಎಂಬ ಕಂಪನಿ ಹೊಂದಿದ್ದಾರೆ. ಈ ಕಂಪನಿಯ ಮೂಲಕ ಯಾವ್ಯಾವ ಬೇನಾಮಿ ದಂಧೆಗಳಲ್ಲಿ ಹಣ ಹೂಡಿದ್ದಾರೆಂಬುದು ಬಯಲಾಗಬೇಕಿದೆ.

ದಾವೂದ್ ಇಬ್ರಾಹಿಂನ ಹಣಕಾಸು ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ಇಕ್ಬಾಲ್ ಮಿರ್ಚಿ ಹಾಗೂ ಆತನ ಬಂಧುಗಳ ಹೆಸರಿನಲ್ಲಿರುವ ಕಂಪನಿಗಳನ್ನು ಪನಾಮಾ ಪೇಪರ್ಸ್ ಬಿಚ್ಚಿಟ್ಟಿದೆ. ಈತ ಮುಂಬೈ ಪೊಲೀಸರಿಗೆ ಬಹಳ ಬೇಕಾಗಿದ್ದ ಭೂಗತ ಪಾತಕಿಯಾಗಿದ್ದ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಹೀಗೇ ಏಕಕಾಲದಲ್ಲಿ ಸಿನಿಮಾ ತಾರೆಯರೂ, ಕಂಪನಿ ಮಾಲಿಕರು, ರಾಜಕಾರಣಿಗಳೂ, ಭೂಗತ ಪಾತಕಿಗಳೂ ಎಲ್ಲರೂ ಒಂದೇ ತರದ ಅಕ್ರಮ ದಂಧೆಯಲ್ಲಿ ತೊಡಗಿರುವುದು ಪತ್ತೆಯಾಗಿರುವುದು ಆಕಸ್ಮಿಕ ಎಂದುಕೊಳ್ಳುವಂತಿಲ್ಲ.

ಭಾರತದ ಕಾರ್ಪೋರೇಟ್ ಮಾಧ್ಯಮಗಳು ಈ ಸ್ಫೋಟಕ ಸುದ್ದಿಯನ್ನು ಮೂಲೆಗುಂಪು ಮಾಡಿದಂತೆ ಕಾಣುತ್ತಿದೆ. ಹಣಕಾಸು ಸಚಿವ ಅರುಣ್ ಜೈಟ್ಲಿ "ಇಂಥ ಅಕ್ರಮಗಳನ್ನು ನಾವು ಸಹಿಸೋದಿಲ್ಲ, ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೇವೆ" ಇತ್ಯಾದಿ ಮೀಡಿಯಾ ಅರ್ಭಟ ಮಾಡಿದ್ದಾರೆ. ಪ್ರಧಾನಿ ಮೋದಿ ಕೂಡ ಮತ್ತೆ ವೀರಾವೇಶದ ಪೋಸು ತೋರಿಸಿದ್ದಾರೆ. ತನಿಖಾ ತಂಡವನ್ನೂ ರಚಿಸಿದ್ದಾರೆ. ಆದರೆ ವಿಪರ್ಯಾಸವೆಂದರೆ ಬಹಳ ವ್ಯವಸ್ಥಿತವಾಗಿ ನಡೆಯುತ್ತಿರುವ ಈ ಅಕ್ರಮಗಳನ್ನು ತಡೆಯಲು ಯಾವ ರೀತಿಯ ನಿಯಮಾವಳಿಗಳನ್ನು ರೂಪಿಸುತ್ತೇವೆಂದಾಗಲಿ, ತೆರಿಗೆ ಸ್ವರ್ಗಗಳೊಂದಿಗಿನ ಒಪ್ಪಂದಗಳನ್ನು ರದ್ದುಪಡಿಸುವ ಅಥವಾ ಕನಿಷ್ಟ ಅವುಗಳನ್ನು ರಿವ್ಯೂಗೆ ಒಳಪಡಿಸುವ ಬಗ್ಗೆಯಾಗಲಿ ಒಂದು ಮಾತನ್ನೂ ಆಡದಿರುವುದು ಆಶ್ಚರ್ಯದ ಸಂಗತಿಯೇನಲ್ಲ. ಕಪ್ಪುಹಣವನ್ನು ಸ್ವಿಸ್ ಬ್ಯಾಂಕ್‌ನಿಂದ ವಾಪಸ್ ತರಲು ಮೋದಿ ಪಟಾಲಂ "ಹೋರಾಟ ನಡೆಸಿರುವ" ಮಾದರಿಯಲ್ಲೇ ಪನಾಮಾ ಪೇಪರ್ಸ್ ತನಿಖೆಯನ್ನೂ ಕೈಗೊಳ್ಳಲಿದ್ದಾರೆ ಎಂಬುದರಲ್ಲಿ ಯಾರಿಗೂ ಅನುಮಾನ ಬೇಡ.

ಭವಿಷ್ಯದಲ್ಲಿ ಇಂಥಾ ಅಕ್ರಮಗಳನ್ನು ತಡೆಯಲು ಕನಿಷ್ಟ ಮಾಡಬೇಕಾದುದೇನು? ಮೊದಲಿಗೆ ಭಾರತದಿಂದ ಹೀಗೆ ಹಣವನ್ನು ಸಾಗಿಸುವ ಜಾಲವನ್ನು ಮಟ್ಟಹಾಕಬೇಕು. ತೆರಿಗೆ ಸ್ವರ್ಗಗಳೊಂದಿಗೆ ನಡೆಯುತ್ತಿರುವ ಮುಕ್ತ ವ್ಯವಹಾರಗಳನ್ನು ಕಟ್ಟುನಿಟ್ಟಿನ ತನಿಖೆಗೆ ಒಳಪಡಿಸಬೇಕು. ತಪ್ಪಿತಸ್ಥ ಕಂಪನಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಹೀಗೆ ದೇಶದ ಸಂಪತ್ತನ್ನು ನಷ್ಟ ಮಾಡುತ್ತಿರುವ ಈ ನಿಜವಾದ ದೇಶದ್ರೋಹಿಗಳನ್ನು ಜೈಲಿಗೆ ನೂಕುವಂತಹ ಕಾನೂನುಗಳನ್ನು ರೂಪಿಸಬೇಕು. ನ್ಯಾಯಕ್ಕಾಗಿ ಆಗ್ರಹಿಸಿದ ಯುನಿವರ್ಸಿಟಿ ವಿದ್ಯಾರ್ಥಿಗಳ ಮೇಲೆ ಮುಗಿಬಿದ್ದು ದೇಶದ್ರೋಹದ ಕೇಸು ಜಡಿಯುತ್ತಿರುವ ಸರ್ಕಾರದಿಂದ ಇಂಥದ್ದನ್ನೆಲ್ಲಾ ನಿರೀಕ್ಷೆ ಮಾಡಿದರೆ ಮೋದಿಭಕ್ತರೇ ನಂಬುವ ಸ್ಥಿತಿಯಲ್ಲಿಲ್ಲ. ಅದು ಬೇರೆ ಮಾತು.

ಆದರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ಪನಾಮಾ ಪೇಪರ್ಸ್ ಭಾರೀ ಸಂಚಲನವನ್ನೇ ಉಂಟುಮಾಡಿದೆ.

ಐಸ್‌ಲ್ಯಾಂಡ್‌ನ ಅಧ್ಯಕ್ಷನ ಹೆಸರು ಕೇಳಿಬರುತ್ತಿದ್ದಂತೆಯೇ ಅಲ್ಲಿನ ಜನರು ಚರಿತ್ರೆಯಲ್ಲೇ ಕಂಡುಕೇಳರಿಯದಂತಹ ಭಾರೀ ಪ್ರತಿಭಟನೆ ನಡೆಸಿದರು. ಪ್ರತಿಭಟನಾಕಾರರು ಸಾವಿರಾರು ಸಂಖ್ಯೆಯಲ್ಲಿ ಪಾರ್ಲಿಮೆಂಟಿನ ಸುತ್ತಲೂ ನೆರೆದು ಪಾರ್ಲಿಮೆಂಟ್ ಭವನವನ್ನು ಮುತ್ತಿಗೆ ಹಾಕಿ, ಅಂತಿಮವಾಗಿ ಅಧ್ಯಕ್ಷ ರಾಜೀನಾಮೆ ಕೊಡುವಂತೆ ಮಾಡಿದರು.

ರಷ್ಯಾದ ಜನಪ್ರಿಯ ಪ್ರಧಾನಿ ವ್ಲಾದಿಮಿರ್ ಪುಟಿನ್‌ನ ಹೆಸರು ಬಂದಿರುವುದರಿಂದ ಆತನ ತಲೆ ಮೇಲೆ ತೂಗುಕತ್ತಿ ತೂಗುತ್ತಿದೆ. ರಷ್ಯಾ ರಾಜಕೀಯದಲ್ಲಿ ಭಾರೀ ಬಿರುಗಾಳಿ ಬೀಸುವ ಲಕ್ಷಣ ತೋರುತ್ತಿದೆ. ಆದರೆ ಪುಟಿನ್ ಮಾತ್ರ ಇದೆಲ್ಲಾ ಅಮೆರಿಕದ ಷಡ್ಯಂತ್ರ, ತಾನು ಅಮಾಯಕ ಎಂದು ಮೋದಿ ಮಾದರಿ ಗುಟುರು ಹಾಕಿದ್ದಾನೆ.

ಯುನೈಟೆಡ್ ಕಿಂಗ್‌ಡಮ್‌ನ ಪ್ರಧಾನಿ ಡೇವಿಡ್ ಕೆಮರೂನ್ ತಮ್ಮ ಪಿತ್ರಾರ್ಜಿತ ಕಂಪನಿಗಳಿಂದ ಲಾಭ ಮಾಡಿಕೊಂಡಿರುವುದು ನಿಜ ಎಂದು ದೇಶದ ಜನತೆಯ ಮುಂದೆ ಒಪ್ಪಿಕೊಂಡಿದ್ದಾರೆ. ಮುಂದೆ ಇದು ಯಾವರೀತಿಯ ಪರಿಣಾಮ ಬೀರುತ್ತದೆ ಎಂಬುದನ್ನು ಕಾದು ನೋಡಬೇಕಿದೆ.

ಜರ್ಮನಿಯ ಸರ್ಕಾರ ಈ ತೆರಿಗೆ ಸ್ವರ್ಗಗಳ ದಂಧೆಯನ್ನು ತಡೆಗಟ್ಟಲು ಅತ್ಯಂತ ಕಟ್ಟುನಿಟ್ಟಿನ ಕ್ರಮಗಳನ್ನು ರೂಪಿಸಲು ಮುಂದಾಗಿದೆ. ಬಹುಶಃ ಮುಂದಿನ ದಿನಗಳಲ್ಲಿ ಜರ್ಮನಿ ಕೈಗೊಳ್ಳಲಿರುವ ಕ್ರಮಗಳು ಇತರೆ ದೇಶಗಳ ಮೇಲೆ ಅಂಥದೇ ಕ್ರಮಕ್ಕಾಗಿ ಒತ್ತಡಗಳನ್ನು ಸೃಷ್ಟಿಸಲಿವೆ ಎಂಬ ನಿರೀಕ್ಷೆ ಇದೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

...ಸ್ಸಾಕ್ ಫೊನ್ಸೆಕಾದ ಕೈಚಳಕ

ಪನಾಮಾ ದೇಶವನ್ನು ಕೇಂದ್ರವಾಗಿರಿಸಿಕೊಂಡಿರುವ ...ಸ್ಸಾಕ್ ಫೊನ್ಸೆಕಾ ಕಂಪನಿ ವಿವಿಧ ದೇಶಗಳಲ್ಲಿ ರಿಜಿಸ್ಟರ್ ...ಡಿಸಿರುವ ಕಂಪನಿಗಳ ಪಟ್ಟಿ ಹೀಗಿದೆ.

...ಟಿಷ್ ವರ್ಜಿನ್ ಐಲ್ಯಾಂಡ್	- 1,13,648
...ನಾಮಾ	- 48,360
...ಹಾಮಾಸ್	- 15,915
...ಸೆಲ್ಸ್	- 15,182
...ಮೋವಾ	- 5307
...ಗ್ವಿಲಾ	- 3258
...ಂಗ್‌ಕಾಂಗ್	- 452
...ಯು.ಕೆ	- 148
...ಮೆರಿಕಾ	- 78
...ಪ್ರಸ್	- 76
...ಳಿತು ಪತ್ತೆಯಾಗದ ದೇಶದವು	- 854

(...ಪಟ್ಟಿ ಅಪೂರ್ಣ)

ಹೀಗೆ ನಾನಾ ದೇಶಗಳಲ್ಲಿ ಕಂಪನಿಗಳನ್ನು ಸೃಷ್ಟಿಮಾಡಿ ... ಮಾಡುವುದೇ ಈ ಮಧ್ಯವರ್ತಿ ಕಂಪನಿಯ ...ವಾಗಿದೆ. ಹೀಗೆ ಕಾರ್ಯನಿರ್ವಹಿಸುತ್ತಿರುವ ಪ್ರಮುಖ ... ಕಂಪನಿಗಳಲ್ಲಿ ಇದೂ ಒಂದು. ಇತರೆ ಕಂಪನಿಗಳ ... [illegible]

ಮಾರಿಷಸ್-ಮಾಯಾಲೋಕ



ಮಾರಿಷಸ್ ಎಂಬ ಪುಟ್ಟ ದ್ವೀಪಕ್ಕೂ ಭಾರತಕ್ಕೂ ಮೊದಲಿನಿಂದಲೂ ಬಹಳ ಹತ್ತಿರದ ನಂಟು. ಆರ್ಥಿಕ ವ್ಯವಹಾರಗಳಲ್ಲೂ ಗಳಸ್ಯಕಂಠಸ್ಯ ಸಂಬಂಧ. ಇನ್ನೂ ಕುತೂಹಲದ ಸಂಗತಿ ಎಂದರೆ ಈ ಮಾರಿಷಸ್‌ನ ಜನಸಂಖ್ಯೆಯಲ್ಲಿ ಶೇ. 60ರಷ್ಟು ಮಂದಿ ಭಾರತೀಯ ಮೂಲದವರು.

ಮಾರಿಷಸ್‌ನ ಹಿನ್ನೆಲೆಯನ್ನು ಸ್ವಲ್ಪ ಗಮನಿಸೋಣ. ಇದರ ಜನಸಂಖ್ಯೆ ಕೇವಲ 13 ಲಕ್ಷ, ಅದರ ರಾಜಧಾನಿ ಪೋರ್ಟ್ ಲೂಯಿಸ್‌ನ ಜನಸಂಖ್ಯೆ ಕೇವಲ 1 ಲಕ್ಷಕ್ಕಿಂತ ಸ್ವಲ್ಪವೇ ಹೆಚ್ಚು. ಅತ್ಯಂತ ರಮಣೀಯ ಪ್ರಾಕೃತಿಕ ಸೌಂದರ್ಯವನ್ನು, ಮನಮೋಹಕ ಕಡಲ ಕಿನಾರೆಯನ್ನು ಹೊಂದಿರುವ ಈ ದ್ವೀಪ ರಾಷ್ಟ್ರ ಪ್ರವಾಸೋದ್ಯಮಕ್ಕೆ ಹೆಸರುವಾಸಿ. ಹಾಗೆ ನೋಡಿದರೆ ಪ್ರವಾಸೋದ್ಯಮವನ್ನು ಹೊರತುಪಡಿಸಿದರೆ ಈ ಮಾರಿಷಸ್‌ನ ಆಂತರಿಕ ಆರ್ಥಿಕತೆಯನ್ನು ಸಶಕ್ತಗೊಳಿಸಬಲ್ಲ ಹೇಳಿಕೊಳ್ಳುವಂತಹ ಮೂಲಗಳಿಲ್ಲ. 2015ರ ಮಾರ್ಚ್‌ನಲ್ಲಿ ಮಾರಿಷಸ್ ಪ್ರವಾಸ ಮಾಡಿದ ಪ್ರಧಾನಿ ನರೇಂದ್ರ ಮೋದಿ ಆ ದೇಶದ ನೌಕಾಪಡೆಗೆ ಒಂದೆರಡು ಹಡಗುಗಳನ್ನು ಕೊಡುಗೆಯಾಗಿ ನೀಡಿದ್ದನ್ನೂ ಮತ್ತು ಆ ದೇಶದ ಪ್ರಧಾನಿ ಅದನ್ನು ಕೃತಜ್ಞತಾಭಾವದಿಂದ ಸ್ವೀಕರಿಸಿದ್ದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ.

ಇಂಥಾ ಮಾರಿಷಸ್ ದ್ವೀಪ ಭಾರತದೊಂದಿಗಿನ ಆರ್ಥಿಕ ವ್ಯವಹಾರಗಳಲ್ಲಿ ಅಮೆರಿಕ, ಇಂಗ್ಲೆಂಡ್, ಚೀನಾ ಮುಂತಾದ ಬಲಾಢ್ಯ ರಾಷ್ಟ್ರಗಳಿಗಿಂತ ಮುಂದಿದೆ ಎಂದರೆ ನೀವು ನಂಬುತ್ತೀರಾ? ನಂಬಲೇಬೇಕು. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದವರು ಬಿಡುಗಡೆ ಮಾಡಿರುವ ಅಂಕಿಅಂಶಗಳ ಪ್ರಕಾರ ವಾಸ್ತವಾಂಶ ಹೀಗಿದೆ ನೋಡಿ. 2000 ರಿಂದ 2012 ರವರೆಗೆ 13 ವರ್ಷಗಳ ಅವಧಿಯಲ್ಲಿ ಭಾರತಕ್ಕೆ ಬಂದ ವಿದೇಶಿ ನೇರ ಬಂಡವಾಳ ಅರ್ಥಾತ್ ಫಾರಿನ್ ಡೈರೆಕ್ಟ್ ಇನ್ವೆಸ್ಟ್‌ಮೆಂಟ್‌ನಲ್ಲಿ ಅಮೆರಿಕದ ಪಾಲು ಸರಾಸರಿ ಶೇಕಡ 6ರಷ್ಟು. ಹಾಗಿದ್ದರೆ ಈ ಯಃಕಶ್ಚಿತ್ ಮಾರಿಷಸ್ ಎಷ್ಟು ಬಂಡವಾಳ ಹೂಡಿರಲು ಸಾಧ್ಯ ಎಂದುಕೊಳ್ಳುವಂತಿಲ್ಲ. ಈ ಅವಧಿಯಲ್ಲಿ ಮಾರಿಷಸ್‌ನಿಂದ ಭಾರತಕ್ಕೆ ಹರಿದು ಬಂದ ಬಂಡವಾಳ ಬರೋಬ್ಬರಿ 42% !!

ಅರೆ! ಇದು ಹೇಗೆ ಸಾಧ್ಯ ಎಂಬ ಪ್ರಶ್ನೆ ಸಹಜ. ಇಲ್ಲೇ ಅಡಗಿದೆ ಮಸಲತ್ತು. ಈಗ ಬಯಲಾಗಿರುವ ಪನಾಮಾ ಪೇಪರ್ಸ್ ಮಾದರಿಯಲ್ಲೇ ಎಲ್ಲ ರಹಸ್ಯ ಅಡಗಿದೆ. ಈ ದೇಶದ ಖದೀಮ ಕಾರ್ಪೋರೇಟ್ ಕುಳಗಳು, ಭ್ರಷ್ಟ - ದೇಶದ್ರೋಹಿ ರಾಜಕಾರಣಿಗಳು ತಮ್ಮ ಅಕ್ರಮ ಗಳಿಕೆಯ ಮೂಲಕ ಗಳಿಸಿದ್ದನ್ನು ಮಾರಿಷಸ್‌ನಂಥ ತೆರಿಗೆ ಸ್ವರ್ಗಗಳಲ್ಲಿನ ಬೇನಾಮಿ ಕಂಪನಿಗಳಲ್ಲಿ ತೊಡಗಿಸುತ್ತಾರೆ. ನಂತರ ಅದೇ ಕಳ್ಳ ಹಣಕ್ಕೆ ವಿದೇಶಿ ಮುಸುಕು ತೊಡಿಸಿ, ರಾಜಮಾರ್ಗದಲ್ಲಿ ಮತ್ತೆ ದೇಶದಲ್ಲಿ ತೊಡಗಿಸುತ್ತಾರೆ. ಈ ದಂಧೆಗೆ ರೌಂಡ್ ಟ್ರಿಪ್ಪಿಂಗ್ ಎಂಬ ಅಡ್ಡ ಹೆಸರು ಬಂದಿದೆ. ಇದರ ಜೊತೆಗೆ ಬಡ ಭಾರತೀಯರಿಗೆ ತೆರಿಗೆ ವಂಚಿಸಿ, ಲಾಭವನ್ನು ಮಾತ್ರ ಲೂಟಿಹೊಡೆಯಲು ಇಚ್ಛಿಸುವ ವಿದೇಶಿ ಕಾರ್ಪೋರೇಟ್‌ಗಳು ಕೂಡ ಇಂಥದೇ ತೆರಿಗೆ ಸ್ವರ್ಗಗಳ ಮೂಲಕ ಆಪರೇಟ್ ಮಾಡುತ್ತಿರುವುದು ಬೆಳಕಿಗೆ ಬಂದಿದೆ.

ಈ ದೇಶದ ಕಾರ್ಪೋರೇಟ್ ಧಣಿಗಳು, ರಾಜಕಾರಣಿಗಳು, ಸಿನಿಮಾ ತಾರೆಯರು, ಕ್ರೀಡಾಪಟುಗಳು - ಹೀಗೆ ಕೋಟಿಕೋಟಿಗಳನ್ನು ಬಾಚುತ್ತಿರುವ ಎಲ್ಲರಿಗೂ ಮಾರಿಷಸ್ ಅಚ್ಚುಮೆಚ್ಚಿನ ಜಾಗ. ಅವರು ಕೇವಲ ಪ್ರವಾಸದ ಮೋಜಿಗಾಗಿ ಮಾತ್ರ ಹೋಗುತ್ತಿದ್ದಾರೆ ಎಂದು ನಾವು ಭಾವಿಸಿದರೆ ಅದು ಅವರ ತಪ್ಪಲ್ಲ. ನೆನಪಿಸಿಕೊಳ್ಳಿ, ಸಿಎಂ ಆಗಿದ್ದ ಯಡಿಯೂರಪ್ಪ ರಾಜೀನಾಮೆ ಕೊಡಬೇಕೆಂದು ಗದ್ದಲ ಎದ್ದಿದ್ದಾಗ, ರಾಜೀನಾಮೆಗೆ ಮೊದಲು ಅವರು 'ಮನಶ್ಶಾಂತಿಗಾಗಿ' ಮಾರಿಷಸ್ ಪ್ರವಾಸ ಮಾಡಿ ಬಂದಿದ್ದರು. ಮೋದಿಯ ಫಾರಿನ್ ಟ್ರಿಪ್‌ಗಳಲ್ಲಿ ಮಾರಿಷಸ್‌ಗೆ ವಿಶೇಷ ಮಹತ್ವವಿದೆ. ಎರಡು ದಿನ ಮಾರಿಷಸ್‌ನಲ್ಲಿ ತಂಗಿದ್ದ ಮೋದಿ ಹಲವು ವ್ಯವಹಾರಿಕ ಸಭೆಗಳನ್ನು ನಡೆಸಿದ್ದರು.

ಅದು ಎಂಥಾ ವ್ಯವಹಾರ ಅಂತ ನೀವು ಕೇಳೋಹಂಗಿಲ್ಲ; ನಾವು ಹೇಳೋಹಂಗಿಲ್ಲ!


ವಿದೇಶನೀತಿಯ ಅಸಲಿಯತ್ತು ಬಯಲಾಯಿತು

ಗುಜರಾತಿನ ದಿನಗಳಿಂದಲೂ ಸರ್ವಾಧಿಕಾರಿ ಗುಣವನ್ನು ತೋರಿಸುತ್ತಲೇ ಬಂದಿರುವ ನರೇಂದ್ರ ಮೋದಿ ಪ್ರಧಾನಿಯಾದ ಮೇಲೂ ಅದೇ ಶೈಲಿಯನ್ನು ಮುಂದುವರಿಸಿರುವುದನ್ನು ಎಲ್ಲರೂ ಬಲ್ಲರು. ಮೋದಿ ಸರ್ಕಾರದಲ್ಲಿ ಎಲ್ಲ ವ್ಯವಹಾರಗಳ ನಿಯಂತ್ರಣ ಪ್ರಧಾನಿ ಕಾರ್ಯಾಲಯದ ಕಪಿಮುಷ್ಟಿಯೊಳಗಿದ್ದು ಅದರ ಅನುಮತಿಯಿಲ್ಲದೆ ಹುಲ್ಲುಕಡ್ಡಿಯೂ ಅಲುಗಾಡುವಂತಿಲ್ಲ ಎಂದರೆ ಖಂಡಿತಾ ಉತ್ಪ್ರೇಕ್ಷೆ ಅಲ್ಲ, ಕಳೆದೆರಡು ವರ್ಷಗಳ ಅನೇಕ ವಿದ್ಯಮಾನಗಳು ಇದನ್ನು ಸಾಬೀತುಪಡಿಸಿವೆ. ವಿದೇಶಾಂಗ ಸಚಿವಾಲಯವನ್ನೂ ಮೂಲೆಗೊತ್ತಿರುವ ಮೋದಿ ವಿದೇಶ ವ್ಯವಹಾರಗಳನ್ನು ವೈಯಕ್ತಿಕ ಮಟ್ಟದಲ್ಲಿ ನಡೆಸುತ್ತ ಬಂದಿದ್ದಾನೆ. ಆತನ ಬಹುತೇಕ ವಿದೇಶ ಪ್ರಯಾಣಗಳ ಮುಖ್ಯ ಉದ್ದೇಶ ಸ್ವದೇಶಿ ಕಾರ್ಪೋರೇಟ್ ಮಿತ್ರರಿಗೆ ಹೊಸ ಹೊಸ ಮಾರುಕಟ್ಟೆಗಳನ್ನು ಕುದುರಿಸಿಕೊಡುವುದು, ವಿದೇಶಿ ಕಾರ್ಪೋರೇಟುಗಳಿಗೆ 'ಮೇಕ್ ಇನ್ ಇಂಡಿಯಾ' ಯೋಜನೆಯನ್ನು ಮಾರಾಟಮಾಡಿ ನಾಡಿನ ಸಂಪತ್ತಿನ ಲೂಟಿಗೆ ಮುಕ್ತ ಅವಕಾಶ ಕಲ್ಪಿಸುವುದು ಮತ್ತು ಅಮೆರಿಕಕ್ಕೆ ಬೆಣ್ಣೆ ಹಚ್ಚಿ ಭಾರತವನ್ನು ಮಿಲಿಟರಿ ಸೂಪರ್ ಪವರ್ ಆಗಿಸುವುದಾಗಿದೆ. ಆದರೆ ಆತನ ವಿದೇಶ ನೀತಿಯ ಅಸಲಿಯತ್ತೆಲ್ಲ ಈಗ ಬಟಾಬಯಲಾಗಿದ್ದು ಅದೊಂದು ಬರೀ ಡಂಭಾಚಾರದ ನೀತಿ, ಅಲ್ಲಿರುವುದು ಕೇವಲ ಆಡಂಬರದ ಮಾತುಗಳು ಮಾತ್ರವೆಂದು ತಿಳಿದುಬಂದಿದೆ. ಪರಿಣಾಮವಾಗಿ ಮೋದಿ ಸರ್ಕಾರ ಒಂದು ಕಡೆ ನೆರೆಕರೆಯಲ್ಲಿ ಚೀನಾ ಮತ್ತು ಪಾಕಿಸ್ತಾನಗಳಿಂದ ಇನ್ನೊಂದು ಕಡೆ ಅಂತಾರಾಷ್ಟ್ರೀಯ ವಲಯದಲ್ಲಿ ಅಮೆರಿಕದಿಂದ ತೀವ್ರ ಮುಜುಗರಕ್ಕೆ ಒಳಗಾಗಿದೆ.

ವಿದೇಶನೀತಿಯಲ್ಲಿ ಶೂನ್ಯ ಸಾಧನೆ

ಧರ್ಮಾಧರಿತ ಮತ್ತು ಫ್ಯಾಸಿಸ್ಟ್ ಪ್ರಭುತ್ವಗಳನ್ನೂ ಒಳಗೊಂಡಂತೆ ವಿಶ್ವದ ಎಲ್ಲಾ ಸರ್ವಾಧಿಕಾರಿ ಪ್ರಭುತ್ವಗಳಿಗೆ ಸೇನಾಬಲ ಬೇಕೇಬೇಕು. ಅದು ಜನರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಸಿಯುವ ಸಲುವಾಗಿರಬಹುದು, ಮಾಧ್ಯಮಗಳ ಬಾಯ್ಮುಚ್ಚಿಸುವ ಸಲುವಾಗಿರಬಹುದು, ಅಲ್ಪಸಂಖ್ಯಾತರನ್ನು ದಮನಿಸುವ ಸಲುವಾಗಿರಬಹುದು, ಅನ್ಯದೇಶಗಳ ಮೇಲೆ ಆಕ್ರಮಣ ನಡೆಸುವ ಸಲುವಾಗಿರಬಹುದು. ಭಾರತವನ್ನು 'ಹಿಂದೂ ರಾಷ್ಟ್ರ' ಎಂಬ ಧರ್ಮಾಧರಿತ ದೇಶವಾಗಿ ಪರಿವರ್ತಿಸಲು ಹೊರಟಿರುವ ಆರೆಸ್ಸೆಸ್ ಕೂಡ ಈ ನಿಯಮಕ್ಕೆ ಹೊರತಾಗಿಲ್ಲ. ಸಂಘ ಪರಿವಾರದ ಮಂದಿ ಸೇನೆ ಮತ್ತು ಸೈನಿಕರನ್ನು ಅತಿಯಾಗಿ ವೈಭವೀಕರಿಸುತ್ತಿರುವುದರ ಹಿಂದೆ, ಅವರ ಬಗ್ಗೆ ಅತಿಯಾದ ಪ್ರೀತಿ ತೋರುತ್ತಿರುವುದರ ಹಿಂದೆ ಇದೇ ಉದ್ದೇಶ ಅಡಗಿದೆ. ಕೇಂದ್ರದಲ್ಲಿ ತನ್ನದೇ ಸರ್ಕಾರ ಸ್ಥಾಪಿತವಾದದ್ದೆ ತಡ, ಸೇನೆಯನ್ನು ಸಂಪೂರ್ಣವಾಗಿ ತನ್ನ ವಶಕ್ಕೆ ತೆಗೆದುಕೊಳ್ಳುವ ಸಂಘ ಪರಿವಾರದ ಯೋಜನೆ ಕಾರ್ಯರೂಪಕ್ಕೆ ಇಳಿಯತೊಡಗಿದೆ. ಇದರೊಂದಿಗೆ ಭಾರತವನ್ನೊಂದು ಜಾಗತಿಕ ಮಿಲಿಟರಿ ಸೂಪರ್‌ಪವರ್ ಆಗಿಸುವ ಹೆಬ್ಬಯಕೆ ಅದರದಾಗಿದೆ. ದೇಶದೊಳಗೆ ಶಾಂತಿ ಸೌಹಾರ್ದದ ವಾತಾವರಣ ತೀರ ಬಿಗಡಾಯಿಸುತ್ತ ಸಾಗಿರುವ ಸಂದರ್ಭದಲ್ಲಿ, ಅರ್ಧಕ್ಕಿಂತ ಹೆಚ್ಚು ಬಡವರಿರುವ, ಅಪೌಷ್ಟಿಕತೆಯಿಂದ ಕೂಡಿರುವ, ಮಾನವಾಭಿವೃದ್ಧಿ ಸೂಚ್ಯಂಕದಲ್ಲಿ ಕೆಳಮಟ್ಟದಲ್ಲಿರುವ, ಸಾಕಷ್ಟು ಸಂಖ್ಯೆಯ ಅವಿದ್ಯಾವಂತರನ್ನು ಹೊಂದಿರುವ ಭಾರತದಂತಹ ಬಡರಾಷ್ಟ್ರ ತನ್ನ ಆದ್ಯತೆಗಳನ್ನು ಮರೆತು ಮಿಲಿಟರಿ ಸೂಪರ್‌ಪವರ್ ಆಗಲು ಹಾತೊರೆಯುತ್ತಿರುವುದನ್ನು ಏನೆನ್ನಬೇಕು?

ಮೋದಿ ಸರ್ಕಾರ ಅಮೆರಿಕವನ್ನು ಹೆಚ್ಚೆಚ್ಚು ಓಲೈಸುತ್ತಿರುವುದರ ಹಿಂದೆ ಇದೇ ಮಹತ್ವಾಕಾಂಕ್ಷೆ ಅಡಗಿದೆ. ಅದಕ್ಕೀಗ ಪ್ರಸಕ್ತವಾಗಿ ಇರುವ 'ಯುದ್ಧತಂತ್ರ ಸಹಭಾಗಿತ್ವ' ಸಾಲದು ಎನಿಸಿದೆ. ಆದುದರಿಂದಲೆ ಕಳೆದ ವರ್ಷದ ಗಣತಂತ್ರ ದಿನಾಚರಣೆಯಲ್ಲಿ ಬರಾಕ್ ಒಬಾಮಾ ಮುಖ್ಯ ಅತಿಥಿಯಾಗಿ ಭಾಗವಹಿಸಿದ ನಂತರದಲ್ಲಿ ಅಮೆರಿಕ ಜೊತೆ 'ಜಾಗತಿಕ ಸಹಭಾಗಿತ್ವ'ಕ್ಕಾಗಿ ಹಾತೊರೆಯುತ್ತಿರುವುದನ್ನು ಗಮನಿಸಬಹುದಾಗಿದೆ. ಈ ತಥಾಕಥಿತ 'ಜಾಗತಿಕ ಸಹಭಾಗಿತ್ವ' ಅಂದರೆ ಈಜಿಪ್ಟ್, ಪಾಕಿಸ್ತಾನ ಮುಂತಾದವುಗಳ ಹಾಗೆ ಅಮೆರಿಕದ 'ಯುದ್ಧತಂತ್ರ ಮಿತ್ರ' ಅಥವಾ ಕನಿಷ್ಠ 'ನ್ಯಾಟೊಯೇತರ ಯುದ್ಧತಂತ್ರ ಮಿತ್ರ'ನಾಗುವ ನಿಟ್ಟಿನಲ್ಲಿ ಏಣಿಯ ಮೊದಲ ಸೋಪಾನವಾಗಿದೆ. ಅಮೆರಿಕದಿಂದ ಅತ್ಯಧಿಕ ಯುದ್ಧೋಪಕರಣಗಳನ್ನು



ಪಡೆಯುತ್ತಿರುವ ಈಜಿಪ್ಟ್, ಪಾಕಿಸ್ತಾನಗಳಲ್ಲಿ ವಾಸ್ತವವಾಗಿ ಇರುವುದು ಸೇನಾ ಸರ್ವಾಧಿಕಾರ ಎಂಬುದನ್ನು ಗಮನಿಸಬೇಕು. ಮೋದಿ ಸರ್ಕಾರದ ಈ ನಿಲುವು ಅದಕ್ಕೆ ಅಮೆರಿಕದ ಜೊತೆ ಯುದ್ಧತಂತ್ರಕ್ಕೆ ಸಂಬಂಧಪಟ್ಟ ಕಾರ್ಯಾಚರಣೆಗಳಲ್ಲಿ ಪಾಲ್ಗೊಳ್ಳಲು ಯಾವ ಸಂಕೋಚವೂ ಇಲ್ಲ ಎಂಬುದನ್ನು ತೋರಿಸುತ್ತದೆ. ಇದರಂತೆ ಭಾರತ ಮತ್ತು ಅಮೆರಿಕದ ಯುದ್ಧವಿಮಾನ ಮತ್ತು ನೌಕೆಗಳು ಪರಸ್ಪರರ ರಕ್ಷಣಾ ನೆಲೆಗಳನ್ನು ಬಳಸತೊಡಗಿದರೆ ಮೊದಲನೆಯದಾಗಿ ಒಂದಲ್ಲ ಒಂದು ದಿನ ಭಾರತದ ಸಾರ್ವಭೌಮತೆಗೆ ಧಕ್ಕೆಯಾಗಲಿದೆ. ಎರಡನೆಯದಾಗಿ ಭಾರತ ಅದರ ಅಲಿಪ್ತ ನೀತಿಗೆ ಎಳ್ಳುನೀರು ಬಿಟ್ಟಂತಾಗಲಿದೆ. ಒಂದು ವೇಳೆ ಪಾಕಿಸ್ತಾನದೊಂದಿಗೆ ಯುದ್ಧ ಶುರುವಾಯಿತು ಎಂದು ಊಹಿಸಿಕೊಳ್ಳಿ. ಆ ಸಂದರ್ಭದಲ್ಲಿ ಅಮೆರಿಕ ಅಕ್ಕಪಕ್ಕದ ತನ್ನ ರಕ್ಷಣಾ ನೆಲೆಗಳನ್ನು ಬಳಸಲು ಬಿಡುತ್ತದೆಯೇ ಎಂಬ ಪ್ರಶ್ನೆ ಇದೆ. ಗಮನಿಸಬೇಕಾದ ಅಂಶವೆಂದರೆ ದೇಶವನ್ನೊಂದು ಸೂಪರ್ ಪವರ್ ಆಗಿಸಹೊರಟಿರುವ ಮೋದಿ ಸರ್ಕಾರಕ್ಕೆ ಪ್ರಜಾತಾಂತ್ರಿಕ ಮಾರ್ಗ ಬೇಡವಾಗಿದೆ. ಏಕೆಂದರೆ ಅದು ಈ ಬಹುಮುಖ್ಯ ವಿಚಾರಗಳನ್ನು ಸಂಸತ್ತಿನಲ್ಲಿ ಚರ್ಚಿಸಿಯೆ ಇಲ್ಲ. ಚರ್ಚೆ ಏನಾದರೂ ನಡೆದಿದ್ದರೆ ಅದು ಬರೀ ಸಂಘ ಪರಿವಾರಕ್ಕೆ ಸೀಮಿತವಾಗಿದೆ.

ಅಮೆರಿಕದೊಂದಿಗೆ ಯುದ್ಧತಂತ್ರ ಮೈತ್ರಿ ಹೊಂದಿ ಜಾಗತಿಕ ಸೇನಾಶಕ್ತಿ ಆಗಲು ಕನವರಿಸುತ್ತಿರುವ ಮೋದಿ ಸರ್ಕಾರಕ್ಕೆ ಸಾರ್ವಭೌಮತೆಗೆ ಧಕ್ಕೆಯಾಗುವುದರ ಬಗೆಗಾಗಲಿ ಅಲಿಪ್ತ ನೀತಿ ಬಗೆಗಾಗಲಿ ಎಳ್ಳಷ್ಟೂ ಕಾಳಜಿ ಇಲ್ಲದಿರುವುದು ಸ್ಪಷ್ಟವಿದೆ. ಅದು ತುಳಿಯುತ್ತಿರುವ ಹಾದಿ ಭಾರತವನ್ನು ಯಾವ ದಿಕ್ಕಿನಲ್ಲಿ ಒಯ್ಯಲಿದೆ ಎನ್ನುವುದು ಸ್ಪಷ್ಟವಿದೆ. ಒಂದೆಡೆ ಸಂಘ ಪರಿವಾರದ ಧಾರ್ಮಿಕ ಮೂಲಭೂತವಾದಿಗಳು ಹಿಂಸಾತ್ಮಕ ಮಾರ್ಗಗಳ ಮೂಲಕ ಹಿಂದೂ ರಾಷ್ಟ್ರ ನಿರ್ಮಾಣಕ್ಕೆ ಹೊರಟಿದ್ದಾರೆ. ಇನ್ನೊಂದೆಡೆ ಭಾರತದ 'ಹಿರಿಮೆ'ಯನ್ನು ಹೆಚ್ಚಿಸಲು ಅದನ್ನು ಜಾಗತಿಕ ಮಿಲಿಟರಿ ಸೂಪರ್‌ಪವರ್ ಆಗಿಸುವ ಪ್ರಯತ್ನಗಳು ಜಾರಿಯಲ್ಲಿವೆ. ಇದನ್ನೆಲ್ಲ ನೋಡುವಾಗ ಮೋದಿ ಸರ್ಕಾರ ಭಾರತವನ್ನು ಪಾಕಿಸ್ತಾನದ ಹಾಗೆ ಮಾಡಲು ಹೊರಟಿರುವಂತೆ ತೋರುವುದಿಲ್ಲವೇ?


ಕಳೆದ ಹಲವಾರು ದಶಕಗಳಿಂದ ಅಮೆರಿಕದ ಮಿತ್ರನಾಗಿರುವ ಪಾಕಿಸ್ತಾನ ಅಲ್ಲಿಂದ ಬೇಕಾದಷ್ಟು ಯುದ್ಧ ಸಾಮಗ್ರಿಗಳನ್ನೂ ಮತ್ತಿತರ ಆರ್ಥಿಕ ಸಹಾಯವನ್ನೂ ಪಡೆದುಕೊಂಡಿದೆ. ತಾನು ಪಾಕಿಸ್ತಾನಕ್ಕೆ ರವಾನಿಸುವ ಶಸ್ತ್ರಾಸ್ತ್ರಗಳು ಪ್ರಧಾನವಾಗಿ ಭಾರತದ ವಿರುದ್ಧ ಬಳಸಲಾಗುತ್ತಿವೆ ಎಂಬ ವಿಚಾರ ಅಮೆರಿಕಕ್ಕೆ ತಿಳಿದಿದ್ದರೂ ಇತ್ತೀಚೆಗಷ್ಟೆ ಅದು ಇನ್ನಷ್ಟು ಎಫ್-16 ಯುದ್ಧ ವಿಮಾನಗಳು ಮತ್ತು ದಾಳಿ ಹೆಲಿಕಾಪ್ಟರ್‌ಗಳನ್ನು ರವಾನಿಸಿದೆ. ಪಾಕಿಸ್ತಾನವಂತೂ ಇತ್ತೀಚಿನ ವರ್ಷಗಳಲ್ಲಿ ಚೀನಾ ಜೊತೆಗೂ ಸ್ನೇಹವನ್ನು ವೃದ್ಧಿಸಿದೆ. ಹೀಗೆ ಪಾಕಿಸ್ತಾನದ ಮಿಲಿಟರಿ ಮತ್ತು ಮೂಲಭೂತ ಸೌಕರ್ಯಗಳ ಅವಶ್ಯಕತೆಗಳನ್ನು ಪೂರೈಸುತ್ತಿರುವ ಅಮೆರಿಕ, ಚೀನಾಗಳೆರಡೂ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಕಾಯಂ ಸದಸ್ಯ ರಾಷ್ಟ್ರಗಳು. ಇದರಿಂದಾಗಿ ಪಾಕಿಸ್ತಾನ ಒಂದು ವಿಶಿಷ್ಟ ರಾಜಕೀಯ ಬಲವನ್ನು ತನ್ನದಾಗಿಸಿಕೊಂಡಿದೆ.

ವಾಸ್ತವ ಹೀಗಿದ್ದರೂ ಮಾರ್ಚ್ ಕೊನೆಯಲ್ಲಿ ವಾಷಿಂಗ್ಟನ್‌ನಲ್ಲಿ ನಡೆದಿದ್ದ ಪರಮಾಣು ಭದ್ರತಾ ಶೃಂಗಸಭೆಯ ನಂತರ ಒಬಾಮ ಕರೆದ ಪತ್ರಿಕಾಗೋಷ್ಠಿಯಲ್ಲಿ ಮೋದಿ ಮದುವಣಗನ ಥರ ನಡೆದುಕೊಂಡಿದ್ದ. ಆದರೆ ಒಬಾಮ ಭಾರತ, ಪಾಕಿಸ್ತಾನಗಳೆರಡನ್ನೂ ಒಂದೇ ತಕ್ಕಡಿಯಲ್ಲಿಟ್ಟು ಮಾತನಾಡಿದ. ದೊಡ್ಡ ಪ್ರಮಾಣದಲ್ಲಿ ಪರಮಾಣು ಶಸ್ತ್ರಾಸ್ತ್ರಗಳನ್ನು ತಯಾರಿಸಿ ಇಟ್ಟುಕೊಂಡಿರುವುದಕ್ಕೆ ಎರಡೂ ದೇಶಗಳಿಗೆ ಛೀಮಾರಿ ಹಾಕುತ್ತ ಅವುಗಳ ಸೇನಾ ನೀತಿಗಳು ತಪ್ಪು ದಾರಿ ಹಿಡಿದಿವೆ ಎಂದ. ಭಾರತ ಆರಂಭದಿಂದಲೂ ಅಣ್ವಸ್ತ್ರಗಳ ವಿಷಯದಲ್ಲಿ ಋಜುಮಾರ್ಗವನ್ನು ಅನುಸರಿಸುತ್ತ ಬಂದಿರುವುದನ್ನು ಗಣನೆಗೆ ತೆಗೆದುಕೊಳ್ಳದ ಒಬಾಮ ಪಾಕಿಸ್ತಾನ ಕಳ್ಳದಾರಿಯಲ್ಲಿ ಅಣ್ವಸ್ತ್ರ ಹೊಂದಿರುವುದರ ಕುರಿತು ಜಾಣ ಕುರುಡನ್ನು ಪ್ರದರ್ಶಿಸಿದ. ಪಾಕಿಸ್ತಾನದ ಅಣ್ವಸ್ತ್ರಗಳು ಉಗ್ರರ ಕೈಗೆ ಸಿಗುವ ಆತಂಕಕಾರಿ ಸಾಧ್ಯತೆಗಳ ಬಗ್ಗೆಯೂ ಆತ ಏನೂ ಹೇಳಲಿಲ್ಲ.


ವಾಸ್ತವವಾಗಿ ಒಬಾಮ ಭಾರತದ 'ಕೋಲ್ಡ್ ಸ್ಟಾರ್ಟ್' ಮಿಲಿಟರಿ ನೀತಿಯನ್ನು ಪರೋಕ್ಷವಾಗಿ ಖಂಡಿಸಿದ್ದಾನೆ. 'ಕೋಲ್ಡ್ ಸ್ಟಾರ್ಟ್' ಅಂದರೆ ಭಾರತದ ವಿರುದ್ಧ ಮೊದಲು ಅಣ್ವಸ್ತ್ರ ಪ್ರಯೋಗಿಸುವ ಪಾಕಿಸ್ತಾನದ ನೀತಿಗೆ ಪ್ರತಿಯಾಗಿ ಭಾರತ ಅಳವಡಿಸಿಕೊಂಡಿರುವ ನೀತಿ. ಅದರ ಪ್ರಕಾರ ಪಾಕಿಸ್ತಾನದಿಂದ ಅಂತಹದೊಂದು ದಾಳಿಯ ಸಾಧ್ಯತೆಯನ್ನು ತಪ್ಪಿಸಲೋಸುಗ ಭಾರತದ ಸೇನಾಪಡೆ ಗಡಿಯಾಚೆಗಿನ ಪಾಕಿಸ್ತಾನಿ ಭೂಭಾಗವನ್ನು ಆಕ್ರಮಿಸಿ ವಶದಲ್ಲಿಟ್ಟುಕೊಳ್ಳುತ್ತದೆ. ಮೋದಿ ಸರ್ಕಾರ ... ಮಾತುಗಳನ್ನು ಅತ್ಯಂತ ಕಟು ಶಬ್ದ... ವಿರೋಧಿಸಬೇಕಾಗಿತ್ತು, ಆದರೆ ಅದರ ಪ್ರತಿಕ್ರಿಯೆ ಮುದುರಿಕೊಂಡ ನಾಯಿಯ ರೀತಿಯಲ್ಲಿತ್ತು. ಸಾಯಬಾರದು ಕೋಲು ಮುರಿಯಬಾರದು ... ಅದು "ಒಬಾಮ ಭಾರತದ ಮಿಲಿಟರಿ ನೀ... ಅರ್ಥ ಮಾಡಿಕೊಂಡಿಲ್ಲ" ಎಂಬ ಭಾರಿ ನಾ... ಹೇಳಿಕೆ ನೀಡಿ ಕೈತೊಳೆದುಕೊಂಡಿದೆ! ತದನ... ಬೆಳವಣಿಗೆಯಲ್ಲಿ ಇತ್ತೀಚೆಗಷ್ಟೆ ಅಮೆರಿಕದ ... ಕಾರ್ಯದರ್ಶಿ ಭಾರತಕ್ಕೆ 3 ದಿನಗಳ ಭೇಟಿ ನೀಡಿ ... ರಕ್ಷಣಾ ಸಚಿವ ಪರಿಕ್ಕರ್ ಜೊತೆ ಲಾಜಿಸ್ಟಿಕ್ಸ್ (ಸೇನಾಪ... ಸೈನಿಕರು ಮತ್ತಿತರ ಅಗತ್ಯವಸ್ತುಗಳ ಸರಬರಾಜು ... ವಿನಿಮಯ ಒಪ್ಪಂದದ (LEMOA) ಬಗ್ಗೆ ಮ... ನಡೆಸಿದ್ದಾನೆ! ಇದಾದ ಬಳಿಕ ಭಾರತ ಈ ಒ... ಸಹಿಹಾಕಲು ಸಮ್ಮತಿಸಿಯೂ ಆಗಿದೆ!

ಆದರೆ ಇದೇ ಅಮೆರಿಕದ ಕೃಪಾಕಟಾಕ್ಷದ... ಪಾಕಿಸ್ತಾನ ಈಗ ಪಠಾಣ್‌ಕೋಟ್ ವಿಚಾರದಲ್ಲಿ ಭ... ಬಲವಾದ ರಾಜತಾಂತ್ರಿಕ ಗುದ್ದು ಕೊಟ್ಟಿದೆ. ಪಾ... ಎಸ್‌ಐಟಿ ಭಾರತಕ್ಕೆ ಬಂದುಹೋದ ತರುವಾಯ ... ಮುಖಂಡರು ಮತ್ತು ಮೌಲಾನ ಅಜರ್‌ನ ವಿಚಾರ... ಭಾರತದ ಎಸ್‌ಐಟಿ ಪಾಕಿಸ್ತಾನಕ್ಕೆ ತೆರಳಲು ಅ... ಕೋರಿದಾಗ ಪಾಕಿಸ್ತಾನಿ ಹೈಕಮಿಷನರ್ ಉಭಯ ದ... ನಡುವಿನ ಮಾತುಕತೆಯನ್ನು "ಅಮಾನತಿನಲ್ಲಿರಿಸಲ... ಎಂದು ಹೇಳಿರುವುದನ್ನು ಇನ್ಯಾವ ರೀತಿ... ಅರ್ಥೈಸಬೇಕು? ಇನ್ನೊಂದು ಕಡೆ ವಿಶ್ವಸಂಸ್ಥೆ ... ಮೌಲಾನ ಅಜರ್‌ನನ್ನು "ಅಂತಾರಾಷ್ಟ್ರೀಯ ಉಗ್ರ" ... ಘೋಷಿಸಲು ಭಾರತ ಮಾಡುತ್ತಿರುವ ಪ್ರಯತ್ನಕ್ಕೆ ಪಾ... ಮಿತ್ರನಾಗಿರುವ ಚೀನಾ ಅಡ್ಡಗಾಲು ಹಾಕಿದೆ. ಸಂ... ಮೋದಿ ಶೈಲಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿರುವ... ಮನಮೋಹನ್ ಸಿಂಗ್‌ಗೆ ಹೋಲಿಸಿದರೆ ವಿದೇ... ನೀತಿ, ಭದ್ರತಾ ನೀತಿಗಳ ವಿಷಯದಲ್ಲಿ ಮೋದಿ ... ಆವಿಷ್ಕಾರಗಳನ್ನು ಮಾಡುತ್ತ ಎಷ್ಟೊಂದು ಚುರುಕಾ... ನೋಡಿ ಎಂದು ಕೊಂಡಾಡುತ್ತಿರುವಂತಹ ಸಂದರ್ಭ... ಅಮೆರಿಕ, ಪಾಕಿಸ್ತಾನ, ಚೀನಾಗಳು ಕೊಟ್ಟಿರುವ ರಾಜತಾ... ಏಟು ಹೇಗಿದೆಯೆಂದರೆ ಇವರೆಲ್ಲರೂ ವಿ... ತತ್ತರಿಸಿಹೋಗಿದ್ದಾರೆ!

ಬೂಸಿ ಬಸ್ಯ- ಮೋದಿ



ಬಸವಣ್ಣ ಮತ್ತು ನವನಿರ್ಮಾಣ



ಕಟ್ಟಿದರೆ ಕಟ್ಟಬೇಕು
ಬಸವಣ್ಣನ ಹಾಗೆ.

ಕಲಿಯಬೇಕು
ನಿರ್ಮಾಣ ಮಾಡುವ ಮೊದಲು
'ನಿರ್ನಾಮ' ಮಾಡುವುದನ್ನೂ
ಬಸವಣ್ಣನ ಹಾಗೆ.

ಕಟ್ಟಲಿಕ್ಕಾಗದು
ಹಳೆಯದರ ಮೇಲೆಯೆ
ಹೊಸದನ್ನು.

ಮಾತುಮಾತಿಗೆ
ಬಾಯಿ, ಭುಜ
ತೊಡೆ, ಪಾದ
ಎನ್ನುವ ಸ್ವಸ್ತಿಕ ಪುರುಷರಿಗೇ
ಸೂಕ್ತವಾದ
ಕರ್ಮಾಲಯ
ಹಳೆಯದಾಗಿದೆ
ಐದು ಸಾವಿರ ವರ್ಷಗಳಷ್ಟು.

ಸೋರುತ್ತಿದೆ
ಎಲ್ಲೆಂದರಲ್ಲಿ
ಸೋರುತ್ತಲೇ ಇದೆ
ಐದು ಸಾವಿರ ವರ್ಷಗಳಿಂದ.
ಮೂವತ್ಮೂರು ಕೋಟಿ
ಮನೆಯೊಡೆಯರಿದ್ದೂ
ಇಲ್ಲವಾಗಿ
ಮನೆಯೊಳಗೆ
ರಜ ತುಂಬಿದೆ.


ಒಳಗೆಲ್ಲ ಕರಾಳ ಕತ್ತಲು
ಜಾತಿವಿಜಾತಿ
ಹುಳುಗಳ ಧ್ವನಿ.
ಇರಲಿಕ್ಕಾಗದು ಇನ್ನಿಲ್ಲಿ
ಎಂದು ಹೇಳಿದವನೇ
ಬಸವಣ್ಣ.

ಕೋಟಿ ಕೋಟಿ
ಜನರನ್ನು ಕೂಡಿಸಿ
ಸಮಭಾವದ
ಬುಲ್‌ಡೋಜರವ
ನಿರ್ಮಿಸಿದ ನೋಡಿ.

ಮೂವತ್ಮೂರು ಕೋಟಿ
ಮುಖವಾಡಗಳನ್ನೆಲ್ಲ
ಪುಡಿಪುಡಿ ಮಾಡಿ
ನಿರಾಕಾರ ಸಂಗನನ್ನು
ಎದೆಯಾಳದಲ್ಲಿ
ನಿಲ್ಲಿಸಿದ ನೋಡಿ.


ನವನಿರ್ಮಾಣಕ್ಕೆ ಮೊದಲು
ಒಳ್ಳೆಯವರೆಲ್ಲ
ಒಂದಾಗಲೇ ಬೇಕು.
ಮೇಲಿಲ್ಲದ, ಕೀಳಿಲ್ಲದ
ಮಹಾಮನೆ ನಿರ್ಮಿಸಬೇಕು.

ಅಡ್ಡಗೋಡೆಗಳನ್ನೆಲ್ಲ
ಕೆಡವುತ್ತ ಕೆಡವುತ್ತ
ಕೂಡುತ್ತ ಕೂಡುತ್ತ
ಹೋದರೆ,
ಒಂದುದಿನ ಆಗುವುದು
ಜಗವೆಲ್ಲ
ಕೂಡಲಸಂಗಮ.



■ ರಂಜಾನ್ ದ...

ಚಹಾ ಪುರಾಣವೂ ಜಾತಿ ಸಂಘರ್ಷವೂ



ಮಲ್ಲಿಕಾರ್ಜುನ ಖರ್ಗೆ

ಮೊನ್ನೆ ಅಂಬೇಡ್ಕರ್ ಜಯಂತಿಯಂದು ಲ್ಲಿಕಾರ್ಜುನ ಖರ್ಗೆಯವರು ಒಂದು ಸ್ವಾರಸ್ಯಕರ ಸಂಗತಿ ೇಳಿದರು. ಮೋದಿಯವರು ಮಾತುಮಾತಿಗೆ ನಾನು ಕ್ಕಂದಿನಲ್ಲಿ ಚಹಾ ಮಾರುತ್ತಿದ್ದೆ ಎಂದು ಹೇಳುವುದನ್ನು ೇಳಿ ಬೇಸತ್ತು ಖರ್ಗೆಯವರು "ನಾನು ಚಿಕ್ಕಂದಿನಲ್ಲಿ ಹಾ ಮಾರಲು ಹೋಗಿದ್ದರೆ ದಲಿತನಾದ ನನ್ನ ಕೈಯಿಂದ ಹಾ ಯಾರೂ ಕುಡಿಯುತ್ತಿರಲಿಲ್ಲ" ಎಂದು ಹೇಳಿದರಂತೆ. ರ್ಗೆಯವರ ಈ ಮಾತು ಕೇವಲ ರಾಜಕೀಯ ವರಸೆಯಲ್ಲ. ವರು ಹೇಳಿದ್ದು ನೂರಕ್ಕೆ ನೂರು ನಿಜ. ಅದೂ ುಜರಾತಿನಲ್ಲಿ ಅಲ್ಲಿಯ ಮೇಲ್ಜಾತಿಯವರು ಪ್ರತಿಯೊಂದಕ್ಕೂ ಾತಿ ಕೇಳುತ್ತಾರೆ.

ಮನೆ ಬಾಡಿಗೆ ಕೊಡುವಾಗಲೂ ಮೊದಲು ಾಂಸಾಹಾರಿಯೋ ಸಸ್ಯಾಹಾರಿಯೋ ಎಂದು ಕೇಳುತ್ತಾರೆ. ಂತರ ಮೇಲ್ಜಾತಿಯೋ ಕೆಳಜಾತಿಯೋ ಎಂದು ಕೇಳಿ ಾಡಿಗೆ ಮನೆ ಕೊಡಬೇಕೋ ಬೇಡವೋ ಎಂದು ರ್ಧರಿಸುತ್ತಾರೆ. 1991 ರಿಂದ 1994ರ ವರೆಗೆ ನಾನು ುಜರಾತಿನಲ್ಲಿ ಸೂರತ್‌ನ ಹತ್ತಿರದ ವಲ್ಸಾಡ್ ಎಂಬ ಸಣ್ಣ ಟ್ಟಣದಲ್ಲಿ ನಮ್ಮ ಬ್ಯಾಂಕ್ ಶಾಖೆಯ ಮ್ಯಾನೇಜರ್ ಾಗಿದ್ದೆ. 1994 ಆಗಸ್ಟ್‌ನಲ್ಲಿ ನನಗೆ ಮಂಗಳೂರಿಗೆ ರ್ಗವಾದ ಆದೇಶ ಬಂದಾಗ ಶಾಖೆಯ ಚಾರ್ಜ್ ೆಗೆದುಕೊಳ್ಳಲು ನನ್ನ ಸ್ಥಳಕ್ಕೆ ಬಂದ ಮ್ಯಾನೇಜರ್ ಗುಜರಾತಿ ದಲಿತರಾಗಿದ್ದರು. ಅವರನ್ನು ಕರೆದುಕೊಂಡು ನಾನು ನನ್ನ ಾಡಿಗೆ ಮನೆಯ ಮಾಲಿಕನ ಹತ್ತಿರ ಹೋಗಿ ಅವರನ್ನು ರಿಚಯಿಸಿ ನಾನು ಕೆಲವೇ ದಿನಗಳಲ್ಲಿ ಖಾಲಿ ಮಾಡಲಿರುವ ಮನೆಯನ್ನು ಈ ಹೊಸ ಮ್ಯಾನೇಜರ್‌ಗೆ ಕೊಡುವಂತೆ ಫಾರಸು ಮಾಡಿದೆ. ಆಗ ಮನೆಯ ಯಜಮಾನ ಗುಜರಾತಿ ಾಷೆಯಲ್ಲಿ ನೇರವಾಗಿ ಅವರನ್ನೇ ಅವರ ಜಾತಿ ಕೇಳಿದ. ಅವರು ತಮ್ಮ ಜಾತಿ ಹೇಳಿದ ಮೇಲೆ, ನಾನು ದಲಿತರಿಗೆ ಮನೆ ಕೊಡುವುದಿಲ್ಲ ಎಂದು ಅವರ ಮುಖಕ್ಕೆ ಹೊಡೆದಂತೆ ಹೇಳಿ ನಮ್ಮನ್ನು ಕಳುಹಿಸಿಬಿಟ್ಟ.

ನಾನು 2001 ರಿಂದ 2005 ರ ವರೆಗೆ ಹೈದರಾಬಾದಿನಲ್ಲಿ ನಮ್ಮ ಬ್ಯಾಂಕಿನ ವಿವಿಧ ಶಾಖೆಯಲ್ಲಿ ೆಲಸ ಮಾಡಿದ್ದೇನೆ. ಆಗ ಇಂದಿರಾ ಸದನ್ ಶಾಖೆಯಲ್ಲಿ ನಾನು ಮ್ಯಾನೇಜರ್ ಆಗಿದ್ದಾಗ ಇಬ್ಬರು ಪದವೀಧರರಿಗೆ ಪ್ರಧಾನಮಂತ್ರಿ ರೋಜ್ಗಾರ್ ಯೋಜನೆಯಡಿ ತಲಾ 95 ಸಾವಿರ ಸಾಲ ಕೊಟ್ಟೆ. ಇಬ್ಬರೂ ಅದೇ ಪ್ರದೇಶದಲ್ಲಿ ಕಿರಾಣಿ ಅಂಗಡಿ ತೆರೆದರು. ಅವರಲ್ಲಿ ಒಬ್ಬ ಕಮ್ಮಾ (ನಾಯ್ಡು) ಎಂಬ ಮೇಲ್ಜಾತಿಯವನು ಹಾಗೂ ಇನ್ನೊಬ್ಬ ದಲಿತನಾಗಿದ್ದ. ಇಬ್ಬರ ಕಿರಾಣಿ ಅಂಗಡಿಯೂ ಐದಾರು ತಿಂಗಳು ಲಾಭಕರವಾಗಿ ನಡೆಯಿತು. ಎರಡೂ ಅಂಗಡಿಯವರದ್ದೂ ಒಂದೇ ಗುಣಮಟ್ಟ ಹಾಗೂ ಒಂದೇ ಬೆಲೆಯ ಸಾಮಾನುಗಳು. ಆದರೂ ನಂತರ ಕ್ರಮೇಣ ದಲಿತನ ಅಂಗಡಿಗೆ ಗ್ರಾಹಕರು ಕಡಿಮೆಯಾದರು. ಕಾರಣ ಕಿರಾಣಿ ಸಾಮಾನು ಕೊಳ್ಳಲು ಬರುತ್ತಿದ್ದ ಹೆಂಗಸರಿಗೆ ಅಂಗಡಿಯಾತನ ಜಾತಿ ಕೇಳುವ ಕೆಟ್ಟ ಅಭ್ಯಾಸ ಅಲ್ಲಿತ್ತು, ಅವನು ದಲಿತ ಎಂಬ ವಿಷಯ ಹೆಂಗಸರಲ್ಲಿಯೇ ಕ್ರಮೇಣ ಹರಡಿ ಅವನ ವ್ಯಾಪಾರ ಕುಸಿಯುತ್ತಾ ಹೋಯಿತು (ಜಾತಿಯ ಸಂಕುಚಿತ ಬುದ್ಧಿ ಗಂಡಸರಿಗಿಂತ ಹೆಂಗಸರಲ್ಲಿಯೇ ಹೆಚ್ಚು). ನಂತರ ಆ ದಲಿತ ಹುಡುಗನು ತನ್ನ ಕಿರಾಣಿ ಅಂಗಡಿಯನ್ನು ಮುಚ್ಚಿ ರಿಕ್ಷಾಗೆ ಸಾಲ ಪಡೆದು ನನ್ನ ಸಲಹೆಯಂತೆ ಆಟೋರಿಕ್ಷಾ ಓಡಿಸಿದನು. ಇದು 2004 ರಲ್ಲಿ ಹೈದರಾಬಾದಿನಲ್ಲಿ ನಾನು ಪ್ರತ್ಯಕ್ಷ ಸಾಕ್ಷಿಯಾದ ಘಟನೆ.

ಉತ್ತರ ಕರ್ನಾಟಕದಲ್ಲಿ ಇವತ್ತಿಗೂ ಹೆಚ್ಚಿನ ಊರುಗಳಲ್ಲಿ ಹೋಟೆಲುಗಳ ಬೋರ್ಡ್ ಮೇಲೆ ಉಡುಪಿ ಬ್ರಾಹ್ಮಣರ ಹೋಟೆಲು ಎಂದು ಬರೆಯುವ ರೂಢಿ ಇದೆ. ಅಷ್ಟೇ ಅಲ್ಲ ಹೊಟೇಲ್ ಮಾಲಿಕನ ಹೆಸರೂ ಬರೆಯಲಾಗುತ್ತದೆ. ಅಲ್ಲಿ ಹೋಟೆಲು ರಂಗದಲ್ಲಿ ಉಡುಪಿ ಬ್ರಾಹ್ಮಣರ ಏಕಸ್ವಾಮ್ಯದ ನಡುವೆ ಒಂದು ಕಾಲದಲ್ಲಿ ಬಂಟ ಹಾಗೂ ಬಿಲ್ಲವರಂತಹ ಪ್ರಬಲ ಜಾತಿಗಳವರೂ ಹೋಟೆಲು ನಡೆಸುವುದು ಕಷ್ಟವಾಗಿತ್ತು. 40-50 ವರ್ಷಗಳಿಗಿಂತ ಮೊದಲು ಮೇಲ್ಜಾತಿ ಬಂಟರು ಅಲ್ಲಿ ಹೋಟೆಲು ತೆರೆದರೂ ಅವರ ವಿರುದ್ಧ ಬ್ರಾಹ್ಮಣರು ಜಾತಿಯ ಅಪಪ್ರಚಾರ ಮಾಡಿ ಹೋಟೆಲು ಮುಚ್ಚಿಸಿದ ಅನೇಕ ಘಟನೆಗಳು ನಡೆದಿವೆ. ಅದಕ್ಕಾಗಿ ಅನೇಕ ಬಂಟರು ಮತ್ತು ಬಿಲ್ಲವರು ತಮ್ಮ ಉಪನಾಮ ಬದಲಿಸಿ ತಾವೂ ಬ್ರಾಹ್ಮಣರು ಎಂದು ಹೇಳಿಕೊಂಡು ಹೋಟೆಲು ನಡೆಸುವ ಪರಿಸ್ಥಿತಿ ಆಗ ಅಲ್ಲಿತ್ತು.

ಆಗ ಬಾಗಲಕೋಟೆಯಲ್ಲಿ ನಾರಾಯಣ ರೈ ಎಂಬವರು ಸಸ್ಯಾಹಾರಿ ಹೋಟೆಲು ತೆರೆದರು. ಆದರೆ ಜಾತಿಯ ಕಾರಣದಿಂದ ಅದು ನಡೆಯಲಿಲ್ಲ ಎಂದು ಅವರು ವಿಜಯಪುರಕ್ಕೆ ಹೋಗಿ ನಾರಾಯಣ ರಾವ್ ಎಂದು ಹೆಸರು ಬದಲಿಸಿ ತಾವು ಬ್ರಾಹ್ಮಣರು ಎಂದು ಹೇಳಿ ವಿಜಯಪುರದಲ್ಲಿ ಹೋಟೆಲು ತೆರೆದು ಯಶಸ್ವಿಯಾದರು. ಅವರ ಮಕ್ಕಳನ್ನು ಶಾಲೆಗೆ ಸೇರಿಸುವಾಗಲೂ ಈ ರಾವ್ ಎಂಬ ಬ್ರಾಹ್ಮಣ ಹೆಸರೇ ಅಂಟಿಕೊಂಡಿದ್ದರಿಂದ ಈಗ ಅವರ ಮಗ ಗಣೇಶ್ ರಾವ್ ಇಂಜಿನಿಯರ್ ಆಗಿ ವಿದೇಶದಲ್ಲಿದ್ದಾನೆ. ಈಗ ಗಣೇಶ್ ರಾವ್‌ಗೆ ಇತರ ಜಾತಿಯವರು ಸಿಕ್ಕಾಗ ಒತ್ತಿ ಒತ್ತಿ ಹೇಳಬೇಕಾಗುತ್ತದೆ ತನ್ನ ಉಪನಾಮ ರಾವ್ ಆದರೂ ತಾನು ಬ್ರಾಹ್ಮಣನಲ್ಲ ಶೂದ್ರ ಎಂದು.

ಹೊಸಪೇಟೆಯಲ್ಲಿ ಒಬ್ಬರು ಕೃಷ್ಣ ಶೆಟ್ಟಿ ಎಂಬ ತಮ್ಮ ಹೆಸರಲ್ಲಿ ಶೆಟ್ಟಿ ಉಪನಾಮ ತೆಗೆದುಹಾಕಿ ಮೂರ್ತಿ ಸೇರಿಸಿ ಕೃಷ್ಣಮೂರ್ತಿ ಆಗಿ ಹೋಟೆಲು ನಡೆಸುತ್ತಿದ್ದರು. ಅದೇ ಹೆಸರು ಮಕ್ಕಳಿಗೂ ಗಟ್ಟಿಯಾಗಿ ಅವರ ಮಗ ಈಗ ಕಣ್ಣಿನ ಡಾಕ್ಟರ್ ಆದರೂ ಅವನೂ ಶೆಟ್ಟಿ ಉಪನಾಮ ಉಪಯೋಗಿಸದಂತಾಗಿದೆ.

ಹಾವೇರಿಯಲ್ಲಿ ಮಾಗಾವಿ ಟಾಕೀಸ್ ಹತ್ತಿರ ಬ್ರಾಹ್ಮಣನ ಹೋಟೆಲಿನಲ್ಲಿ ಅಡುಗೆಯವನಾಗಿ ಕೆಲಸ ಮಾಡುತ್ತಿದ್ದ ಬಿಲ್ಲವ ಜಾತಿಯವನೊಬ್ಬ ಅಲ್ಲಿಯೇ ಸ್ವಲ್ಪ ದೂರದಲ್ಲಿ ತನ್ನ ಸ್ವಂತ ಚಹಾದಂಗಡಿ ತೆರೆದನು. ಅದು ಮೊದಲಿಗೆ ಚೆನ್ನಾಗಿ ನಡೆಯಿತು. ಆದರೆ ನಂತರ ಹಾವೇರಿಯ ಉಡುಪಿ ಬ್ರಾಹ್ಮಣ ಹೋಟೆಲಿನವರು ಅಪಪ್ರಚಾರ ಮಾಡಿ ಅವನ ಉಪನಾಮ ಪೂಜಾರಿಯಾಗಿದ್ದರೂ ಅವನು ಬ್ರಾಹ್ಮಣನಲ್ಲ ಅವನು ಕೆಳಜಾತಿಯವನು ಎಂದು ಹೇಳಿ ಲಿಂಗಾಯತರು ಆ ಪೂಜಾರಿಯ ಚಹಾದಂಗಡಿಗೆ ಹೋಗದಂತೆ ಮಾಡಿದರು. ಹಾಗಾಗಿ ಆ ಪೂಜಾರಿ ಹಾವೇರಿಯ ಅಂಗಡಿ ಮುಚ್ಚಿ ರಾಣೆಬೆನ್ನೂರಿಗೆ ಹೋಗಿ ಅಲ್ಲಿ ಬೇರೇನೋ ಅಂಗಡಿ ತೆರೆದನು.

ಆದರೆ 25 ವರ್ಷಗಳಿಂದೀಚೆಗೆ ಉ.ಕ ದಲ್ಲಿ ಬಾರ್ ಮತ್ತು ಮಾಂಸಾಹಾರಿ ಹೋಟೆಲುಗಳ ಭರಾಟೆ ಶುರುವಾದ ಮೇಲೆ ಮಾತ್ರ ಸಸ್ಯಾಹಾರಿ ಹೋಟೆಲು ರಂಗದಲ್ಲಿಯೂ ಬ್ರಾಹ್ಮಣರ ಏಕಸ್ವಾಮ್ಯ ಮುರಿದು ಇತರ ಶೂದ್ರ ಜಾತಿಗಳವರೂ ಅಲ್ಲಿ ಸಸ್ಯಾಹಾರಿ ಹೋಟೆಲು ನಡೆಸುವುದು ಸಾಧ್ಯವಾಗಿದೆ. ಆದರೆ ಈಗಲೂ ದಲಿತರು ಉ.ಕ ದಲ್ಲಿ ಚಹಾದಂಗಡಿ, ಜ್ಯೂಸ್ ಸ್ಟಾಲ್ ತೆರೆಯುವುದು ಕನಸಿನ ಮಾತಾಗಿದೆ. ಉ.ಕ ದಲ್ಲಿ ಲಿಂಗಾಯತರ ಖಾನಾವಳಿ, ಮರಾಠಾ ಖಾನಾವಳಿ, ಸಾವಜಿ ಖಾನಾವಳಿ, ಜೈನರ ಭೋಜನಾಲಯ ಇವೆಲ್ಲಾ ಇವೆ. ಆದರೆ ಎಲ್ಲಿಯೂ ಕುರುಬರ ಖಾನಾವಳಿ, ವಾಲ್ಮೀಕಿ/ ಬೇಡರ ಭೋಜನಾಲಯ, ಲಂಬಾಣಿ ಲಂಚ್ ಹೋಮ್ ಕಾಣಸಿಗುವುದಿಲ್ಲ, ಇನ್ನು ದಲಿತರ ಖಾನಾವಳಿ ಎಲ್ಲಿಯಾದರೂ ತೆರೆಯಲು ಸಾಧ್ಯವೇ? ಮುಸ್ಲಿಮರ ಹೋಟೆಲು ಕೇವಲ ಮುಸ್ಲಿಂ ಪ್ರದೇಶದಲ್ಲಿ ಮಾತ್ರ ನಡೆಯುತ್ತವೆ.


ಉ.ಕ ದಲ್ಲಿ ಉಡುಪಿ ಬ್ರಾಹ್ಮಣರು ಶೂದ್ರರಿಗೆ ವಿಲನ್. ಆದರೆ ಮುಂಬೈಯಲ್ಲಿ ಮೇಲ್ಜಾತಿಯ ಶೂದ್ರರೇ ಕೆಳಜಾತಿಯ ಶೂದ್ರರಿಗೆ ವಿಲನ್ ಆಗಿದ್ದಾರೆ. ನಾನು 1973 ರಲ್ಲಿ ಮುಂಬೈಯಲ್ಲಿ ಬ್ಯಾಂಕ್ ಗುಮಾಸ್ತನಾಗಿ ಕೆಲಸಕ್ಕೆ ಸೇರಿದಾಗ ಠಾಣಾ ಎಂಬಲ್ಲಿ ನಾನು ವಾಸಿಸುತ್ತಿದ್ದ ಅಲ್ಲಿಯೇ ಹತ್ತಿರದಲ್ಲಿ ಒಂದು ಬಂಟ ಜಾತಿಯವರ ಹೋಟೆಲಿತ್ತು, ಅಲ್ಲಿ ಗುಜರಾತಿಗಳಿಗೆ ತುಂಬಾ ಇಷ್ಟವಾದ ಉಕಾಳಾ ಮತ್ತು ಅಷ್ಟದಾವಾದಿ ಎಂಬ ಎರಡು ತರದ ಕಡಕ್ ಚಹಾ ತುಂಬಾ ಜನಪ್ರಿಯವಾಗಿತ್ತು, ಅದನ್ನು ತಯಾರಿಸುತ್ತಿದ್ದುದು ಅವರ ಅಡುಗೆಯವನಾದ ತಿಮ್ಮಪ್ಪ ಮುಂಡಾಲ ಎಂಬ ದಲಿತ. ನಂತರ ತಿಮ್ಮಪ್ಪ ಸ್ವಲ್ಪ ದೂರದಲ್ಲಿ ತನ್ನದೇ ಚಹಾದಂಗಡಿ ತೆರೆದನು. ಚಹಾದ ವಿಶಿಷ್ಟ ರುಚಿಯಿಂದಾಗಿ ಗುಜರಾತಿಗಳಲ್ಲಿ ಅದು ಬೇಗ ಜನಪ್ರಿಯವಾಯಿತು. ಆದರೆ ಸರಿಯಾಗಿ ಗುಜರಾತಿ ರುಚಿಯ ಚಹಾ ಮಾಡುವವರಿಲ್ಲದೇ ಆ ಬಂಟರ ಚಹಾದಂಗಡಿಯ ವ್ಯಾಪಾರ ಕುಸಿಯಿತು. ಇದರಿಂದ ಮತ್ಸರಗೊಂಡ ಆ ಬಂಟ ಹೋಟೆಲಿನವನು ಅಲ್ಲಿಯ ಗುಜರಾತಿಗಳಲ್ಲಿ ಆ ತಿಮ್ಮಪ್ಪ ದಲಿತ ಎಂದು ಪ್ರಚಾರ ಮಾಡಿ ಅವನ ಅಂಗಡಿ ಮುಚ್ಚುವಂತೆ ಮಾಡಿದನು. ಆ ತಿಮ್ಮಪ್ಪ ನಂತರ ಪಶ್ಚಿಮದ ಉಪನಗರಕ್ಕೆ ಹೋಗಿ ಅಲ್ಲಿ ಪಾನ್ ಬಿಡಿ ಅಂಗಡಿ ತೆರೆದನಂತೆ.

ಮುಂಬಯಿ, ಠಾಣಾ ಜಿಲ್ಲೆ ಮತ್ತು ನವಿಮುಂಬೈ ಇಲ್ಲಿಯ ಉಪನಗರಗಳ ರೈಲ್ವೇ ಸ್ಟೇಷನ್ನುಗಳಲ್ಲಿ ಒಟ್ಟು ಒಂದು ಸಾವಿರಕ್ಕೂ ಹೆಚ್ಚು ಟೀಸ್ಟಾಲುಗಳಿವೆ. ರೈಲ್ವೆ ನಿಯಮದ ಪ್ರಕಾರ ಇವುಗಳಲ್ಲಿ ಕನಿಷ್ಠ 22% ಟೀ ಸ್ಟಾಲುಗಳನ್ನು ರೈಲ್ವೆ ಇಲಾಖೆಯವರು ಪರಿಶಿಷ್ಟರಿಗೆ ಗುತ್ತಿಗೆ ಕೊಡಬೇಕು. ಆದರೆ ಅಲ್ಲಿಯ ರೈಲ್ವೆ ಪ್ಲಾಟ್‌ಫಾರ್ಮಿನಲ್ಲಿಯ ಟೀಸ್ಟಾಲು, ಜ್ಯೂಸ್ ಸ್ಟಾಲು, ಸಿಗರೇಟ್ ಸ್ಟಾಲು, ಎಲ್ಲವೂ ಉತ್ತರ ಪ್ರದೇಶ ಮತ್ತು ಬಿಹಾರದ ಪ್ರಬಲ ಯಾದವ್ ಠಾಕೂರ್ ಮತ್ತು ಶರ್ಮಾ ಎಂಬ ಜಾತಿಯವರ ಮಾಫಿಯಾದ ಕಪಿಮುಷ್ಟಿಯಲ್ಲಿವೆ. ವಿಚಿತ್ರವೆಂದರೆ ಮುಂಬೈ ಮೂಲನಿವಾಸಿಗಳಾದ ಮರಾಠಿ ಪರಿಶಿಷ್ಟರಿಗೂ ಈ ರೈಲ್ವೇ ಸ್ಟಾಲುಗಳು ಸಿಗುತ್ತಿಲ್ಲ. ಶಿವಸೇನೆ ಸ್ವತಃ ದಲಿತ ವಿರೋಧಿಯಾದುದರಿಂದ ಅದು ಸುಮ್ಮನಿದೆ. ಪರಿಶಿಷ್ಟರ ಖೋಟಾದ ಹೆಸರಲ್ಲಿ ಎಲ್ಲವನ್ನೂ ಮೇಲ್ಜಾತಿ ಬಿಹಾರಿ ಮಾಫಿಯಾ ಕಬಳಿಸುತ್ತಿದೆ. ಎಲ್ಲವೂ ಬಿಹಾರಿ ರೈಲ್ವೆ ಮಂತ್ರಿಗಳ ಕೃಪೆ. ಇವರ ಬಾಯಲ್ಲಿ ಮಾತ್ರ ಸಾಮಾಜಿಕ ನ್ಯಾಯದ ಹುಸಿ ಕಾಳಜಿ ಅಷ್ಟೇ.

ಮೇಲಿನದೆಲ್ಲಾ ನಾನು ಬೇರೆಯವರ ತಪ್ಪು ಹುಡುಕಿದ್ದೇ ಆಯಿತು. ಆದರೆ 1967-68 ರಲ್ಲಿ ನನ್ನ ತಂದೆ ಬೆಳಗಾವಿ ಜಿಲ್ಲೆಯ ಖಾನಾಪುರ ಎಂಬಲ್ಲಿ (ಕರೀಂ ತೆಲಗಿಯ ಖಾನಾಪುರ) ಸ್ಟೇಷನ್ ಮಾಸ್ಟರ್ ಆಗಿದ್ದಾಗ ನನ್ನದೇ ಮನೆಯಲ್ಲಿ ನಡೆದ ಘಟನೆಯೊಂದಿದೆ. ಎಲ್ಲಾ ಸರಕಾರಿ ಇಲಾಖೆಗಳಂತೆ ಪ್ರತಿ ರೈಲ್ವೇ ಸ್ಟೇಷನ್ನಿನದೂ ವರ್ಷಕ್ಕೊಮ್ಮೆ ಲೆಕ್ಕ ಪರಿಶೋಧನೆ (ಆಡಿಟ್) ನಡೆಯುತ್ತದೆ. ಖಾನಾಪುರಕ್ಕೆ ಹುಬ್ಬಳ್ಳಿ ಡಿವಿಜನಲ್ ಆಫೀಸಿನಿಂದ ಆಡಿಟರ್ ಬಂದು ಐದಾರು ದಿನ ಆಡಿಟ್ ಮಾಡುತ್ತಿದ್ದರು. ಆಡಿಟರ್ ಬೆಳಗಿನ ಟ್ರೇನಿನಲ್ಲಿ ಬಂದು ಸಾಯಂಕಾಲದ ಟ್ರೇನಿನಲ್ಲಿ ಮರಳಿ ಹುಬ್ಬಳ್ಳಿಗೆ ಹೋಗುವುದು ವಾಡಿಕೆ. ಹಾಗಾಗಿ ಅವರ ಮಧ್ಯಾಹ್ನದ ಊಟದ ಜವಾಬ್ದಾರಿ ಮಾತ್ರ ಸ್ಥಳೀಯ ಸ್ಟೇಷನ್ ಮಾಸ್ಟರದ್ದು ಎಂಬುದು ಅಲಿಖಿತ ನಿಯಮವಾಗಿತ್ತು. 1967-68 ರಲ್ಲಿ ಖಾನಾಪುರಕ್ಕೆ ಒಬ್ಬ ಕ್ರಿಶ್ಚನ್ ಹೆಸರಿನ ಆಡಿಟರ್ ಬಂದಿದ್ದರು. ಮೊದಲಿನ ನಾಲ್ಕು ದಿನ ಸಸ್ಯಾಹಾರಿ ಊಟವನ್ನೇ ನಮ್ಮ ಮನೆಯಲ್ಲಿ ತಯಾರಿಸಿ ಕೇವಲ ನೂರು ಅಡಿ ದೂರವಿದ್ದ ಸ್ಟೇಷನ್ ಆಫೀಸಿಗೆ ಮಧ್ಯಾಹ್ನ ನನ್ನ ತಂದೆ ಮುಟ್ಟಿಸುತ್ತಿದ್ದರು. ಆದರೆ ಆಡಿಟ್‌ನ ಕೊನೆಯ ದಿನ ಆ ಆಡಿಟರ್ ಬಾಯಿಬಿಟ್ಟು ಹೇಳಿದರು- ನಿಮ್ಮ ಮಂಗಳೂರು ಕಡೆಯ ಕೋಳಿ ಪಲ್ಯ ತುಂಬಾ ರುಚಿಯಾಗಿರುತ್ತದೆ ಎಂದು. ಅದಕ್ಕಾಗಿ ನನ್ನ ತಂದೆ ನಾಟಿ ಕೋಳಿ ತರಿಸಿ ನನ್ನ ತಾಯಿಯಿಂದ ಅದರ ಪಲ್ಯ ಮಾಡಿಸಿ ಮಧ್ಯಾಹ್ನದ ಊಟಕ್ಕೆ ಆಡಿಟರನ್ನು ಸ್ಟೇಷನ್ನಿಗೆ ಅತಿ ಹತ್ತಿರದಲ್ಲಿಯೇ ಇದ್ದ ನಮ್ಮ ಕ್ವಾರ್ಟರ್ಸ್‌ಗೆ ಆಹ್ವಾನಿಸಿದರು. ಊಟ ಎಲ್ಲಾ ತಯಾರಾಗಿತ್ತು. ಅಷ್ಟರೊಳಗೇ ಅಲ್ಲಿಯ ಲಿಂಗಾಯತ ಪಾಯಿಂಟ್ಸ್‌ಮನ್ ನಮ್ಮ ಮನೆಗೆ ಹಿಂಬಾಗಿಲಿನಿಂದ ಬಂದು ನಮ್ಮ ತಾಯಿಯ ಹತ್ತಿರ "ಅಮ್ಮಾವರೇ ಆ ಆಡಿಟರ್ ಹೊಲೆಯ ಅಂತೀ" ಎಂದು ಕಿವಿಯೂದಿ ಹೋದನು. ಆಗ ನಮ್ಮ ತಾಯಿಯ ಬುಸುಬುಸು ಶುರುವಾಯಿತು. ನಮ್ಮ ತಂದೆ ಬಂದಕೂಡಲೇ "ಆಡಿಟರ್ ಈ ಜಾತಿಯವನಂತೆ. ನೀವು ಅವರನ್ನು ಮನೆಗೆ ಯಾಕೆ ಕರೆದಿದ್ದು? ಸ್ಟೇಷನ್ ಆಫೀಸಿಗೇ ಊಟ ಕೊಂಡುಹೋಗಿ ಅಲ್ಲಿಯೇ ಬಡಿಸಿ ಬಿಡಿ. ನಾನು ಮನೆಯಲ್ಲಿ ಬಡಿಸುವುದಿಲ್ಲ" ಎಂದು ನನ್ನ ತಾಯಿ ರಂಪ ಮಾಡಿದರು. ಆದರೆ ನನ್ನ ತಂದೆ ಅದಕ್ಕೆ ಕಿವಿಗೊಡದೇ ಆಡಿಟರನ್ನು ನಮ್ಮ ಮನೆಗೇ ಕರೆತಂದು ನನ್ನನ್ನು ಕರೆದು ತಮಗಿಬ್ಬರಿಗೂ ಊಟ ಬಡಿಸಲು ಹೇಳಿ ಆಡಿಟರ್‌ಗೆ ಚೆನ್ನಾಗಿ ಊಟ ಮಾಡಿಸಿ ಖುಷಿಪಟ್ಟರು (ನಾನು ಆಗ ಎಸ್‌ಎಸ್‌ಎಲ್‌ಸಿಯಲ್ಲಿದ್ದೆ).

ಆಗ ಎಲ್ಲಾ ರೈಲ್ವೇ ನೌಕರರಲ್ಲಿ ಬಾಲ್-ಬ್ಯಾಡ್ಮಿಂಟನ್ ತುಂಬಾ ಜನಪ್ರಿಯವಾಗಿತ್ತು, ನಾನು ಹಾಗೂ ನನ್ನ ತಂದೆ ತುಂಬಾ ಆಸಕ್ತಿಯಿಂದ ಅದನ್ನು ಆಡುತ್ತಿದ್ದೆವು. ಉತ್ತಮ ಬಾಲ್ ಬ್ಯಾಡ್ಮಿಂಟನ್ ಆಟಗಾರರಾಗಿದ್ದ ಆ ಆಡಿಟರ್ ಆ ದಿನ ಸಂಜೆ ನನಗೆ ಸ್ಪಿನ್‌ಶಾಟ್, ಕರ್ವಶಾಟ್, ಸ್ಮಾಶ್ ಮುಂತಾದ ಹಲವಾರು ಕಲಾತ್ಮಕ ವರಸೆಗಳನ್ನು ಕಲಿಸಿ ಹೋದರು. ಈಗ ಶಟಲ್‌ಕಾಕ್ ನಿಂದಾಗಿ ಸಂಪೂರ್ಣ ಸತ್ತುಹೋಗಿರುವ ಅದ್ಭುತ ಆಟವಾದ ನನ್ನ ಬಾಲ್ಯದ ಪ್ರಿಯ ಬಾಲ್-ಬ್ಯಾಡ್ಮಿಂಟನ್ ನೆನಪಾದಾಗ ನನಗೆ ಆ ರೈಲ್ವೇ ಆಡಿಟರ್ ನೆನಪಾಗುತ್ತಾರೆ.

'ಸ್ಟಾರ್ಮ್ ಇನ್ ದಿ ಟೀ ಕಪ್' ಎಂಬ ಇಂಗ್ಲಿಷ್ ವ್ಯಾಕ್ಯ ಎಲ್ಲರಿಗೂ ಗೊತ್ತು, ಆದರೆ ಅದರ ಮೂಲ ಭಾರತದ ಪುಣೆ ನಗರ ಎಂದು ಹೆಚ್ಚಿನವರಿಗೆ ಗೊತ್ತಿರಲಿಕ್ಕಿಲ್ಲ. ಇದೇ ಅರ್ಥದ ಬ್ರಿಟಿಷರ ಮೂಲ ಗಾದೆ 'ಟೆಂಪೆಸ್ಟ್



ಇನ್ ದಿ ಟೀ ಪಾಟ್'. ಆದರೆ ಅದು ಭಾರತದಲ್ಲಿ ಮಾತ್ರ 'ಸ್ಟಾರ್ಮ್ ಇನ್ ದಿ ಟೀ ಕಪ್' ಎಂದು ಬದಲಾಗಿದ್ದರ ಹಿಂದೆಯೂ ಭಾರತದ ಕರಾಳಜಾತಿವ್ಯವಸ್ಥೆಯ ಛಾಯೆ ಇದೆ. ಬಾಲ ಗಂಗಾಧರ ತಿಲಕರು (1856-1920) ಅತ್ಯಂತ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ನಿಜ. ಆದರೆ ಚಿತ್‌ಪಾವನ್ ಬ್ರಾಹ್ಮಣರಾಗಿದ್ದ ಅವರು ಸಂಕುಚಿತ ಜಾತಿವಾದಿಯೂ ಆಗಿದ್ದರು. 1926 ರಲ್ಲಿ ಆರ್‌ಎಸ್‌ಎಸ್ ಸ್ಥಾಪನೆಯಾದಾಗ ತಿಲಕರು ಬದುಕಿದ್ದರೆ ಅವರು ಖಂಡಿತಾ ಆರ್‌ಎಸ್‌ಎಸ್ ಸೇರುತ್ತಿದ್ದರು ಎನ್ನುವವರಿದ್ದಾರೆ.

ಕೊಲ್ಹಾಪುರದ ಶಾಹು ಮಹಾರಾಜರು ಕೆಳಜಾತಿಯವರಿಗಾಗಿ ಮಾಡಿದ ಪ್ರಗತಿಪರ ಯೋಜನೆಗಳನ್ನು ತಿಲಕರು ಹಾಳುಗೆಡುವಲು ಮಾಡಿದ ಕುತಂತ್ರಗಳಿಂದಾಗಿ ಅವರಿಗೆ "ಬಾಳ ಗಂಡಾಂತರ ಟಿಳಕ" ಎಂದು ಪ್ರಗತಿಪರ ಕನ್ನಡಿಗರು ಕರೆಯುವುದು ನಿಜ. ಜಾತಿತಂತ್ರಗಳಿಗೆ ಹೆಸರಾದ ತಿಲಕರ ವಿರುದ್ಧವೇ ಒಂದು ಕುತಂತ್ರ ನಡೆದು ಅವರನ್ನು ಅವರ ಜಾತಿಯವರೇ ಒಬ್ಬರು ಧರ್ಮ ಸಂಕಟಕ್ಕೆ ಸಿಕ್ಕಿಸಿದ್ದ ಘಟನೆ ತುಂಬಾ ಸಾರಸ್ಯಕರವಾಗಿದೆ. ತಿಲಕರ 'ಕೇಸರಿ' ಎಂಬ ಪತ್ರಿಕೆಯಲ್ಲಿ ಗೋಪಾಲ ಭಟ್ ಎಂಬಾತ ಕೆಲಸಕ್ಕಿದ್ದ. ಯಾವುದೋ ಕ್ಷುಲ್ಲಕ ಕಾರಣಕ್ಕಾಗಿ ತಿಲಕರು ಅವನನ್ನು ಪತ್ರಿಕೆಯ ಕೆಲಸದಿಂದ ತೆಗೆದು ಹಾಕಿದರು. ಅದರ ಸೇಡು ತೀರಿಸಲೆಂದು ಆ ಗೋಪಾಲ ಭಟ್ ಹೊಂಚು ಹಾಕುತ್ತಿದ್ದ. ಆಗ ಪುಣೆಯಲ್ಲಿ ಸಾರ್ವಜನಿಕ ಚಹಾದಂಗಡಿಗಳು ಇರಲೇ ಇಲ್ಲ. ಹಾಗಾಗಿ ಆಗಿನ ಬ್ರಾಹ್ಮಣರು ವಾರಕ್ಕೊಮ್ಮೆ ಯಾವುದಾದರೂ ತಮ್ಮದೇ ಜಾತಿಯವನ ಮನೆಯಲ್ಲಿ ಸೇರಿ ಚಹಾ ಪಾರ್ಟಿ ಮಾಡಿ ಆನಂದಿಸುತ್ತಿದ್ದರು. ಆಗ ಬ್ರಾಹ್ಮಣ ಹೆಂಗಸರು ಚಹಾ-ಕಾಫಿ ಕುಡಿಯುವುದೂ ನಿಷಿದ್ಧವಾಗಿತ್ತು, ಚಹಾವನ್ನು ಎಲ್ಲಾ ಮನೆಯಲ್ಲಿ ಗಂಡಸರೇ ತಯಾರಿಸುತ್ತಿದುದು.

ಗೋಪಾಲ ಭಟ್ಟ ಒಂದು ದಿನ ತಿಲಕರನ್ನು ಮತ್ತು ಅದೇ ಜಾತಿಯ ಅವರ ಕೆಲವು ಮಿತ್ರರನ್ನು ತನ್ನ ಮನೆಗೆ ಚಹಾ ಪಾರ್ಟಿಗೆ ಕರೆದನು. ಅವನ ಮನೆಯಲ್ಲಿ ಎಲ್ಲರೂ ಚಹಾ ಕುಡಿದಾದ ಮೇಲೆ ಇಷ್ಟು ರುಚಿಯಾದ ಚಹಾ ನಾವೆಂದೂ ಕುಡಿದಿರಲಿಲ್ಲ ಇದನ್ನು ನೀನೇ ಮಾಡಿದ್ದೋ ಎಂದು ತಿಲಕರು ವಿಚಾರಿಸಿದರು. ಅದಕ್ಕೆ ಗೋಪಾಲ "ಇದು ನಾನು ಮಾಡಿದ್ದಲ್ಲ, ನನ್ನ ಕೆಲಸದವನು ಮಾಡಿದ್ದು. ಅವನು ಚಹಾ ತಯಾರಿಸುವುದರಲ್ಲಿ ತುಂಬಾ ಪ್ರಚಂಡ" ಎಂದು ಹೇಳಿ ತನ್ನ ಕೆಳಜಾತಿಯ ಕೆಲಸದವನನ್ನು ತೋರಿಸಿದನು. ಇದನ್ನು ಕೇಳಿ ತಿಲಕ ಮತ್ತು ಗೆಳೆಯರಿಗೆ ಶಾಕ್ ಆಯಿತಂತೆ. ಆದರೂ ಅವರು ಗೋಪಾಲ ಭಟ್ಟನನ್ನು ಗದರಿಸಿ ಯಾರಿಗೂ ಈ ವಿಷಯ ಹೇಳಬಾರದು ಎಂದು ತಾಕೀತು ಮಾಡಿಹೋದರು. ಆದರೆ ಸೇಡಿಗಾಗಿ ಕಾದಿದ್ದ ಗೋಪಾಲ ಭಟ್ ಈ ವಿಷಯವನ್ನು ವಿವರವಾಗಿ ಬರೆದು ಬೇರೊಂದು ಮರಾಠಿ ಪತ್ರಿಕೆಯಲ್ಲಿ ಪ್ರಕಟಿಸಿದನು. ಇದರಿಂದ ಪುಣೆ-ಮುಂಬಯಿಯ ಬ್ರಾಹ್ಮಣ ಸಮಾಜದಲ್ಲಿ ಕೋಲಾಹಲವೆದ್ದು ಈ ಕ್ಷುಲ್ಲಕ ವಿಷಯದ ಬಗ್ಗೆ ಪುಣೆ-ಮುಂಬೈಯ ಮರಾಠಿ ಮತ್ತು ಇಂಗ್ಲಿಷ್ ಪತ್ರಿಕೆಯಲ್ಲಿ ಉದ್ದುದ್ದ ವಾದ-ವಿವಾದಗಳು ತಿಂಗಳುಗಟ್ಟಲೆ ನಡೆದವು. ಇದನ್ನು ಗಮನಿಸಿದ ಬ್ರಿಟಿಷರು ಭಾರತದಲ್ಲಿ ಕೆಳಜಾತಿಯವನು ಚಹಾ ಕಪ್ ಮುಟ್ಟಿದ ಮಾತ್ರಕ್ಕೆ ಮೇಲ್ಜಾತಿಯವರು ಇಷ್ಟೊಂದು ರಂಪಾಟಕ್ಕಿಳಿದುದನ್ನು ಕಂಡು ಆ ಚಹಾ ಕಪ್ಪನ್ನೇ ಕೇಂದ್ರೀಕರಿಸಿ ಕ್ಷುಲ್ಲಕ ವಿಷಯಗಳನ್ನು ವಿನಾಕಾರಣ ದೊಡ್ಡದು ಮಾಡಿ ರಂಪಾಟ ಮಾಡುವ ಪ್ರಸಂಗಕ್ಕೆ 'ಸ್ಟಾರ್ಮ್ ಇನ್ ದ ಟೀ ಕಪ್' ಎಂಬ ಗಾದೆ ಹೆಣೆದರು. ನಂತರ ಇದು ಆಕ್ಸ್‌ಫರ್ಡ್ ನಿಘಂಟಿನಲ್ಲೂ ಸೇರಿಕೊಂಡಿತು. ಮೋದಿಯವರ ಚಹಾಪುರಾಣ ಕೇಳಿದಾಗೆಲ್ಲಾ ಮೇಲಿನ ಸಂಗತಿಗಳು ನನಗೆ ನೆನಪಾಗುತ್ತಲೇ ಇರುತ್ತವೆ.

■ ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಸದನದಲ್ಲಿ ಅಮರ ಹುತಾತ್ಮ

ನಮ್ಮ ಪ್ರಜಾಪ್ರಭುತ್ವದ ಮೇಲೆ ನಾಲ್ಕೂ ದಿಕ್ಕಿನಿಂದ ದಾಳಿ ನಡೆಯುತ್ತಿದೆ. ಆದರೆ ನಮ್ಮ ಪ್ರತಿನಿಧಿಗಳು ಈ ದಾಳಿಗಳನ್ನು ವಿಫಲಗೊಳಿಸುತ್ತಿದ್ದಾರೆ. ಬಹುಶಃ ನಮ್ಮ ಪ್ರತಿನಿಧಿಗಳಿಗೆ ತಮ್ಮ ಸಜ್ಜನಿಕೆ ಮತ್ತು ಸಾಧುಸ್ವಭಾವದಿಂದಾಗಿ ಮೊದಲಿಗೆ ದಾಳಿಗಳ ಸುಳಿವೇ ಸಿಗುವುದಿಲ್ಲ. ಒಂದೊಮ್ಮೆ ಅವರಿಗೆ ಈ ವಿಷಯವಾಗಿ ಅರಿವಾಗುತ್ತಲೇ ಜೀವ ಪಣಕ್ಕಿಟ್ಟು ಪ್ರಜಾಪ್ರಭುತ್ವವನ್ನು ರಕ್ಷಿಸುತ್ತಾರೆ. ನೋವು ಹಾಗೂ ಖೇದದ ಸಂಗತಿಯೇನೆಂದರೆ ಅವರು ಪ್ರಜಾಪ್ರಭುತ್ವವನ್ನು ಪ್ರಾಣ ಪಣಕ್ಕಿಟ್ಟು ರಕ್ಷಿಸಿದ ಪ್ರಯತ್ನಗಳನ್ನು ಸ್ವತಃ ಅವರೇ ಪ್ರಶಂಸಿಸಿಕೊಳ್ಳಬೇಕಾಗುತ್ತದೆ. ಹಾಗೆಲ್ಲ ಇದು ಜನತೆಯ ಕೆಲಸ. ಆದರೆ ಜನತೆ ಇತ್ತೀಚೆಗೆ ಕ್ರಿಕೆಟ್ ಪಂದ್ಯಗಳು, ಅರ್ಥಹೀನ ಟಿ.ವಿ ಕಾರ್ಯಕ್ರಮಗಳು, ಶೇರ್ ಮಾರ್ಕೆಟ್‌ನ ಏರಿಳಿತಗಳು, ಬಂಗಾರ ಮಾರುಕಟ್ಟೆ, ಆಸ್ತಿಯ ಬೆಲೆಗಳಲ್ಲಿನ ಬದಲಾವಣೆಗಳು, ದುಡಿಯದೇ ಕೋಟ್ಯಾಧೀಶರಾಗುವ ಕನಸುಗಳನ್ನೇ ಕಾಣುವುದರಲ್ಲಿ ತಲ್ಲೀನವಾಗಿದೆ. ಇರಲಿ, ನಮ್ಮ ಜನಪ್ರತಿನಿಧಿಗಳು ಯಾವುದೇ ವಿಷಯವಾಗಿ ಬೇಸರಪಟ್ಟುಕೊಳ್ಳುವುದಿಲ್ಲ. ಜನರನ್ನು ಬದಲಾಯಿಸಲಾಗುವುದಿಲ್ಲ ಎನ್ನುವುದು ಅವರಿಗೆ ಗೊತ್ತು. ಬೇರೆ ಯಾವುದೇ ದೇಶಕ್ಕೆ ಹೋಗಿ ಅವರು ಜನಪ್ರತಿನಿಧಿಗಳಾಗಲಾರರು ಎನ್ನುವುದೂ ಗೊತ್ತು.

ನಮ್ಮ ಪ್ರಜಾಪ್ರಭುತ್ವದ ಮೇಲೆ ಇತ್ತೀಚೆಗೆ ಒಂದು ಗಬ್ಬು ವಾಸನೆ ದಾಳಿ ಮಾಡಿದೆ. ನಮ್ಮ ಸೇವಾನಿರತ, ಸಮರ್ಪಿತ ಹಾಗೂ ಪ್ರತಿಭಾವಂತ ಪ್ರತಿನಿಧಿಗಳು ಸದನದ ಕಲಾಪಗಳಿಗೆ ಅಡ್ಡಿ ಉಂಟುಮಾಡಿ ವರ್ಷದಲ್ಲಿ ಕನಿಷ್ಠ ಇನ್ನೂರು ದಿನಗಳ ಈ ಕಲಾಪವನ್ನು ಸೀಮಿತಗೊಳಿಸಿ ಕನಿಷ್ಠ ನೂರು ದಿನಗಳಿಗೆ ತಂದು ನಿಲ್ಲಿಸಬಯಸುತ್ತಾರೆ. ಇತ್ತೀಚೆಗೆ ಸದನದ ಕಲಾಪಗಳು ಬಲು ಸರಾಗವಾಗಿ ನಡೆಯುತ್ತಿತ್ತು. ಅಷ್ಟರಲ್ಲಿ ಗಬ್ಬುವಾಸನೆ ಹಠಾತ್ತನೆ ಸದನದ ಮೇಲೆ ದಾಳಿ ಮಾಡಿಬಿಟ್ಟಿತು. ದಾಳಿ ಮಾಡಿದವರು ಬೇರೆ ಯಾರಾದರೂ ಆಗಿದ್ದರೆ ನಮ್ಮ ಪ್ರತಿನಿಧಿಗಳು ಎದೆ ಸೆಟೆಸಿ ನಿಲ್ಲುತ್ತಿದ್ದರು. ಆದರೆ ದಾಳಿಕೋರ ಅದೃಶ್ಯವಾಗಿದ್ದ. ಹೀಗಾಗಿ ನಮ್ಮ ಪ್ರತಿನಿಧಿಗಳು ಅಸಹಾಯಕರಾಗಿಬಿಟ್ಟರು. ಆದರೆ ಈ ದುರ್ವಾಸನೆ ಕುರಿತು ಚರ್ಚೆ ನಡೆಯಿತು. ಒಬ್ಬರು ಇದು ಗ್ಯಾಸಿನ ದುರ್ವಾಸನೆ ಎಂದರು. ಆಗ ಇದು ಯಾವ ಕಂಪೆನಿಯ ಗ್ಯಾಸ್. ಸ್ವಲ್ಪ ಸ್ಪಷ್ಟವಾಗಿ ಕಂಪೆನಿ ಹೆಸರನ್ನು ಬಹಿರಂಗೊಳಿಸಬೇಕು ಎಂದು ಕೇಳಲಾಯಿತು. ದುರ್ವಾಸನೆಯಿಂದ ಕಂಪೆನಿ ಹೆಸರನ್ನು ಹೇಳಿಬಿಡುವುದು ಸುಲಭವಿತ್ತು, ಆದರೆ ಸದನ ಮೌನ ತಾಳಿತು. ದುರ್ವಾಸನೆ ಯಾವಾಗಿಂದ ಬರಲಾರಂಭಿಸಿತು ಎಂದು ಚರ್ಚೆ ಶುರುವಾಯಿತು. ಜನಪ್ರತಿನಿಧಿಯಾಗಿ ತಾನು ಆಯ್ಕೆಯಾಗಿ ಬರಲಾರಂಭಿಸುತ್ತಲೇ ಈ ದುರ್ವಾಸನೆ ಬರತೊಡಗಿದೆಯೆಂದು ಒಬ್ಬ ಸದಸ್ಯರು ಹೇಳಿದರು. ಈ ಘಟ್ಟದಲ್ಲಿ ಇದಕ್ಕೂ ಮೊದಲು ಅವರು ಈ ವಿಷಯವಾಗಿ ಏಕೆ ದೂರಲಿಲ್ಲವೆಂದು ಕೇಳಲಾಯಿತು. ತಾನು ಕೇವಲ ಎರಡು ವರ್ಷಗಳ ಹಿಂದೆಯಷ್ಟೇ ಆಯ್ಕೆಯಾಗಿ ಬಂದಿರುವುದಾಗಿ ಆ ಪ್ರತಿನಿಧಿ ಹೇಳಿದರು. ಯಾವುದನ್ನು ಅವರು ದುರ್ಗಂಧವೆಂದು ಭಾವಿಸಿದ್ದರೋ ಶತಪ್ರಯತ್ನ ಮಾಡಿ ಅದು ಸುಗಂಧ ಎನ್ನುವ ಮಾತನ್ನು ಸದನದಲ್ಲಿ ಹಬ್ಬುವಂತೆ ಮಾಡಿದ್ದರು ಎಂದು ಅವರು ತಿಳಿದಿದ್ದರು. ಹೊಸ ಸದಸ್ಯರ ಹೇಳಿಕೆಯಿಂದ ಇತರ ಕೆಲವು ಸದಸ್ಯರು ಅಸಮಾಧಾನಗೊಂಡರು. ಅವರು ಹೊಸ ಸದಸ್ಯನ ಮೇಲೆ ಜಾತಿವಾದಿಯೆನ್ನುವ ಆರೋಪ ಹೊರಿಸಿದರು. ಆಗ ಚರ್ಚೆ ಜಾತಿಯ ಆಧಾರದ ಮೇಲೆ ಧ್ರುವೀಕರಣಗೊಂಡಿತು. ಒಂದು ವಿಶಿಷ್ಟ ಜಾತಿಯತ್ತ ಎಲ್ಲರ ಗಮನ ಕೇಂದ್ರೀಕೃತವಾಗತೊಡಗಿತು. ಚರ್ಚೆಯನ್ನು ಸರಿದಾರಿಗೆ ತರಲೆತ್ನಿಸಿದ ಅನುಭವಿ ಸದಸ್ಯರೊಬ್ಬರು ಕಳೆದ ಇಪ್ಪತ್ತೈದು ವರ್ಷಗಳಿಂದ ಈ ದುರ್ಗಂಧ ತಮ್ಮ ಗಮನಕ್ಕೆ ಬಂದಿದೆ ಎಂದು ಹೇಳಿದರು. ಈ ವಿಷಯ ಹಿಂದೆ ಹಿಂದೆ ಎಳೆಯಲ್ಪಟ್ಟು ಬ್ರಿಟಿಷರು ನಮ್ಮ ದೇಶವನ್ನು ಎಂದು ಸ್ವತಂತ್ರಗೊಳಿಸಿ ಹೋದರೋ ಅಂದಿನಿಂದಲೇ ಸದನದಲ್ಲಿ ಈ ದುರ್ವಾಸನೆ ಹಬ್ಬತೊಡಗಿತು; ಇದು ಬ್ರಿಟಿಷರು ಬಿಟ್ಟುಹೋದ ದುರ್ಗಂಧ ಎನ್ನುವಷ್ಟರಮಟ್ಟಿಗೆ ಬಂದು ನಿಂತಿತು. ಈ ಅಭಿಪ್ರಾಯವನ್ನು ಇಡೀ ಸದನ ಸಮರ್ಥಿಸಿತು. ವಿದೇಶಾಂಗ ಇಲಾಖೆ ಈ ವಿಷಯವಾಗಿ ಕಟ್ಟುನಿಟ್ಟಾದ ಕ್ರಮ ಜರುಗಿಸಬೇಕು ಹಾಗೂ ಈ ಹಗರಣದ ಸತ್ಯಾಸತ್ಯತೆ ಏನು ಎಂದು ಬ್ರಿಟಿಷ್ ಸರ್ಕಾರದಿಂದ ನಿರ್ಭೀತಿಯಿಂದ ಸ್ಪಷ್ಟನೆ ಕೇಳಬೇಕೆಂದು ಅಭಿಪ್ರಾಯಪಟ್ಟಿತು. ದುರ್ಗಂಧದಲ್ಲಿ ಬ್ರಿಟಿಷರ ಕೈವಾಡವಿದೆಯೆನ್ನುವ ಅಂಶ ಕೆಲವು ಸದಸ್ಯರಿಗೆ ಪಿತ್ಥ ನೆತ್ತಿಗೇರುವಂತೆ ಮಾಡಿತು. ಅವರು ಅದೆಷ್ಟು ಕೆರಳಿದರೆಂದರೆ ಬ್ರಿಟಿಷರು ಬಿಟ್ಟುಹೋದ ಎಲ್ಲದರಿಂದಲೂ ದುರ್ಗಂಧ ಬರುತ್ತಿದೆ ಎಂದರು. ರೈಲು ಹಳಿಗಳು ಗಬ್ಬೆದ್ದಿವೆ. ಗೇಟ್‌ವೇ ಆಫ್ ಇಂಡಿಯಾದಿಂದ ಹಿಡಿದು ಇಂಡಿಯಾ ಗೇಟ್‌ವರೆಗೆ ದುರ್ಗಂಧವೇ ದುರ್ಗಂಧ. ನೌಕರಶಾಹಿಯಿಂದ ದುರ್ಗಂಧ ಬರುತ್ತಿದೆ. ಐ.ಪಿ.ಸಿಯಿಂದ ಕೊಳೆತವಾಸನೆ ಬರುತ್ತಿದೆ. ಶಿಕ್ಷಣ ವ್ಯವಸ್ಥೆಯಂತೂ ಗಬ್ಬೆದ್ದ ಚರಂಡಿಯಾಗಿ ಬಿಟ್ಟಿದೆ. ಸದನದ ಜವಾಬ್ದಾರಿಯುತ ಸದಸ್ಯರು ಚರ್ಚೆ ಹೀಗೆ ತಿರುವು ಪಡೆಯುವುದನ್ನು ಗಮನಿಸಿ, "ಅದು ಇರಲಿ. ಈಗ ಸದನದಲ್ಲಿನ ದುರ್ವಾಸನೆಗೆ ಯಾರು ಹೊಣೆಗಾರರೋ ಅವರಿಂದ ಸ್ಪಷ್ಟನೆ ಕೇಳಲೇಬೇಕು" ಎಂದು ಆಗ್ರಹಿಸಿದರು. ಈ ಮಾತು ಕೇಳುತ್ತಲೇ ಮೇಜುಗಳ ಸದ್ದು ಕೇಳಿ ಬರತೊಡಗಿತು.

ಈ ಚರ್ಚೆಗೆ ಮೊದಲೇ ಕೆಲವು ಪ್ರಭಾವಶಾಲಿ ಸದಸ್ಯರು ಸದನದ ಕ್ಯಾಂಟೀನಿನಲ್ಲಿ ಅಗ್ಗದ ದರದಲ್ಲಿ ಲಭ್ಯವಾಗುತ್ತಿದ್ದ ಬಿರಿಯಾನಿ ಸವಿಯಲು ಹೋಗಿಬಿಟ್ಟಿದ್ದರು. ಅವರು ವಾಪಸು ಬಂದಮೇಲೆ ಈ ಚರ್ಚೆ ನಡೆಯುತ್ತಿದ್ದುದನ್ನು ಗಮನಿಸಿದರು. ಅವರು ತುಂಬ ಅಸಮಾಧಾನಗೊಂಡರು. ಒಬ್ಬ ಸದಸ್ಯರು ಅಂದರು "ನಿಮಗೆ ನಾಚಿಕೆ ಬರುವುದಿಲ್ಲವೆ? ನೀವು ಇದನ್ನು ದುರ್ಗಂಧ ಎನ್ನುತ್ತಿದ್ದೀರಲ್ಲ?"

"ಮತ್ತೇನಿದು?"

"ಇದುವೇ ಪ್ರಜಾಪ್ರಭುತ್ವದ ಪರಿಮಳ."

"ಅದು ಹೇಗೆ?"

"ಅರೆ, ನಿಮಗೆ ನಾಚಿಕೆ ಎನಿಸುವುದಿಲ್ಲವೆ? [illegible]



ಸತ್ತು ಹೋಗಬೇಕು ಅಷ್ಟೇ. ನಾವು ಎಷ್ಟೆಲ್ಲ ಬಲಿದಾನ ಮಾಡಿ ಪ್ರಜಾಪ್ರಭುತ್ವ ಪಡೆದಿದ್ದೇವೆ ಎನ್ನುವುದು ನಿಮಗೂ ಗೊತ್ತು. ಅದೆಷ್ಟು ಹುತಾತ್ಮರ ರಕ್ತ ಹರಿದಿದೆ! ಅದೆಷ್ಟು ಕುಟುಂಬಗಳು ಬೀದಿಪಾಲಾದವು! ಎಷ್ಟು ಜನ ಕರಿನೀರು ಶಿಕ್ಷೆಗೆ ಗುರಿಯಾದರು! ಎಷ್ಟು ಜನ ಗಲ್ಲಿಗೇರಿದರು! ಎಷ್ಟು ಜನ ಸೋದರಿಯರ ಕುಂಕುಮ ಅಳಿಸಿ ಹೋಯಿತು! ಅದೆಷ್ಟು ತಾಯಂದಿರ ಮಡಿಲು ಬರಿದಾಯಿತು! ಇಷ್ಟೆಲ್ಲ ಆದ ಮೇಲೆ ನಮಗೆ ಪ್ರಜಾಪ್ರಭುತ್ವ ಸಿಕ್ಕಿದ್ದು. ನಿಮ್ಮ ಇಂತಹ ಮಂಗಾಟದಿಂದಾಗಿ ಸ್ವರ್ಗದಲ್ಲಿ ರಾಷ್ಟ್ರಪಿತ ಅದೆಷ್ಟು ಪರಿತಪಿಸುತ್ತಿದ್ದಾರೋ! ಸುಭಾಷಚಂದ್ರ ಅದೆಷ್ಟು ನೊಂದಿದ್ದಾರೋ! ಅಮರ ಹುತಾತ್ಮನ ಹೃದಯ ಚೂರುಚೂರಾಗಿರಬಹುದು! ಅವರ ಸಮ್ಮುಖದಲ್ಲಿ... ಸಮ್ಮುಖದಲ್ಲಿ ಹೀಗೆಲ್ಲ..."

ಏಕಾಏಕಿ ಎಲ್ಲ ಸದಸ್ಯರ ಕಣ್ಣು ಒಂದೇ ಕಡೆ ತಿರುಗಿದವು. ಮೆಲ್ಲಮೆಲ್ಲನೆ ಎಚ್ಚರಿಕೆಯಿಂದ ಹೆಜ್ಜೆ ಹಾಕುತ್ತ ಒಬ್ಬ ಯುವಕ ಸದನವನ್ನು ಪ್ರವೇಶಿಸತೊಡಗಿದ್ದ. ಅವನ ನೀಳವಾದ ಮುಖ ತೇಜೋಮಯವಾಗಿತ್ತು. ಸಂವೇದನಾಶೀಲ ಹಾಗೂ ಗಂಭೀರವಿಚಾರಗಳಿಂದ ತುಂಬಿದ್ದ ಕಣ್ಣುಗಳಿಂದ ಅವನು ಎಲ್ಲರನ್ನು ದಿಟ್ಟಿಸತೊಡಗಿದ್ದ. ಅವನು ಫೆಲ್ಟ್ ಹ್ಯಾಟ್ ಹಾಕಿಕೊಂಡಿದ್ದ. ಮುಖದಲ್ಲಿ ಸುಂದರ ಮೀಸೆ ಸೊಬಗು. ಯುವಕ ಮೆಲ್ಲಮೆಲ್ಲನೆ ಮುನ್ನಡೆಯತೊಡಗಿದ್ದ. ಯುವಕನ ಗತ್ತು ಗಾಂಭೀರ್ಯದೆದುರು ಎಲ್ಲರೂ ದಿಗ್ಮೂಢರಾಗಿಬಿಟ್ಟರು. ತುಂಬ ಧೈರ್ಯದಿಂದ ಒಬ್ಬ ಹಿರಿಯ ಸದಸ್ಯರು "ತಾವು ಯಾರು?" ಎಂದು ಕೇಳಿದರು.

ಯುವಕ ಬಿದ್ದು ಬಿದ್ದು ನಕ್ಕ. ಅವನ ನಗೆಯ ಸದ್ದು ತುಂಬ ಹೊತ್ತು ಸದನದಲ್ಲಿ ಪ್ರತಿಧ್ವನಿಸಿತು. ಕೆಲಕ್ಷಣದ ನಂತರ ಅವನು "ನಾನು ಯಾರೆಂದು ಹೇಳುವುದು ಅವಶ್ಯವೆ?" ಎಂದ.

ಈ ಬಾರಿ ಯುವಕ ಮತ್ತೆ ಗಹಗಹಿಸಿ ಜೋರಾಗಿ ನಕ್ಕ. ಆದರೆ ಅದು ಭಯಂಕರ ಅಟ್ಟಹಾಸವಾಗಿತ್ತು. ಆಯ್ಕೆಯಾಗಿ ಬಂದಿದ್ದ ಸದಸ್ಯರ ಜಂಘಾಬಲ ಉಡುಗಿದಂತಾಯಿತು. ಸದನದ ಗೋಡೆಗಳು ಸಹ ಗಡಗಡ ನಡುಗಿದವು. ಯುವಕನ ಬೆಂಕಿ ಕಾರುತ್ತಿದ್ದ ಕಣ್ಣುಗಳ ಮುಖಾಮುಖಿ ಮಾಡುವಷ್ಟು ಧೈರ್ಯ ಯಾರಲ್ಲೂ ಇರಲಿಲ್ಲ.

ಸ್ವಲ್ಪ ತಡೆದು ಒಬ್ಬ ಸದಸ್ಯರು "ನಿಮ್ಮ ಧರ್ಮ? ನಿಮ್ಮ ಜಾತಿ?" ಎಂದು ಕೇಳಿದರು.

ಹೇಸಿಕೆ ಬಂದವಂತೆ ಯುವಕ ಹೇಳಿದ "ನನಗೆ ಯಾವ ಧರ್ಮವೂ ಇಲ್ಲ, ಜಾತಿಯೂ ಇಲ್ಲ."

ಇನ್ನೊಬ್ಬ ಸದಸ್ಯರು "ಹಾಗಾದರೆ ಶ್ರೀಮಾನ್, ಇಂದು ನಿಮಗೆ ಯಾವುದೇ ಚುನಾವಣಾ ಕ್ಷೇತ್ರದಿಂದ ಸಾವಿರ ವೋಟ್ ಸಹ ಸಿಗಲಾರವು" ಎಂದರು.

"ನಾನು ಇಲ್ಲಿ ಮತ ಗಳಿಸಲು ಬಂದಿಲ್ಲ" ಎಂದು ಆತ್ಮವಿಶ್ವಾಸದಿಂದ ಅವನು ಹೇಳಿದ.

"ಹಾಗೋ ಶ್ರೀಮಾನ್... ಇದು ಪ್ರಜಾಪ್ರಭುತ್ವದ ಮಂದಿರ... ಇಲ್ಲಿ..."

ಒಬ್ಬ ಹಿರಿಯ ಸದಸ್ಯರು ಮಾತಿಗೆ ಅಡ್ಡ ಬಂದು "ನಾನು ಇವರನ್ನು ಗುರುತಿಸಿದೆ. ಇವರು ಅಮರ ಹುತಾತ್ಮ" ಎಂದರು.

"ಓಹ್! ಹೌದೆ" ಎನ್ನುವ ಮಾತು ಸದನದಲ್ಲೆಲ್ಲ ಪ್ರತಿಧ್ವನಿಸಿತು. ಸದಸ್ಯರೆಲ್ಲ ಕಕ್ಕಾಬಿಕ್ಕಿಯಾದರು.

"ನಿಮ್ಮ ಈ ಕೈಯಲ್ಲಿ ಏನಿದೆ ಅಮರ ಹುತಾತ್ಮ ಅವರೆ?"

"ಇದು ಬಾಂಬ್."

"ಬಾಂಬ್?"

"ಇದನ್ನು ಇಲ್ಲೇಕೆ ತಂದಿರಿ?"

"ಇದನ್ನು ಇಲ್ಲಿ ಎಸೆಯಲು ತಂದಿದ್ದೇನೆ."

"ಇಲ್ಲಿ ಎಸೆಯಲೆಂದೆ? ಅದೇಕೆ ಅಮರ ಹುತಾತ್ಮ ಅವರೆ?"

"ಇಲ್ಲಿ ದುರ್ಗಂಧ ಬರುತ್ತಿದೆಯಲ್ಲವೆ?"

"ಹೌದು. ಬರ್ತಿದೆ."

"ದುರ್ಗಂಧಕ್ಕೆ ಇದುವೇ ಪರಿಹಾರ."

"ಆದರೆ ಈ ಬಾಂಬ್..."

ಸದನವು ಧಡಂ ಎಂಬ ಸದ್ದಿನಿಂದಾಗಿ ಕಂಪಿಸಿಬಿಟ್ಟಿತು. ನಾಲ್ಕೂ ದಿಕ್ಕಿ... ಹೊಗೆಯೋ ಹೊಗೆ ಆವರಿಸಿತು. ಜನಪ್ರತಿನಿಧಿಗಳು ಮೇಜುಗಳ ಕೆಳ... ಅವಿತುಕೊಂಡರು. ಹೊಗೆ ಮೋಡಗಳು ಕರಗಿಹೋದ ಮೇಲೆ ಆ ... ಕೆಲವರು ಮೇಜಿನ ಕೆಳಗೆ ತಲೆ ಅಲ್ಲಾಡಿಸಿದರು.

ಒಬ್ಬ ಅಂದ "ಅಮರ ಹುತಾತ್ಮ ಹೊರಟುಹೋದರೆ?"

"ನೀವು ಸ್ವಲ್ಪ ನೋಡಿರಿ."

"ಇಲ್ಲ, ನೀವೇ ನೋಡಿರಿ."

"ಅವರೇನೋ ಹೊರಟುಹೋದರು. ಆದರೆ ಮತ್ತೆ ಯಾವಾಗ ಮರ... ಬರುವರೋ ಗೊತ್ತಿಲ್ಲ."

"ಹೌದಲ್ಲ, ಗೆಳೆಯ. ಇದು ಸಾಧ್ಯ."

"ಹಾಗಾದರೆ ಮೇಜಿನ ಕೆಳಗೇ ಇದ್ದು ಬಿಡೋಣ."

"ಮತ್ತೆ ಸದನದ ಕಲಾಪ?"

"ನಡೆದೇ ನಡೆಯುವುದು. ಕಾರಣ ಎಲ್ಲರೂ ಮೇಜಿನ ಕೆಳಗೇ ಇದ್ದೀವಲ್ಲ..."

* * * *

ಒಂದು ದಿನ ಮತ್ತೆ ಅಮರ ಹುತಾತ್ಮ ಸದನದಲ್ಲಿ ಹಾಜರಾದರು... ದ್ವಾರದಲ್ಲಿ ನಿಂತಿದ್ದ ರೈತರ ಮಕ್ಕಳು, ರಕ್ಷಣಾ ಸಿಬ್ಬಂದಿ ಅವರನ್ನು ಗುರುತಿಸಿದರು... ಗೌರವದಿಂದ ಅವರಿಗೆ ಸೆಲ್ಯೂಟ್ ಹೊಡೆದರು, ಒಳಗೆ ಹೋಗಬಹುದೆಂದು... ತಲೆ ಅಲ್ಲಾಡಿಸಿದರು. ಸದನದೊಳಗಿನ ಜನರಿಗೆ ಅಮರ ಹುತಾತ್ಮರ ಗುರುತು... ಸಿಗಲಿಲ್ಲ.

ಒಬ್ಬ ಸದಸ್ಯರು "ನೀವು ಎಲ್ಲಿಂದ ಎಲೆಕ್ಷನ್ ಗೆದ್ದು ಬಂದಿದ್ದೀರಿ?" ಎಂದು ಕೇಳಿದ.

ಇನ್ನೊಬ್ಬರು ಕೇಳಿದರು "ನಿಮ್ಮ ಧರ್ಮ ಯಾವುದು?"

ಮೂರನೆಯವರು ಕೇಳಿದರು "ನಿಮ್ಮ ಜಾತಿ ಯಾವುದು?"

ನಾಲ್ಕನೆಯವರು ಕೇಳಿದರು "ನಿಮ್ಮ ನಾಯಕರು ಯಾರು?"

"ನೀವು ನನ್ನನ್ನು ಗುರುತಿಸಲಿಲ್ಲ, ಅಲ್ಲವೆ?" ಎಂದು ಅಮರ ಹುತಾತ್ಮ... ಕೇಳಿದರು.

ಇಡೀ ಸದನ ಅವರನ್ನು ದಿಟ್ಟಿಸಿತು. ಎತ್ತರದ ನಿಲುವು. ಸಾಮಾ... ಮೈಕಟ್ಟು. ತಲೆ ಮೇಲೆ ಫ್ಲ್ಯಾಟ್ ಹ್ಯಾಟ್. ತೆಳುವಾದ ಚೂಪು ಮೀಸೆ. ಕಣ್ಣು... ಅಪಾರ ತೇಜಸ್ಸು. ಮುಖದಲ್ಲಿ ಹಿಮಾಲಯದಂತಹ ಆತ್ಮವಿಶ್ವಾಸ.

"ನಮ್ಮಲ್ಲಿ ಯಾರಿಗೂ ನಿಮ್ಮ ಗುರುತು ಸಿಗಲಿಲ್ಲ" ಎಂದು ಒಬ್ಬ... ಸದಸ್ಯರು ಅಂದರು.

ಅದಕ್ಕೆ ಅಮರ ಹುತಾತ್ಮ ಕೇಳಿದರು "ನೀವು ಯಾರೂ ಇತಿಹಾಸ... ಪುಸ್ತಕಗಳಲ್ಲಿ ನನ್ನ ಬಗ್ಗೆ ಓದಿಲ್ಲವೆ?"

ಸದನ ಉತ್ತರಿಸಿತು: "ನಾವು ಇತಿಹಾಸದ ಪುಸ್ತಕಗಳನ್ನು ಬದಲಾಯಿಸಿದ್ದೇವೆ... ಈಗ ಶಿಫಾರಸು ಮಾಡಿರುವ ಪುಸ್ತಕಗಳಲ್ಲಿ ನಿಮ್ಮ ಬಗ್ಗೆ ಏನೂ ಬರೆದಿಲ್ಲ..."

ಅಮರ ಹುತಾತ್ಮ ಅಂದರು "ನನ್ನ 23ನೇ ವರ್ಷದ ವಯಸ್ಸಿನ... ನಾನು ದೇಶವನ್ನು ಸ್ವತಂತ್ರಗೊಳಿಸಲು ಗಲ್ಲಿಗೇರಿದ್ದೆ."

"ನೀವು ದೇಶವನ್ನು ಪ್ರೀತಿಸುವಿರಾ?" ಸದನ ಕೇಳಿತು.

"ದೇಶವನ್ನು ಸ್ವತಂತ್ರಗೊಳಿಸಲು ನಾನು ಸದನದಲ್ಲಿ ಬಾಂಬ್ ಎಸೆದಿದ್ದೆ..."

"ನೀವು ದೇಶವನ್ನು ಪ್ರೀತಿಸುವಿರಿ ಎನ್ನುವುದನ್ನು ರುಜುವಾತುಪಡಿಸಿರಿ..."

ಅಮರ ಹುತಾತ್ಮ ವಿವರಣೆ ನೀಡಿದರು. "ಲಾಲಾ ಲಜಪತ್ ರಾಯ್... ಅವರ ಹತ್ಯೆಗೆ ಸೇಡು ತೀರಿಸಿಕೊಳ್ಳಲು ನಾನು ಬ್ರಿಟಿಷ್ ಪೊಲೀಸ್ ಅಧಿಕಾರಿಯ... ಹತ್ಯೆ ಮಾಡಿದ್ದೆ. ನಾನು ಜೈಲಿನಲ್ಲಿ 114 ದಿನ ಉಪವಾಸ ಸತ್ಯಾಗ್ರಹ ಮಾಡಿದೆ..."

"ಆದಾಗ್ಯೂ ನೀವು ದೇಶವನ್ನು ಪ್ರೀತಿಸುವಿರಿ ಎನ್ನುವುದಕ್ಕೆ ಪ್ರಮಾ... ಎಲ್ಲಿದೆ?"

"ನಾನು ಮಾಡಿದ್ದೆಲ್ಲ ನಿಮಗೆ ದೇಶಪ್ರೇಮ ಎನಿಸುವುದಿಲ್ಲವೆ?"

"ಇಲ್ಲ."

"ಮತ್ತೆ..."

ಕತೆ

"ಭಾರತಮಾತಾ ಕೀ ಜೈ ಎನ್ನುವಿರಾದರೆ ನೀವು ದೇಶವ... ಪ್ರೀತಿಸುವಿರಿ ಎಂದು ನಮಗೆ ಖಾತ್ರಿಯಾಗುತ್ತದೆ."

"ಅಂದರೆ ದೇಶ ಇನ್ನೂ ಸ್ವತಂತ್ರವಾಗಿಲ್ಲವೆ?"

(ಮೂರು ವರ್ಷದ ಹಿಂದೆ ಅಸ್ಗರ್ ವಜಾಹತ್ ಬರೆದ... 'ಸದನಮೇಂ ಶಹೀದೆ ಆಜಂ' ಕತೆ ಅವರ 'ಮೇರಿ ಪಿಚ್ಚಾಸಿ ಕಹಾನಿಯಾಂ'... ಕಥಾಸಂಕಲನದಲ್ಲಿ ಸೇರ್ಪಡೆಯಾಗಿದೆ.)

ಮೂಲ ಹಿಂದಿ: ಅಸ್ಗರ್ ವಜಾಹತ್

ಕನ್ನಡಕ್ಕೆ: ಹಸನ್ ನಯೀಂ ಸುರಕೋಡ



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಅಲ್ಲಿರುವುದು ನಮ್ಮನೆ







ಅಲ್ಲಿರುವುದು ನಮ್ಮನೆ, ಇಲ್ಲಿರುವುದು ಸುಮ್ಮನೆ ಅಂತ ಸುಮ್‌ಸುಮ್ನೆ ಹೊಡೆಯೋ ಡೈಲಾಗ್‌ನೆಲ್ಲಾ ಯಾರೂ ವ್ಯಾವಹಾರಿಕವಾಗಿ ಸೀರಿಯಸ್ಸಾಗಿ ತಗೊಂಡಿರೋದನ್ನ ನಾವ್ಯಾರೂ ನೋಡೇ ಇಲ್ಲ. ಅಲ್ಲಿರೋದು ತಾನೇ ನಮ್ಮನೆ ಇಲ್ಲಿ ಸುಮ್ಮಸುಮ್ಮನೆ ಯಾಕೆ ಮನೆ ಕಟ್ಟಸೋದು? ಇಲ್ಲಿ ಇರೋದಕ್ಕೆ ಯಾಕೆ ಅಷ್ಟೊಂದು ಮುತುವರ್ಜಿ ವಹಿಸೋದು? ಅಂತೆಲ್ಲಾ ಅಂದ್ರೆ, ವೇದಾಂತ ಆಡೋಕೆ, ನಿನ್ನೋಕೆ ಬದನೆಕಾಯಿ ಅಂತ ಪೆಕುಪೆಕ್ಕಾಗಿ ನಗ್ತಾರೆ.

ಅಲ್ಲಿರೋದು ನಮ್ಮನೆ, ಇಲ್ಲಿರೋದು ಸುಮ್ಮನೆ ಅಂತ ಶುದ್ಧ ಅಧಿಕ ಪ್ರಸಂಗದ ಮಾತು ನಿಜವಾಗಿಯೂ ಸಾವಿನ ದವಡೆಯಲ್ಲಿರುವವರ ಮನಸ್ಥಿತಿಗಳಿಗೆ ಅನ್ನಿಸೀತು. ಯಾವುದೇ ಕಾರಣಕ್ಕೆ ತಮ್ಮ ಸಾವಿನ ನಿಗದಿತ ಸಮಯವನ್ನು ಅಥವಾ ಕಾಣುತ್ತಿರುವಂತೆಯೇ ಸಮೀಪಿಸುತ್ತಿರುವ ಸಾವನ್ನು ಎದುರಿಸುತ್ತಿರುವವರು ವೈರಾಗ್ಯ ಭಾವಕ್ಕೆ ಒಳಗಾಗುವುದನ್ನು ನಾನು ಕಂಡಿದ್ದೇನೆ.

ಜೀವನ್ಮರಣದ ತಾಕಲಾಟವನ್ನು ಎದುರಿಸಿ ಆಸ್ಪತ್ರೆಯಿಂದ ಹೊರಗೆ ಬಂದಿದ್ದ ಆ ಸಮಯದಲ್ಲಿ ಡಾ.ಎಂ.ವಸುಮಳಲಿ ತಮ್ಮ ಬದುಕಿನ ಇರುವ ಒಲವಿನ ಕುರಿತೂ, ಸಾವಿನ ಬಗ್ಗೆ ಸೈದ್ಧಾಂತಿಕವಾಗಿ ಮಾತಾಡುವುದಿರಲಿ, ಆಲೋಚಿಸುವುದಕ್ಕೂ ನಿರಾಕರಿಸುತ್ತಿದ್ದರು. ಒಂದು ಪಕ್ಷ ಅಂತಹದ್ದೊಂದು ಮಾತು ಬಂದಾಗ ನೇರವಾಗಿ ಹೇಳುತ್ತಿದ್ದರು, "ನಿಮಗೆ ಎಲ್ಲವೂ ಸರಿಯಿದ್ದು ಸಾವಿನ ಬಗ್ಗೆ ಭಯವಿಲ್ಲದಿರುವುದಕ್ಕೆ ಬೇಕಾದ ಫಿಲಾಸಫಿಯನ್ನ ಮಾತಾಡ್ತೀರಿ. ಸಾವನ್ನೂ ರೊಮ್ಯಾಂಟಿಕ್ ಆಗಿ ಬಣ್ಣಿಸ್ತೀರಿ. ಆದರೆ ಅದನ್ನು ನನ್ನಂತವಳು ಓದಿದರೆ ಅದು ಹುಸಿ ಅಂತ ಚೆನ್ನಾಗೇ ಗೊತ್ತಾಗುತ್ತೆ" ಎಂದು ಹೇಳಿದ್ದರು. ಈಗ ಅವರಿಲ್ಲ, ಆದರೆ ಅವರು ನಿಜಕ್ಕೂ ಮೃತ್ಯುವಿನ ದವಡೆಗೆ ಹೋಗಿ ನಂತರ ಮರಣಿಸುವ ನಡುವೆ ಒಂದಷ್ಟು ಕಾಲ ಚೆನ್ನಾಗಿಯೇ ತಮ್ಮ ಜೀವನದ ಘನತೆಯನ್ನು ಸ್ಪಷ್ಟವಾಗಿಯೇ ಎತ್ತಿ ಹಿಡಿಯುತ್ತಾ ಚಟುವಟಿಕೆಪೂರ್ಣವಾಗಿಯೇ ಬದುಕಿದ್ದರು. ಆ ಸಮಯದಲ್ಲಿ ಅವರೊಡನೆ ಹತ್ತಿರದಿಂದಾದರೂ, ಹೊರಗಿನಿಂದ ಒಡನಾಡುತ್ತಿದ್ದಾಗ ಸಾವಿನ ಬಗ್ಗೆ ಅವರು ಕಾಣುವಂತಹ ಒಳದೃಷ್ಟಿಯನ್ನು ನನಗೆ ಕಾಣಲಾಗುತ್ತಿರಲಿಲ್ಲ. ಅವರೆಷ್ಟೇ ಆಳದ ದೃಷ್ಟಿಯನ್ನು ನನಗೆ ನೀಡಿದರೂ, ನನ್ನಂತವನು ಹೆಚ್ಚೆಂದರೆ ಸಕಾರಾತ್ಮಕವಾಗಿ ಬದುಕನ್ನು ನೋಡುವುದು, ನಾವು ಹೆದರುವ ಸಾವನ್ನು ಜಾಣತನದಿಂದ ಪಕ್ಕಕ್ಕೆ ಸರಿಸಿ ಬರೀ ಜೀವಿಸುವ ಅಂಶಗಳನ್ನಷ್ಟೇ ಸರಸವಾಗಿ ಚಿತ್ರಿಸುವುದಾಗುತ್ತಿತ್ತು. ಅದೂ ಸಾವಿನ ಭಯವಿರುವವರಿಗೆ ನಾವೇನೋ ಹೆದರಿಕೆಯನ್ನು ಹೋಗಲಾಡಿಸುವಂತೆ ಅಥವಾ ಪಾಸಿಟಿವ್ ಥಿಂಕಿಂಗ್ ಹೇಳಿಕೊಡುವಂತೆ!

ನನಗೆ ಎಷ್ಟೋ ಬಾರಿ ಅನ್ನಿಸುತ್ತದೆ, ನಮ್ಮಲ್ಲಿ ಬಹುಪಾಲು ಮಂದಿ ಯಾರಾದರೂ ಸತ್ತಾಗ ಅಳುವುದು ದುಃಖದಿಂದಲ್ಲ ಭಯದಿಂದ ಎಂದು. ಯಾವುದೇ ಒಂದು ಅಪಘಾತವಾಗಿರುವುದನ್ನು ನೋಡಿದರೆ, ಕೇಳಿದರೆ ಆ ಕ್ಷಣಕ್ಕೆ ಕೊಂಚ ಎಚ್ಚರಿಕೆಯಿಂದ ವರ್ತಿಸುವ ನಂತರ ಮತ್ತೆ ಮರೆತುಬಿಡುವ ಜಾಯಮಾನ ನಮ್ಮದು. ಅಂತೆಯೇ ಮರಣಿಸಿದವರು ನಮ್ಮೊಡನೆ ಒಡನಾಡಿದ್ದರೆ ಆ ನೆನಪುಗಳಿಂದ ಬಾಧಿತರಾಗುತ್ತೇವೆ. ನಮ್ಮೊಡನೆ ಮಾತಾಡಿದವರು, ಸ್ಪಂದಿಸಿದವರು, ನಮ್ಮ ಜೊತೆ ತಮ್ಮ ಪ್ರೀತಿ, ಅಕ್ಕರೆ, ಕನಸುಗಳನ್ನು ಹಂಚಿಕೊಂಡವರು, ಬಾಳನ್ನು ಬೆಳಗಿಸಿದವರು, ಬದುಕನ್ನು ಬೆರಗಿನಿಂದ ಸವಿದವರು ಇಂದು ನಿಶ್ಚೇತನರಾಗಿ ಮಣ್ಣಿನ ಕುಪ್ಪೆಯ ಕೆಳಗೆ ಮಲಗುವರು ಅಥವಾ ಬೆಂಕಿಯಲ್ಲಿ ಸುಟ್ಟು ಬೂದಿಯಾಗುವರು ಎಂಬ ಆಲೋಚನೆಯೇ ಒಂದು ಆಘಾತಕರ, ಅವರಿನ್ನೆಂದೂ ನಮ್ಮೊಡನೆ ಈ ಮೊದಲಿದ್ದ ಹಾಗೆ ಇರುವುದೇ ಇಲ್ಲ ಎಂದು ಬರಿದೇ ನೆನೆಸಿಕೊಳ್ಳಲೂ ಸಂಕಟಕರ.

ಏನೇ ಸಕಾರಾತ್ಮಕವಾಗಿ ಯೋಚಿಸಿದರೂ ಸಾವೆಂಬುವ ಸತ್ಯವನ್ನು ನಿರಾಕರಿಸಲು ಸಾಧ್ಯವಿಲ್ಲದೇ ಇರುವ ಕಾರಣದಿಂದಲೇ ಚೇತನ, ಆತ್ಮ, ಮುಕ್ತಿ ಇತ್ಯಾದಿಗಳನ್ನು ಚಿಂತಿಸಲಾಯ್ತು. ಬೇರೆ ದಾರಿಗಳಿಲ್ಲದೇ ಸತ್ತವರ ಆತ್ಮಕ್ಕೆ ಶಾಂತಿ ಕೋರುವ, ಅವರ ಚೈತನ್ಯವು ನಮ್ಮೊಡನೆ ಇರುವಂತಹ ಅನೇಕ ಅಸಂಗತ ವಿಚಾರಗಳಿಂದ ನಮ್ಮ ಮನಸ್ಸುಗಳಿಗೆ ಸಮಾಧಾನ ತಂದುಕೊಳ್ಳುವ ರೀತಿಗಳನ್ನು ಕಂಡುಕೊಳ್ಳಲಾಯಿತು.

ಯಾರದೇ ಶವಸಂಸ್ಕಾರಕ್ಕೆ ಹೋದಾಗ "ಬದುಕು ಇಷ್ಟೇನೇ" ಎಂದು ಅನ್ನಿಸುವಂತಹ ಸ್ಮಶಾನ ವೈರಾಗ್ಯವನ್ನೇ ಸ್ಪಷ್ಟವಾಗಿ ಹಿಡಿದು, ಭೂಮಿಯ ಮಿಸ್ಸಾರ ಜೀವನದಲ್ಲಿ ನಮ್ಮ ಆಗಮನ ಮತ್ತು ನಿರ್ಗಮನದ ನಡುವಿನ ಅವಧಿಯು ಬಹಳ ಅಲ್ಪವೇ ಆದ್ದರಿಂದ, ಅಷ್ಟೂ ಸಮಯ ಸಾರ್ಥಕವಾಗಿ, ದಯೆ, ಕರುಣೆ, ಪ್ರೀತಿ, ಭಕ್ತಿಗಳಿಂದ ಬಾಳಿ ಬದುಕಿ "ಹೊರಟೆ ಸೇರೆ ನಮ್ಮ ಊರ" ಎಂದು (ತುಕಾರಾಂ ಹೇಳುವಂತೆ) ಹೋಗುತ್ತೇವೆ ಎಂಬುದನ್ನು ಸದಾ ಸ್ಮರಣೆಯಲ್ಲಿಟ್ಟುಕೊಳ್ಳಲೇ ಸಂಸಾರ ಕ್ಷಣಭಂಗುರ, ನೀರಿನ ಮೇಲೆ ಗುಳ್ಳೆ ನಿಜವಲ್ಲಾ ಹರಿಯೇ ಎಂದೆಲ್ಲಾ ದಾಸರು ಹೇಳುವುದು. ಇಂತಹ ವೈರಾಗ್ಯವೇ ಜೈನ ತೀರ್ಥಂಕರರ ಕಾರಣಿಕ ಶಕ್ತಿ ಸಾರ. ಈ ಅರಿವಿನಿಂದಲೇ ಭಾರತದಲ್ಲಂತೂ ಸಂತವರ್ಗದ ಸೃಷ್ಟಿ ಮತ್ತು ಬೆಳವಣಿಗೆ ಬಹಳವಾಯಿತು. ಇದೇ ತಿಳಿವಳಿಕೆಯೇ ಆಧ್ಯಾತ್ಮಿಕತೆಯ ನೈತಿಕತೆಯು ಭದ್ರಬುನಾದಿಯನ್ನು ಭಕ್ತಿ ಚಳವಳಿಗೆ ನೀಡಿದ್ದು. ಈ ವಿಚಾರವೇ ಜಾತಿ, ಮತ, ಧರ್ಮಗಳು ಮತ್ತು ವರ್ಗಗಳು



ಹುಟ್ಟು ಹಾಕಿದ ಮೇಲರಿಮೆ ಮತ್ತು ಕೀಳರಿಮೆಗಳನ್ನು ನಿರಾಕರಿಸಲು, ಸಂಪೂರ್ಣ ಧಿಕ್ಕರಿಸಲು ಸಹಕರಿಸಿದ್ದು. ಅರಿವಿಲ್ಲದಂತೆ ಆದ ಹುಟ್ಟೂ, ಅರಿತಿಲ್ಲದೆ ಬರುವ ಸಾವಿನ ನಡುವಿನ ಜೀವಿತಾವಧಿಯನ್ನು ಸಾರ್ಥಕಗೊಳಿಸಿಕೊಳ್ಳಲು, ಅದನ್ನು ಸಂಪೂರ್ಣವಾಗಿ ಸತ್ವಭರಿತವನ್ನಾಗಿಸಲು ಭಕ್ತಿ ಮತ್ತು ವೈರಾಗ್ಯವನ್ನು ಹೇಳಿಕೊಟ್ಟಿದ್ದು ನಮ್ಮ ಭಕ್ತಿ ಪರಂಪರೆ. ಈ ಭಕ್ತಿಪರಂಪರೆಯು ಚಳವಳಿಯ ರೀತಿಯಲ್ಲಿ ಸಮಾಜದಲ್ಲಿ ನೆಲೆಸಿದ್ದ ಅಸಮಾನತೆಯ ವಿರುದ್ಧ ಬಹಳ ಗಟ್ಟಿತನದಿಂದಲೂ, ಸಾತ್ವಿಕ ರೀತಿಯಿಂದಲೂ ಹೋರಾಡಿತು. ಬಹುದೊಡ್ಡ ಜನಸಮುದಾಯಕ್ಕೆ ವೈರಾಗ್ಯದ ಮನವರಿಕೆ ಮಾಡಿತ್ತು, ಇಂದಲ್ಲ ನಾಳೆ ನಾನು ಸಾಯುತ್ತೇನೆ. ಸಾಯುವ ಮುನ್ನ ಯಾವುದೇ ನಕಾರಾತ್ಮಕವಾಗಿರುವುದನ್ನು ಸಾಧಿಸಿ, ಇತರರನ್ನು ನೋಯಿಸಿ ಹೋಗಕೂಡದೆಂಬ ದಿವ್ಯ ಜ್ಞಾನವು ಸದಾ ಜಾಗೃತವಾಗಿರಲು ಭಕ್ತಿ ಪರಂಪರೆಯವರು ಬಳಸಿದ ಅತಿ ದೊಡ್ಡ ಅಸ್ತ್ರವೆಂದರೆ ಭಗವಂತನಲ್ಲಿ ನಿಷ್ಕಾಮ ಪ್ರೀತಿ. ಯಾವ ಪ್ರತಿಫಲವನ್ನೂ ಬಯಸದ ಭಕ್ತಿ, ಬರಿದೇ ಮುಕ್ತಿ.

ಕೋಳೂರ ಕೊಡಗೂಸು

ಮುಕ್ತಿಯನ್ನು ಪಡೆಯಲು, ನಿಜವಾದ ವೈರಾಗ್ಯ ಭಾವವನ್ನು ಹೊಂದಲು ಸಾಮಾಜಿಕ ಮತ್ತು ವೈಯಕ್ತಿಕವಾದ ಸ್ಥಾನಮಾನಗಳ ಅರಿವೆಗಳನ್ನು, ಅಹಂಕಾರಗಳಿಂದ ಹುಟ್ಟಿರುವ ಭ್ರಮೆಗಳಿಂದ ಹೊರಬರುವ ಅಗತ್ಯವನ್ನು ಭಕ್ತಿ ಚಳವಳಿಯು ಹೇಳುತ್ತಾ ಹೇಳುತ್ತಾ ಬಹುಮುಖ್ಯವಾದ ಮತ್ತೊಂದು ವಿಷಯವನ್ನೂ ಸ್ಪಷ್ಟಗೊಳಿಸಿದ್ದರು. ಆಚರಣೆ ಮತ್ತು ಧಾರ್ಮಿಕ ನಿರ್ಬಂಧ ವಿಚಾರಗಳಿಂದ ಹೊರಗೆ ಬರಬೇಕೆಂಬುದನ್ನು ಕಾಲದಿಂದ ಕಾಲಕ್ಕೆ ತಿಳಿಸುತ್ತಲೇ ಬಂದರು. ಭಗವಂತನೆಂಬ ಪರಿಕಲ್ಪನೆಯನ್ನು ಕಲ್ಲಿನಲ್ಲಿ ಸ್ಥಿರಗೊಳಿಸಿ, ನಮ್ಮ ಭಕ್ತಿ, ಪ್ರೀತಿಗಳನ್ನು ಮುಗ್ಧತೆಯಿಲ್ಲದೇ ಬರಿಯ ಆಚರಣೆಗಳಿಗೆ ಒಳಪಡಿಸಿ, ನೇಮದಲ್ಲಿದ್ದರೆ ಅದೂ ಕೂಡ ವ್ಯರ್ಥವೆಂದು ಸಾಧಿಸಲು ಅನೇಕ ಐತಿಹ್ಯಗಳನ್ನು ಸಮಾಜದ ಕಣ್ಣ ಮುಂದೆ ತಂದರು. ಅದರಲ್ಲಿ ಕೋಳೂರು ಕೊಡಗೂಸು ಒಂದು ಸುಂದರ ಕಥೆ.

ಧಾರವಾಡ ಜಿಲ್ಲೆಯ ಹಾವೇರಿಯಿಂದ ಸುಮಾರು ಮೂರು ಕಿಲೋಮೀಟರ್ ದೂರದಲ್ಲಿರುವ ಗ್ರಾಮವೇ ಈ ಕೋಳೂರು ಎಂದು ಕೆಲವರು ಹೇಳಿದರೆ, ಇನ್ನೂ ಕೆಲವರು ನೇರ ತಮಿಳುನಾಡಿಗೆ ಒಯ್ಯುತ್ತಾರೆ. ಇದು ತಮಿಳು ಶೈವಭಕ್ತಿ ಪರಂಪರೆಯ ಪ್ರಮುಖವಾದ ಕಥೆಗಳಲ್ಲೊಂದು. ಏನೇ ಆಗಲಿ, ನಮ್ಮ ಭಕ್ತಿಯ ಸಾಂಸ್ಕೃತಿಕ ಪರಂಪರೆಯನ್ನು ತಿಳಿದುಕೊಳ್ಳಲು ಈ ಕಥೆ ಬಹಳ ಮುಖ್ಯ.

ಕೋಳೂರಿನ ಶಿವ ದೇವಾಲಯದಲ್ಲಿ ಶಿವದೇವನೆಂಬ ಬ್ರಾಹ್ಮಣ ಅರ್ಚಕ. ಅವನಿಗೆ ಒಬ್ಬಳೇ ಮಗಳು ಈ ನಮ್ಮ ಕೊಡಗೂಸು. ಅವಳೋ ಮಗುವಾಗಿದ್ದಾಗಲೇ ತಾಯನ್ನು ಕಳೆದುಕೊಂಡವಳು ಮತ್ತು ತಂದೆಯ ಸುಪರ್ದಿನಲ್ಲಿ ಬೆಳೆಯುತ್ತಾ ಬರುವಳು. ಶಿವದೇವನು ಪ್ರತಿದಿನವೂ ಶಿವನಿಗೆ ಶಾಲ್ಯಾನ್ನದಂತಹ ಭಕ್ಷ್ಯವನ್ನು ಸಿದ್ಧಪಡಿಸಿ ನೈವೇದ್ಯವನ್ನು ನೀಡುತ್ತಿದ್ದನು. (ಕೆಲವೊಂದು ಕೃತಿಗಳಲ್ಲಿ ಕಪಿಲೆಯೆಂಬ ಹಸುವಿನ ಹಾಲು ಎಂದೂ ಇದೆ.) ಒಮ್ಮೆ ಆರೋಗ್ಯ ತಪ್ಪಿದ ತನ್ನ ಸಂಬಂಧಿಕರನ್ನು ನೋಡಿ ಬರಲು ಶಿವದೇವನು ಹೋಗಬೇಕಾಗಿತ್ತು. ತನ್ನ ಶಿವಪೂಜೆ ಮತ್ತು ನೈವೇದ್ಯದ ನೇಮವು ತಪ್ಪಬಾರದೆಂದು ಮಗಳಿಗೆ ಅದನ್ನು ವಹಿಸಿ ತಂದೆ ಹೋಗುವನು. ಈ ಕೂಸು ಶಿವನಿಗೆ ಆಹಾರವನ್ನು ಅರ್ಪಿಸುವುದೆಂದರೆ ಆತನಿಗೆ ತಿನ್ನಲು ಕೊಡುವುದೆಂದೇ ಭಾವಿಸುತ್ತದೆ. ಅಂತೆಯೇ ಕೊಡಲು ಹೋದಾಗ ಲಿಂಗವು ಈಗ ಮೌನವಾಗಿಯೇ ಇರುವಂತೆ ಆಗಲೂ ನಿಶ್ಚೇತನವಾಗಿಯೇ ಇರುತ್ತದೆ. ಆದರೆ ಕೊಡಗೂಸು ತನ್ನ ತಂದೆ ಕೊಡುವಾಗ ಸೇವಿಸುವ ಶಿವ ತಾನು ಕೊಡುವಾಗ ಏಕೆ ಸ್ವೀಕರಿಸುತ್ತಿಲ್ಲ? ಎಂದು ಪರಿಪರಿಯಾಗಿ ಶಿವನನ್ನು ಕರೆಯುತ್ತಾಳೆ. ಆದರೆ ಅವನು ಬರುವುದಿಲ್ಲ, ಬರ್ತೀಯೋ ಇಲ್ವೋ, ಎಂದು ಕಂಬಕ್ಕೋ, ಪಾಣೀಪೀಠಕ್ಕೋ ತಲೆ ಚಚ್ಚಿಕೊಂಡು ರಕ್ತಧಾರೆ ಹರಿಸಲು ಮುಂದಾದಾಗ ಶಿವನು ಪ್ರತ್ಯಕ್ಷನಾಗಿ ಅವಳಿಂದ ಆಹಾರವನ್ನು ಸ್ವೀಕರಿಸುತ್ತಾನೆ. ಶಿವದೇವನು ಮರಳಿ ಬರುವವರೆಗೂ ಈ ಕೂಸು ಹೀಗೇ ಜೀವಂತವಾಗಿ ಎದುರಿಗೆ ಬಂದ ಶಿವನಿಗೆ ಆಹಾರ ಅರ್ಪಿಸುತ್ತಿರುತ್ತಾಳೆ. ತಂದೆ ಬರುತ್ತಾನೆ. ಅದೇತಾನೇ ಕೊಡಗೂಸು ದೇವಾಲಯದಿಂದ ಬರುತ್ತಾಳೆ. ತಂದೆ ನೈವೇದ್ಯ ಮಾಡಿರುವ ಪ್ರಸಾದ ಕೇಳುತ್ತಾನೆ. ಆದರೆ ಅದು ಇರುವುದಿಲ್ಲ, ಶಿವ ತಿಂದ ಎನ್ನುವ ಮಾತನ್ನು ಅರ್ಚಕ ತಂದೆ ಒಪ್ಪುವುದಿಲ್ಲ, ತಾನೇ ತಿಂದು ಶಿವನ ಮೇಲೆ ಹೇಳುವ ಮಗಳನ್ನು ಗದರಿಸುತ್ತಾನೆ. 'ಅದನ್ನು ನಿರೂಪಿಸಲು ಕೂಸು ಮತ್ತೆ ಶಿವನ ಮುಂದೆ ಹೋಗಿ ತಿನ್ನಲು ಕರೆಯುತ್ತಾಳೆ. ಬರುವುದಿಲ್ಲ, ಅವಳು ಅದೇ ರೀತಿ ತಲೆ ಚಚ್ಚಿಕೊಳ್ಳುವ ಕೆಲಸಕ್ಕೆ ಮುಂದಾದಾಗ ಶಿವ ಅಲ್ಲಿ ಪ್ರತ್ಯಕ್ಷನಾಗಿ ಅವಳನ್ನು ತನ್ನ ಜೊತೆ ಕರೆದುಕೊಂಡು ಹೋಗುತ್ತಾನೆ. ಲಿಂಗದೊಳಕ್ಕೆ ಹೋಗುವ ಮಗುವನ್ನು ಹಿಡಿಯಲು ಹೋಗುವ ತಂದೆಗೆ ಅವಳ ಕೂದಲಷ್ಟೇ ಕೈಗೆ ಸಿಗುತ್ತದೆ. ಆ ಕೂದಲು ಲಿಂಗದಿಂದ ಈಗಲೂ ಹೊರಗಿದೆ ಎಂದು ಪ್ರತೀತಿ ಇದೆ. ಇದನ್ನು ತನ್ನ ರಗಳೆಯಲ್ಲಿ ಹರಿಹರ ಕವಿಯು ಬಹು ಸುಂದರವಾಗಿ ವರ್ಣಿಸಿದ್ದಾನೆ.


ಸಾಂಕೇತಿಕವಾಗಿ ವಿಜೃಂಭಿಸುವ ಕಥೆಯ ಒಗಟನ್ನು ಬಿಡಿಸಬೇಕು. ನೈಜ ಘಟನೆಯಂತೆ ವಾಸ್ತವವಾಗಿ ನೋಡಿ ವಿಮರ್ಶೆ ಮಾಡಬಾರದು. ಹಾಗೆ ಮಾಡಿಬಿಟ್ಟರೆ, ಇಡೀ ಕಥೆಯನ್ನೇ ಸುಳ್ಳು ಎಂದು ಹೇಳುವಂತಾಗಿಬಿಡುತ್ತದೆ. ದೇವಾಲಯವೆಂದರೆ ಬರೀ ಶಿವದೇವ ಮತ್ತು ಅವನ ಕೂಸಿಗೆ ಮಾತ್ರವಿತ್ತೇ? ತಾಯಿ ಇಲ್ಲದ ಈ ಮಗುವು ತಂದೆಗೆ ಪೂಜೆಗೆ ಪ್ರತಿನಿತ್ಯ ನೆರವಾಗುತ್ತಿದ್ದಾಗ ನೈವೇದ್ಯ ಮಾಡುವುದನ್ನು ನೋಡುತ್ತಿರಲಿಲ್ಲವೇ? ಅವನೋ ಮಗುವನ್ನು ಎಲ್ಲೋ ಹೊರಗೆ ಕಳುಹಿಸಿ ರಹಸ್ಯವಾಗಿ ಎಡೆ ಇಡುತ್ತಿದ್ದನೇ? ಶಿವ ಎಂಬ ಲಿಂಗವನ್ನು ಆರಾಧಿಸುವುದನ್ನು ನೋಡುತ್ತಿದ್ದಳೇ ಹೊರತು, ಅವನು ಎದ್ದು ಬಂದು ತಿಂದದ್ದೇನೂ ಅವಳೂ ನೋಡಿರಲಿಲ್ಲವಲ್ಲ! ಹೋಕ್ಕೊಳ್ಳಿ, ಶಿವ ಬಂದು ತಿನ್ನಲಿಲ್ಲಾಂತ ಅಷ್ಟು ಪುಟ್ಟ ಬಾಲಕಿ ತಲೆ ಚಚ್ಚಿಕೊಂಡು ರಕ್ತಸ್ರಾವ ಮಾಡಿಕೊಂಡು ಸತ್ತು ಹೋಗುತ್ತೇನೆಂದು ಹೆದರಿಸಿ ತನ್ನ ಕೆಲಸ ಸಾಧಿಸಿಕೊಳ್ಳುವಷ್ಟು ಎಮೋಷನಲ್ ಬ್ಲ್ಯಾಕ್‌ಮೇಲ್ ಮಾಡಲು ಎಲ್ಲಿ ಕಲಿತಳು? ಹೇಗೆ ಮಾಡುವಳು? ತಂದೆ ಮಗಳ ಸತ್ಯತೆಯನ್ನು ನಿರಾಕರಿಸಿ ಅನುಮಾನಿಸಿದಾಗ ಬರುವ ಶಿವ 'ಅಲ್ಲಾ ಕಣಯ್ಯಾ ಅರ್ಚಕಾ, ನೀನು ಬರೀ ನೇಮ ಮಾಡಿದೆ. ನಿನ್ನ ಮಗಳು ತನ್ನ ಮುಗ್ಧತೆಯಿಂದ ನನಗೆ ಊಟವನ್ನೇ ಮಾಡಿಸಿಬಿಟ್ಟಳು ಕಣಯ್ಯಾ. ನೇಮ ಗೀಮಾ ಅಂತಿರೋ ಸಂಪ್ರದಾಯ ಅಲ್ಲ ಮುಖ್ಯ. ಮಗುವಿಗಿರುವಂತಹ ಭಕ್ತಿ ಪ್ರೀತಿ ಮುಖ್ಯ ಕಣಯ್ಯಾ' ಅಂತ ಬುದ್ಧಿ ಹೇಳೋದು ಬಿಟ್ಟು, ತಟಕ್ಕಂತ ಬಂದು ಪಟಕ್ಕಂತ ಹಾರಿಸಿಕೊಂಡು ಹೋಗಿಬಿಡುವುದೇ! ಪಾಪದ ಶಿವದೇವನಿಗೆ ಪುತ್ರಿಶೋಕ ನೀಡಿ, ಬರೀ ಜುಟ್ಟುಳಿಸಿ ಹೋಗುವುದೇ?


ವಿಷಯ ಅದಲ್ಲ.

ಶಿವದೇವ ಬ್ರಾಹ್ಮಣ. ಬ್ರಾಹ್ಮಣರಲ್ಲಿ ಯಜ್ಞೋಪವೀತ ಧರಿಸುವ ಮತ್ತು ಉಪನಯನ ಮಾಡಿಸಿಕೊಂಡು ದೇವತಾಕಾರ್ಯವನ್ನು ಮಾಡುವ ಅಧಿಕಾರ ಪುರುಷ ಹೊಂದಿರುತ್ತಾನೆ. ತಮಾಷೆಯೆಂದರೆ ಶೂದ್ರಳೆಂದು ಕರೆಯುವ ಹೆಣ್ಣು ತನಗೆ ಹೆಂಡತಿಯಾದ ಮೇಲೆ ಅವಳ ಪರವಾಗಿ ತಾನೇ ಜನಿವಾರ ಹಾಕಿಕೊಂಡು ದೇವತಾಕಾರ್ಯ ಮಾಡುತ್ತಾನೆ. ಇಂತಹದ್ದೊಂದು ಡಾಂಭಿಕತನವನ್ನು ಧಿಕ್ಕರಿಸುವ ಕಥೆ ಇದು. ಒಬ್ಬ ಅರ್ಚಕನು ತನ್ನ ನೇಮಾದಿಗಳನ್ನು ಯಾಂತ್ರಿಕವಾಗಿ ಮಾಡುತ್ತಾನೆಯೇ ಹೊರತು, ಅವನು ಹೊರತುಪಡಿಸಿರುವಂತಹ ಹೆಣ್ಣು ತನ್ನ ನಿಜವಾದ ಭಕ್ತಿಯಿಂದ ಯಾವ ದೈವಿಕತೆಯ ಸೂಕ್ಷ್ಮವನ್ನು ಹೊಂದುವಳೋ ಅದನ್ನು ತನ್ನ ಸಹಜತೆ ಮತ್ತು ಮುಗ್ಧತೆಯಿಂದ ಪಡೆಯುವಳು ಎಂದು ಈ ಕಥೆ ಹೇಳುವುದು. ಹಾಗೆಯೇ ದೇವಸ್ಥಾನದ ಅರ್ಚಕನಾಗಿ ಬರಿಯ ಸಂಪ್ರದಾಯದ ಚೌಕಟ್ಟಲ್ಲಿ ಬಂಧಿತರಾಗುವ ಮಂದಿಗೆ ದೈವತ್ವದ ಅರಿವಾಗದೆಂದೂ, ಸಹಜವಾದ ಮುಗ್ಧತೆ ಮತ್ತು ಪ್ರೀತಿಯಿಂದ ಅದರ ಅನುಭೂತಿಯನ್ನು ಪಡೆಯಬೇಕೆಂಬ ಪ್ರತಿಮಾ ರೂಪದ ಕಥೆಯಿದು. ಯೇಸುವು ಹೇಳುವುದನ್ನು ನೆನಪಿಸಿಕೊಳ್ಳೋಣ, "ನೀವು ಮಕ್ಕಳಂತಾಗದಿದ್ದರೆ ನಿಮಗೆ ಸ್ವರ್ಗ ಸಾಮ್ರಾಜ್ಯವು ಇಲ್ಲ." ಅಂತೆಯೇ ಈ ಕಥೆ ಕೊಡುವ ಮತ್ತೊಂದು ಮಹತ್ತರ ಸೂಚನೆ ಎಂದರೆ, ನೇಮಾದಿಗಳ ಸಾಂಪ್ರದಾಯಿಕ ಚೌಕಟ್ಟನ್ನು ಮುರಿದುಹೋಗುವವರನ್ನು ಸಂಪ್ರದಾಯವಾದಿಗಳು ಉಳಿಗೊಳಿಸುವುದಿಲ್ಲ ಎಂದೂ ಕೂಡ. ನೋಡಿ, ಕೊಡಗೂಸು ಶಿವನ ಸೇರಿಕೊಂಡುಬಿಟ್ಟಳು. ಅವಳ ತಂದೆ ಅರ್ಚಕ ವೃತ್ತಿ ಮಾಡಿಕೊಂಡು, ಅದೇ ನೈವೇದ್ಯವಿಟ್ಟುಕೊಂಡು ಉಳಿದುಕೊಂಡ.

ಸಂಪ್ರದಾಯದ ನೇಮವನ್ನು ಮುರಿದವರು ಒಂದು ಐತಿಹ್ಯವಾಗಿ ಉಳಿಯುತ್ತಾರೆ. ರೂಪಕವಾಗಿ ವಿಜೃಂಭಿಸುತ್ತಾರೆ. ಆದರೆ ನೇಮ ಮಾಡುವವರು ಉಳಿದು ಬಾಳುತ್ತಾರೆ. ಸಂಪ್ರದಾಯವು ಮುಂದುವರಿಯುತ್ತದೆ. ■

ಅಂಬೇಡ್ಕರ್ ವಿಶೇಷಾಂಕ ತುಂಬಾ ಚೆನ್ನಾಗಿತ್ತು





ಅಂಬೇಡ್ಕರ್ ಅವರ 125 ಜಯಂತಿ ಕುರಿತು ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅತ್ಯಮೂಲ್ಯವಾದವುಗಳು. ಸಂಘಪರಿವಾರ ಎಷ್ಟೇ ಪ್ರಯತ್ನಪಟ್ಟರೂ ಅಂಬೇಡ್ಕರ್‌ರನ್ನು ಅವರ ಹಿಡಿತಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲ.

ಅಂಬೇಡ್ಕರ್ ಅವರ ಬರಹಗಳು ಮತ್ತು ಭಾಷಣಗಳ ನಾಲ್ಕನೆಯ ಸಂಪುಟ 'ಹಿಂದೂ ಧರ್ಮದ ಒಗಟುಗಳು' ಕೃತಿಯಲ್ಲಿ ಹಿಂದೂ ದೇವಾನುದೇವತೆಗಳ ನೈಜತೆಯ ಕುರಿತು ಬರಿದಿದ್ದಾರೆ. ಪ್ರೊಫೆಸರ್ ಭಗವಾನ್ ಅವರು ರಾಮಕೃಷ್ಣರ ಬಗ್ಗೆ ಆಡಿದ ಮಾತುಗಳನ್ನು ಬಾಬಾಸಾಹೇಬರು ಎಷ್ಟೋ ವರುಷಗಳ ಹಿಂದೆಯೇ ತಮ್ಮ ಕೃತಿಯಲ್ಲಿ ಬರೆದಿದ್ದಾರೆ. ಅಂಬೇಡ್ಕರ್ ಎಂದರೆ ದಲಿತ, ಅಲ್ಪಸಂಖ್ಯಾತ, ಹಿಂದುಳಿದವರ ನಾಯಕ. ಅವರಿಗೆ ಸಂವಿಧಾನದ ಮೂಲಕ ಸ್ಥಾನ ನೀಡಿದ ಮಹಾತ್ಮನೆ ಹೊರತು, ಮೂಲಭೂತವಾದಿಗಳ, ಆರ್‌ಎಸ್‌ಎಸ್ ಬೆಂಬಲಿಗರಲ್ಲ.

-ಅಬ್ದುಲ್ ರಜಾಕ್, ಈ ಮೇಲ್ ಮೂಲಕ

ಪಟಾಕಿ ಸುಡುವುದು ಹಿಂದೂ ಸಂಪ್ರದಾಯವಲ್ಲ

ಕೇರಳದ ಕೊಲ್ಲಂ ದೇವಾಲಯದಲ್ಲಿ ಅಲ್ಲಿಯ ಆಡಳಿತ ಮಂಡಳಿ ಸಂಗ್ರಹಿಸಿಟ್ಟಷ್ಟು ಶಕ್ತಿಶಾಲಿ ಸ್ಫೋಟಕಗಳನ್ನು ಒಂದು ವೇಳೆ ಯಾವುದಾದರೂ ಮಸೀದಿಯಲ್ಲಿ ಅಥವಾ ಚರ್ಚ್‌ನಲ್ಲಿ ಅವರ ಮುಂದಿನ ಜಾತ್ರೆಗಾಗಿ ಸಂಗ್ರಹಿಸಿಟ್ಟಿದ್ದರೆ ಹಾಗೂ ಅದು ಹೀಗೆ ಅಚಾನಕ್ ಸ್ಫೋಟವಾಗಿ ನೂರಾರು ಜನರು ಸತ್ತಿದ್ದರೆ ಆಗ ಕೇಸರಿ ಪಡೆಗಳು "ಅದು ಸಾಧಾರಣ ಪಟಾಕಿಯಾಗಿರಲಿಲ್ಲ, ಅದು ಉಗ್ರವಾದಿಗಳು ದುಷ್ಕೃತ್ಯಕ್ಕಾಗಿ ಸಂಗ್ರಹಿಸಿಟ್ಟ ನಿಜವಾದ ಸ್ಫೋಟಕಗಳಾಗಿದ್ದರಿಂದ ಅಷ್ಟು ದೊಡ್ಡ ದೇವಸ್ಥಾನದ ಕಾಂಕ್ರಿಟ್ ಛಾವಣಿ ಸಹಿತ ಹಾರಿಹೋಗಿದ್ದು" ಎಂದು ಗಲಾಟೆ ಮಾಡಿ "ಸಿಬಿಐ ತನಿಖೆಯಾಗಬೇಕು" ಎಂದು ಬೀದಿರಂಪ ಮಾಡಿ ತಮ್ಮ ನಕಲಿ ದೇಶಪ್ರೇಮವನ್ನು ಖಂಡಿತಾ ಮೆರೆಯುತ್ತಿದ್ದವು.

ಕೆಲವು ಮಲೆಯಾಳಂ ಪತ್ರಿಕೆಗಳು ಹೇಳುವಂತೆ 'ಮುಂದಿನ ಮೇ ತಿಂಗಳಲ್ಲಿ ನಡೆಯುವ ಕೇರಳದ ವಿಧಾನಸಭಾ ಚುನಾವಣೆಯ ವೇಳೆ ಹಿಂದೂ ಮತದಾರರಲ್ಲಿ ಸಹಾನುಭೂತಿ ಹುಟ್ಟಿಸಿ ಅವರನ್ನು ಹಿಂದೂತ್ವವಾದಿ ಬಿಜೆಪಿ ಪಕ್ಷದೆಡೆ ತಿರುಗಿಸಲು ಇದು ಉದ್ದೇಶಪೂರ್ವಕವಾಗಿ ಸಂಘಿಗಳೇ ನಡೆಸಿದ ದುಷ್ಕೃತ್ಯ' ಎಂಬ ಅಭಿಪ್ರಾಯವೂ ಮೂಡಿದೆಯಂತೆ. ಏನೇ ಆಗಲಿ ಅಲ್ಲಿಯ ಮುಸ್ಲಿಂ ಜಿಲ್ಲಾಧಿಕಾರಿ ವಿಧಿಸಿದ್ದ ನಿಷೇಧವನ್ನು ದೇವಸ್ಥಾನದವರು ಧಾರ್ಮಿಕ ಪೂರ್ವಾಗ್ರಹ ಬಿಟ್ಟು ಅನುಸರಿಸಿದ್ದರೆ ಇಂತಹ ದೊಡ್ಡ ದುರಂತ ಆಗುವುದು ತಪ್ಪುತ್ತಿತ್ತು.

ಈ ಸುಡುಮದ್ದು ಪ್ರದರ್ಶನ ನೂರಾರು ವರ್ಷದಿಂದ ನಡೆದು ಬಂದ ಸಂಪ್ರದಾಯ ಮತ್ತು ಪರಂಪರೆ ಹಾಗಾಗಿ ಅದನ್ನು ನಿಲ್ಲಿಸುವುದು ಸಾಧ್ಯವಿಲ್ಲ ಎಂಬ ದುರಾಗ್ರಹದಿಂದ ದೇವಸ್ಥಾನದ ಆಡಳಿತ ಮಂಡಳಿ ಕೊಲ್ಲಂ ಜಿಲ್ಲಾಧಿಕಾರಿಯ ಆದೇಶ ಧಿಕ್ಕರಿಸಿತು. ಸ್ಫೋಟಕಗಳ ಇತಿಹಾಸ ನೋಡಿದರೆ ಹಿಂದೂ ಜಾತ್ರೆಯಲ್ಲಿ ಪಟಾಕಿ ಸುಡುವದು ಹಿಂದೂ ಸಂಪ್ರದಾಯ-ಪರಂಪರೆ ಆಗಲು ಸಾಧ್ಯವೇ ಇಲ್ಲ, ಯಾಕೆಂದರೆ ಪಟಾಕಿ-ಸ್ಫೋಟಕಗಳ ಮೂಲ ಚೀನಾ ದೇಶ. ಅಲ್ಲಿಂದ ಅದು ಮಧ್ಯ ಏಶಿಯಾ ಹಾಗೂ ಯುರೋಪಿಗೆ ಹೋಗಿ ನಂತರ ಬ್ರಿಟಿಷರ ಕಾಲದಲ್ಲಿ ಅದು ಭಾರತಕ್ಕೆ ಬಂದಿದ್ದು. ಅಂದರೆ ಭಾರತದಲ್ಲಿ ಪಟಾಕಿಗಳು ಹೆಚ್ಚೆಂದರೆ 250 ವರ್ಷ ಹಳೆಯವು. ಮೊಘಲರು ತಂದಿದ್ದ ಸ್ಫೋಟಕಗಳು ಕೇವಲ ಯುದ್ಧದ ತೋಪುಗಳಲ್ಲಿ ಮಾತ್ರ ಬಳಕೆಯಾಗುತ್ತಿತ್ತು. ಟಿಪ್ಪು ಸುಲ್ತಾನನೂ ಅದನ್ನು ಯುದ್ಧದಲ್ಲಿ ಮಾತ್ರ ಬಳಸಿದ್ದ. ಆದರೆ ಈ ಸ್ಫೋಟಕಗಳನ್ನು ಸಣ್ಣ ಗಾತ್ರದಲ್ಲಿ ಕಾಗದದಲ್ಲಿ ಸುತ್ತಿ ಜನರ ಮನರಂಜನೆಗಾಗಿ ಸುಡುವ ವಿಧಾನ ಮೊಘಲರಿಗೆ ಅಥವಾ ಟಿಪ್ಪು ಸುಲ್ತಾನನಿಗೂ ಗೊತ್ತಿರಲಿಲ್ಲ. ಕಾಗದ ತಯಾರಿಸುವುದನ್ನೂ ನಮಗೆ ಬ್ರಿಟಿಷರು ಕಲಿಸಿದ್ದು ಹಾಗೂ ಕಾಗದದಲ್ಲಿ ಸ್ಫೋಟಕ ಮದ್ದು ಸುತ್ತಿ ಸಣ್ಣಸಣ್ಣ ಪಟಾಕಿ ತಯಾರಿಸುವುದನ್ನೂ ಬ್ರಿಟಿಷರೇ ನಮಗೆ ಕಲಿಸಿದ್ದು. ಬ್ರಿಟಿಷರಿಂದಾಗಿ ಜನಸಾಮಾನ್ಯರು ಮನರಂಜನೆಗಾಗಿ ಸಣ್ಣಸಣ್ಣ ಪಟಾಕಿ ಸುಡುವ ಪದ್ಧತಿ ಶುರುವಾಯಿತು. ಪಟಾಕಿ ಅಥವಾ ಇತರ ಮನೋರಂಜಕ ಸುಡುಮದ್ದುಗಳನ್ನು ತಯಾರಿಸುವ ವಿಧಾನ ಹಿಂದೂಗಳಿಗೆ ಗೊತ್ತೇ ಇರದಿದ್ದಾಗ ಅದು ಹಿಂದೂಗಳ ಪುರಾತನ ಸಂಪ್ರದಾಯ ಹೇಗಾಗಬಲ್ಲದು?

ಕುರುಕ್ಷೇತ್ರ ಯುದ್ಧದಲ್ಲಿ ಕ್ಷಿಪಣಿ ಮತ್ತು ಅಣುಬಾಂಬ್ ಪ್ರಯೋಗಿಸಲಾಗಿತ್ತು ಎಂಬುದೆಲ್ಲಾ ನವ-ವೈದಿಕರ ಕಲ್ಪನೆ (ಕುಜ್ಞಾನ) ಅಷ್ಟೇ. ಹಾಗಾಗಿ ಪುರಾತನ ಹಿಂದೂ ಸಂಪ್ರದಾಯದ ಹೆಸರಲ್ಲಿ ಭಾರತದ ಯಾವುದೇ ದೇವಸ್ಥಾನದ ಜಾತ್ರೆಯಲ್ಲಿ ಪಟಾಕಿ ಸುಡುವುದಕ್ಕೆ ಅನುಮತಿ ಕೊಡದಿರುವುದೇ ಲೇಸು.

-ಹರೀಶ್ ಎಮ್.ಆರ್. ಉಡುಪಿ




ರಾಘವ ಕೇಸ್ ಮತ್ತು 'ತೀಸ್ರಾ ರಾಸ್ತಾ'ದ ಬಚಾವ್ ಪುರಾಣ



ನೂರು ಜನ ಅಪರಾಧಿಗಳಿಗೆ ಶಿಕ್ಷೆಯಾಗದಿದ್ದರೂ ಒಬ್ಬ ನಿರಪರಾಧಿಗೆ ಮಾತ್ರ ಶಿಕ್ಷೆಯಾಗಕೂಡದು. ಇದು ನಮ್ಮಯ ನ್ಯಾಯದಾನ ವ್ಯವಸ್ಥೆಯ ಧ್ಯೇಯವಾಕ್ಯ. ಮೇಲ್ನೋಟಕ್ಕಿದು 'ಧರ್ಮವಂತ' ನಿಯಮವೆಂದೆನಿಸಿದರೂ ಆರೋಪಿಗಳು ತಮ್ಮ 'ನಿರಪರಾಧ' ಸಾಬೀತುಪಡಿಸುವಲ್ಲಿ ಮತ್ತಷ್ಟು ಹೊಗಲು ಕುಮ್ಮಕ್ಕು ನೀಡುವಂತಹ ಅಡ್ಡದಾರಿಯ ಸೂತ್ರವಿದು. ಈ ಕಾರಣಕ್ಕೇ ಪಳಗಿದ ವಕೀಲರನ್ನು ಹಿಡಿದು ದೊಡ್ಡ ದೊಡ್ಡ ಅಪರಾಧಿಗಳು ಅನೇಕ ಬಾರಿ ಗೆಲುವನ್ನು ಸಾಧಿಸುತ್ತಾರೆ. ಜನರಿಗೆ ಇಡೀ ಸಮಾಜಕ್ಕೇ ಗೊತ್ತಿದೆ ಆತ ಅಪರಾಧಿಯೆಂಬುದು. ಆದರೂ ಬೆನಿಫಿಟ್ ಆಫ್ ಡೌಟ್‌ನ ಆಧಾರದ ಮೇಲೆ ಅನೇಕ ಬಾರಿ ಅಪರಾಧಿಗಳು ಈ ಅಡ್ಡದಾರಿಯಿಂದ ಸಲೀಸಾಗಿ ಆರೋಪಮುಕ್ತರಾಗಿ ಬಿಡುತ್ತಾರೆ. ನಮ್ಮಲ್ಲಿ ಬಹುತೇಕ ನಡೆಯುತ್ತಿರುವುದು ಇದೇನೇ ಆಗಿರುವ ಕಾರಣ ನ್ಯಾಯಾಂಗ ವ್ಯವಸ್ಥೆಯ ಮೇಲೆ ಜನರಿಗೆ ಅಂಥಾ ನಂಬಿಕೆಯೇನೂ ಉಳಿದಿಲ್ಲ. ಇದು ವಾಸ್ತವ.

ಓರ್ವ ಕೊಲೆಗಾರ ಎಲ್ಲರ ಸಮ್ಮುಖದಲ್ಲೇ ಕೊಲೆ ನಡೆಸಿದರೂ ಆ ದಿವಸ ಆತ ಬೇರೆಲ್ಲೋ ಇದ್ದ ಎಂಬ ಖೊಟ್ಟಿ ಪುರಾವೆಗಳನ್ನು ರಚಿಸಿಕೊಂಡು ಪ್ರತ್ಯಕ್ಷದರ್ಶಿ ಹಾಗು ಕೆಲ ಸಾಕ್ಷಿಗಳನ್ನು ಹಣ ಹಾಗು ತೋಳ್ಬಲಗಳಿಂದ ಬೆದರಿಸಿಟ್ಟು ಕೊಂಡರೆ ಜೊತೆಗೆ ದೂರುದಾರ ದುರ್ಬಲನಾಗಿದ್ದರಂತೂ ತನ್ನ ಮೇಲಿನ ಕೊಲೆ ಆರೋಪವನ್ನು ಹಳ್ಳಹಿಡಿಸುವುದು ಬಹಳ ಸುಲಭ. ಆದರಿಲ್ಲಿ ಮುಖ್ಯವಾಗಿ ಗಮನಿಸ ಬೇಕಾದಂತಹ ಸಂಗತಿಯೇನೆಂದರೆ ಇಂತಹ ಸಂದರ್ಭಗಳಲ್ಲಿ ಹೊರಬರುವಂತಹ ತೀರ್ಪುಗಳು ಆರೋಪಿತನು ಅಪರಾಧವನ್ನೇ ಮಾಡದ ನಿರ್ದೋಷಿಯೆಂದು ಸಾರಾ ಸಗಟಾಗಿ ಹೇಳದಿದ್ದರೂ ಆತನ ಅಪರಾಧ ಸಾಬೀತುಪಡಿಸಲಾಗದ ಕಾರಣ ಅವನ ಅಪರಾಧವನ್ನು ಒಪ್ಪಲಾಗದು ಎಂಬುವುದನ್ನಷ್ಟೇ ಅಲ್ಲಿ ಹೇಳಲಾಗುತ್ತದೆ. ಅಂದರೆ ಆತ ಅಪರಾಧಿಯೂ ಅಲ್ಲ, ಅದೇರೀತಿ ನಿರಪರಾಧಿಯೂ ಅಲ್ಲದ 'ಅದೃಷ್ಟವಂತ' ಅಷ್ಟೆ. ಅಂದರೆ ಆತ ಕೊಲೆ ಮಾಡಿರಬಹುದಾದರೂ ಹಾಗೆ ಘೋಷಿಸಲು ಅಥವ ಅದನ್ನು ಒಪ್ಪಿಕೊಳ್ಳಲು ಪೂರಕ ಸಾಕ್ಷಿಗಳ ಕೊರತೆ ಸಾಧ್ಯವಿಲ್ಲದಂತೆ ಮಾಡಿದೆ ಅಷ್ಟೆ.



ಒಂದು ತಿಂಡಿಯನ್ನೋ, ಸಿನಿಮಾವನ್ನೋ, ಬಟ್ಟೆಯನ್ನೋ ನೋಡಿ ಗಂಡ ಹೆಂಡತಿಗೆ ಒಳ್ಳೆಯದಿದೆ, ಕೆಟ್ಟದಾಗಿದೆ ಎನ್ನುವುದಲ್ಲದೇ ಮೂರನೇ ಬಗೆಯಲ್ಲೂ ಉತ್ತರಿಸಲು ಸಾಧ್ಯವಿದೆ. ಅದುವೇ 'ನಾಟ್ ಬ್ಯಾಡ್' ಎಂಬ ವಾಕ್ಯ. ಅಚೆಗೆ ಒಳ್ಳೆಯದೂ ಅನ್ನಲಿಕ್ಕಾಗದು, ಅದೇರೀತಿ ಕೆಟ್ಟದ್ದೂ ಅಂದಿರದ ಸ್ಥಿತಿ ಇದು. ಕೇಳಿಸಿಕೊಂಡಾತ/ಆಕೆ ಉತ್ತರವನ್ನು ಯಾವ ರೀತಿಯಲ್ಲೂ ಗ್ರಹಿಸಬಹುದಾದರೂ ಉತ್ತರ ಹೀಗೇ ಎಂದು ಎಲ್ಲೂ ಹೇಳಲಾಗದು. ಇದೇರೀತಿ ಬೆನಿಫಿಟ್ ಆಫ್ ಡೌಟ್‌ನ ಮೇಲೆ ಆರೋಪ ಮುಕ್ತರಾದವರ ಬಗ್ಗೆಯೂ ಆತ ನಿರ್ದೋಷಿಯೇ ಹೌದು ಎಂದು ಎದೆ ತಟ್ಟಿಕೊಂಡು ಯಾರಿಗೂ ಹೇಳಲು ಸಾಧ್ಯವೇ ಇಲ್ಲ, ಇದೊಂದು ಮೂರನೇ ದಾರಿಯ (ತೀಸ್ರಾ ರಾಸ್ತಾ) ಅಡ್ಡಗೋಡೆಯ ದೀಪದಂತಹ ತೀರ್ಮಾನವೇ ಹೊರತು ಆರೋಪಿತನ ನಿರ್ದೋಷಿತನಕ್ಕೆ ಇದು ಯಾವತ್ತಿಗೂ ರುಜುವಾತೆನಿಸಲಾರದು.

ಕಾರ್ತಿಕ್ ಗೌಡ ಕೇಸಿನಲ್ಲೂ ಟೆಲಿಫೋನ್ ಧ್ವನಿ ಪರೀಕ್ಷೆ ಮೊದಲಾದವುಗಳೆಲ್ಲ ಸಾಬೀತಾದರೂ ಮದುವೆ, ಅತ್ಯಾಚಾರ, ಅಕ್ರಮ ಸಂಬಂಧವನ್ನು ಸಾಬೀತುಪಡಿಸಲು ಸಾಕ್ಷ್ಯಾಧಾರಗಳು ಸಾಲದೇ ಕೇಸ್ ಬಿದ್ದುಹೋಗಿದ್ದನ್ನಿಲ್ಲಿ ಗಮನಿಸಬಹುದು.

ಪ್ರವಚನಗಳಲ್ಲಿ, ಟೀವಿ-ಪತ್ರಿಕೆಗಳಲ್ಲಿ ಆಚಾರಗಳ ಬಗ್ಗೆ ಜನರಿಗೆ ಬುದ್ಧಿಮಾತು ಉಪದೇಶಿಸುವ "ಅತಿ-ಆಚಾರ" (ಅತ್ಯಾಚಾರ) ವಂತ ರಾಘವೇಶ್ವರರ ಪ್ರಕರಣ ಜೀವ ಪಡೆದು ಆರಂಭದ ಒಂದು ಹಂತದಲ್ಲಿ ಸ್ವಾಮೀಜಿ ಪೀಠ ಬಿಟ್ಟು ಹಿಮಾಲಯ ತೆರಳುವ ಮಾತನ್ನಾಡಿದ್ದರು. ಬಳಿಕ ಸ್ವಾಮೀಜಿಯ ಫ್ರೀ ಪೈಡ್ ಬೆಂಬಲಿಗಳು ಘಟ್ಟಾದಂತೆಲ್ಲ ಇನ್ನಷ್ಟು ಧೈರ್ಯ ತಂದುಕೊಂಡ ಸ್ವಾಮೀಜಿ ಭಕ್ತರೆದುರು ತನ್ನ ಹುಸಿ ಬದ್ಧತೆಯನ್ನು ತೋರ್ಪಡಿಸಿಕೊಳ್ಳಲು "ನನ್ನ ಮೇಲಿನ ಆರೋಪ ಸಾಬೀತಾದರೆ ನಾನು ದೇಹತ್ಯಾಗ ಮಾಡುವೆ" ಎಂದೂ ಬಹಿರಂಗವಾಗಿ ಹೇಳಿಕೊಂಡಿದ್ದರು. "ಅತ್ಯಾಚಾರ" ಎಂಬ ಶಬ್ದ ಹಾಗು ಅದರ ಅರ್ಥಗಳು

ಮತ್ತದರ ವ್ಯುತ್ಪತ್ತಿಯ ಕುರಿತಾದ ವ್ಯಾಖ್ಯಾನ ವಿಚಾರಗಳ
ಬದಿಗಿಟ್ಟು ದಿ ಗ್ರೇಟ್ ಸನಾತನ ಹಾಗು ಸನ್ಯಾಸ ಧರ್ಮ
ನೀತಿ ಸಿದ್ಧಾಂತವನ್ನು ತೆಗೆದುಕೊಂಡರೆ ಸ್ವಾಮೀಜಿ
ದೇಹತ್ಯಾಗ ಮಾಡಲೇಬೇಕಾದಂತಹ ಪ್ರಮೇ
ಎದುರಾಗಿರುವುದಂತೂ ಸತ್ಯ.

ನ ಸಂಭಾಷೇತ್ ಸ್ತ್ರೀಯಂ ಕಾಂಚಿತ್
ಪೂರ್ವದೃಷ್ಟಾಂ ನ ಚ ಸ್ಮರೇತ್
ಕಥಾಂ ಚ ವರ್ಜಯೇತ್ ತಾಸಾಂ ನ
ಪಶ್ಯೇಲ್ಲಿಖಿತಾಮಪಿ
ಏತ ಚತುಷ್ಟಯಂ ಮೋಹಾತ್ ಸ್ತ್ರೀಣಾಂ
ಆಚರತೋ ಯತೇಃ
ಚಿತ್ತಂ ವಿಕ್ರಿಯತೇ ಅವಶ್ಯಂ ತದ್ವಿಕಾರಾತ್ ಪ್ರಣ

ಅಂದರೆ: ಯಾವುದೇ ಸ್ತ್ರೀಯ ಜೊತೆಗೆ ಸಂಭಾ
ಬಾರದು, ಹಿಂದೆ ಪರಿಚಿತವಾದ ಸ್ತ್ರೀಯನ್ನು ಆಗ
ನೆನಪಿಸಿಕೊಳ್ಳುತ್ತಿರಬಾರದು, ಸ್ತ್ರೀಯರ ಕುರಿತಾದ ಕಥೆಯಂ
ಯತಿಯಾದವರಿಗೆ ಸಂಪೂರ್ಣ ವರ್ಜ್ಯ. ಅಷ್ಟೇ
ಚಿತ್ತ ಚಾಂಚಲ್ಯವನ್ನು ತಪ್ಪಿಸಲು ಕಲಾವಿದ ರಚಿಸಿ
ಮಹಿಳೆಯ ಚಿತ್ರವನ್ನೂ ಯತಿಯಾದವ ನೋಡಬಾರದು
ಇವನ್ನು ಬಿಟ್ಟು ಸ್ತ್ರೀಯ ಆಕರ್ಷಣೆ ಗೊಳಗಾಗಿ ಈ ನಾಲ್ಕ
ಯತಿಯಾದವನು ಮಾಡ ಹೋದದ್ದೇ ಆದಲ್ಲಿ ಮನ
ಚಂಚಲಗೊಂಡು ಆ ಮನೋವಿಕಾರದಿಂದ ಯ
ಅಧೋಗತಿಯನ್ನು ಖಂಡಿತ ಹೊಂದುತ್ತಾನೆ.

ಯತಿ ಧರ್ಮದ ಬಗ್ಗೆ ಜಾಬಾಲ ಮಹರ್ಷಿ ಹೇಳ
ಕಟ್ಟುನಿಟ್ಟಿನ ನಿಯಮವಿದು.

ದೂರುದಾರಳನ್ನು ಇನ್ನಿಲ್ಲದಂತೆ ನಿಂದಿಸಿ ಸ್ವಾಮೀ
ಯನ್ನು 'ಎತ್ತರಕ್ಕೆ' ಕೊಂಡೊಯ್ದ ಮನೆಯಲ್ಲೇ ಮೂರ್ನಾ
ಜನ ಕೂತು ತಯಾರಿಸಿದಂತಿದ್ದ ತೀರ್ಪಿನ ಪ್ರಕಾರ
ಸ್ವಾಮೀಜಿ ಹಲವಾರು ಬಾರಿ ಲೈಂಗಿಕ ಸಂಬಂ
ನಡೆಸಿದಂತಹ ಉಲ್ಲೇಖ ಸ್ಪಷ್ಟವಾಗಿ (ಟೋಲ್ಡ್ ಲೆಟರ್‌ನ
ತೀರ್ಪಿನಲ್ಲಿದೆ. ಇಲ್ಲಿ ಅತ್ಯಾಚಾರದ ವಿಚಾರ ಬಿಟ್ಟರ
ಹೆಣ್ಣೊಂದಿಗೆ ಅದರಲ್ಲೂ ತಾಯಿಯ ವಯಸ್ಸಿನ;
ಇನ್ನೂ ಇರುವ ವಿವಾಹಿತ ಸ್ತ್ರೀಯೊಂದಿಗೆ ಹಲವು ಬಾ
'ಸೇರಿದ್ದ' ಸ್ವಾಮೀಜಿಯ ಸ್ತ್ರೀ ಸಂಗದ ಕಳಂಕವಂತೂ (ತೀರ್ಪಿ
ಪ್ರಕಾರ ಪರಸ್ಪರ ಒಪ್ಪಿತ ಲೈಂಗಿಕ ಸಂಬಂಧ) ಸಾಬೀತಾ
ಹೋದಕಾರಣ ರಾಘವನಿಗೆ ದೇಹತ್ಯಾಗ ಬಿಟ್ಟರೆ ಬೇ
ದಾರಿಯಂತೂ ಉಳಿದಿಲ್ಲ.

ಸ್ವಾಮೀಜಿಯನ್ನು ರಕ್ಷಿಸಲು ತೀರ್ಪಿನಲ್ಲಿ ಆಧುನಿ
ಜೀವನಶೈಲಿಯ ಹೆಣ್ಣಿನ ಮೇಲೆ ಅತ್ಯಾಚಾರವು ಹಲ
ಬಾರಿ ನಡೆಯುವುದು ಅಸಾಧ್ಯದ ಸಂಗತಿ ಎಂಬಂತ
ವಿಚಾರ ಪ್ರಸ್ತಾಪಿಸಲ್ಪಟ್ಟಿದೆ. ಪ್ರೇಮಲತಾ ಜೀನ್ಸ್ ಪ್ಯಾಂ
ತೊಟ್ಟರಲಿ, ಕರಾಟೆ, ಕುಂಗ್ ಫೂ ಚಾಂಪಿಯನ್ನೇ ಆಗಿರ
ಅವೆಲ್ಲಕ್ಕೂ ಮುಖ್ಯವಾಗಿ ಆಕೆ ಓರ್ವ ಹೆಣ್ಣೆಂಬುವುದ
ಗಮನಿಸಲೇಬೇಕಾದ ಸಂಗತಿ. ಹಣೆಗೆ ಕುಂಕುಮವಿಟ್ಟ
ಸೀರೆಯುಟ್ಟವಳಿಗೆ ಮಾತ್ರ ಸ್ತ್ರೀ ಸಹಜ ಭಾವನೆಗಳ
ಮುಗ್ಧತೆಗಳು ಇರುತ್ತವೆ; ಮಾಡರ್ನ್ ಹೆಣ್ಣು ಅದರಿಂ
ದೂರ ಎನ್ನುವುದು ಬಾಲಿಶವಾದಂತಹ ತೀರ್ಮಾನ.

ಗುರುಗಳನ್ನು, ದೇವಮಾನವ ಸ್ವಾಮೀಜಿಗಳನ್ನು
ಸ್ವಯಂದೇವರೆಂದೇ ಭಾವಿಸುವಲ್ಲಿ ವಿದ್ಯಾವಂತರೇ ಹೆಚ್ಚು
ಈ ಪ್ರಕರಣದಲ್ಲಿ 'ಕಳ್ಳಾಟ'ವಂತೂ ನಡೆದಿದೆಯೆಂದು
ತೀರ್ಪಿನಲ್ಲೇ ಉಲ್ಲೇಖಿಸಲಾಗಿದೆ. ಜನಸಾಮಾನ್ಯರಂ
ಸಾರ್ವಜನಿಕವಾಗಿ ಬೇಕಾಬಿಟ್ಟಿ ತಿರುಗಾಡಲಾಗದ ಹಲವಾರ
ಕಟ್ಟುಪಾಡುಗಳಿಂದ ಬಂಧಿಯಾಗಿರುವ ಸ್ವಾಮಿತ್ವ
ಆರೋಪಿತನಿಗೂ ತನ್ನ ಆಸೆಆಕಾಂಕ್ಷೆಗಳನ್ನು ಪೂರೈಸಿಕೊಳ್ಳಲು
ರಾಮಭಕ್ತಿ-ಗುರುಪಾಪಗಳ ನಾಟಕವಾಡಲೇಬೇಕಾದ ಪರಿಸ್ಥಿ

ಎದುರಾದರೆ ಅದು ಅಚ್ಚರಿಯ ಸಂಗತಿಯೇನಲ್ಲ. ಒಮ್ಮೆ 'ರುಚಿ' ಅನುಭವಿಸಿದ ವ್ಯಕ್ತಿಯಿಂದ ಹಲವು ಬಾರಿ ಇದರ ಪುನರಾವರ್ತನೆಯೂ ಖಂಡಿತಾ ಸಾಧ್ಯವಿದ್ದೇ ಇದೆ. ಅದುಮಿಟ್ಟುಕೊಂಡ ಆಸೆಯ ಪ್ರಭಾವಗಳು ಸಹಜತೆಗಿಂತ ಅಧಿಕವಿರುತ್ತದೆನ್ನುವುದನ್ನ ಮನಶಾಸ್ತ್ರಜ್ಞರೇ ಒಪ್ಪಿಕೊಳ್ಳುತ್ತಾರೆ. ಲೈಂಗಿಕ ಸಂಬಂಧದ ಕುರಿತಾಗಿ ಸ್ವಾಮೀಜಿಗಳಂತೆ ಯಾವ ಕಟ್ಟುಪಾಡುಗಳೂ ಇರದ ಒಬ್ಬ ತಂದೆಯೇ ಮಗಳ ಮೇಲೆ, ಗುರುವೇ ಶಿಷ್ಯೆಯ ಮೇಲೆ ಹಲವಾರು ಬಾರಿ ಅತ್ಯಾಚಾರ ನಡೆಸಿದ ಪ್ರಕರಣಗಳು ಅಲ್ಲಲ್ಲಿ ಆಗಾಗ ಕೇಳಿಬರುವಂತೆ, ಇಲ್ಲಿ ಹೆಣ್ಣಿಗೆ ನೀನೇ ತಿರುಗಿ ತಿರುಗಿ ಆತನ ಬಳಿಹೋದದ್ದು ನಿನ್ನ ಬಯಕೆಯನ್ನೇ ಎತ್ತಿ ತೋರಿಸುತ್ತದೆ ಎಂದು ಕೇವಲ ಒಂದೇ ಮಾತಿನಲ್ಲಿ ತಿಪ್ಪೆ ಸಾರಿಸಿ ಹೇಳಲು ಬರುವುದಿಲ್ಲ, ಯಾಕೆಂದರೆ ಇಲ್ಲಿ ಸ್ವಾಮಿ, ತಂದೆ, ಗುರು ತನ್ನ 'ಕಾಮನೆ'ಯನ್ನು ಪೂರೈಸಿಕೊಳ್ಳಲು ತನ್ನದೇ ರೀತಿಯಲ್ಲಿ 'ಮಿಕ'ವನ್ನು ಸರಿಯಾಗೇ 'ಪಳಗಿಸಿ'ಕೊಂಡಿರುತ್ತಾನೆ. ಅದು ನಯವಾದ ಮಾತಿನಿಂದ ಇರಬಹುದು, ಬೆದರಿಕೆಗಳ ಮೂಲಕವ್ರೂ ಇರಬಹುದು.

ಸಂತ್ರಸ್ತ ಹೆಣ್ಣು ಅದು ಯಾರೇ ಆಗಿರಲಿ ನ್ಯಾಯ ಹಾಗು ಸತ್ಯಕ್ಕೆ ಗೆಲುವು ಸಿಗಲೇ ಬೇಕಿದೆ. "ಸತ್ಯಮೇವ ಜಯತೆ ನಾನೃತಂ" (ಸತ್ಯವೇ ಗೆಲ್ಲುವುದು ಸುಳ್ಳಲ್ಲ) ಎಂಬ ಉಪನಿಷದ್ ವಾಕ್ಯವನ್ನು ಮಾನ್ಯ ಮಾಡಿದಂತಹ ನಾಡಲ್ಲವೇ ನಮ್ಮದು?

-ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಮುದುಡಿದ ತಾವರೆ ಅರಳಿದೆ



ಸಂತೆಯಲ್ಲಿ ಹಾವಾಡಿಗ ಮುಂಗುಸಿ ಜೊತೆ ಜಗಳಕ್ಕೆ ಹಾವನ್ನು ಬಿಡ್ತೀನಿ ಅಂತ ಪುಂಗಿ ಊದುತ್ತಾ ಇನ್ನೂ ಜನ ಜಮಾಯಿಸಲಿ ಅಂತ ಈಗಾಗಲೇ ಜಮಾಯಿಸಿದ ಜನರನ್ನು ಗಂಟೆಗಟ್ಟಲೇ ಹಿಡಿದಿಟ್ಟುಕೊಂಡು ಕೊನೆಗೆ ಕಾಸು ವಸೂಲಿ ಮಾಡಿ ಬಂಡವಾಳ ಮಾಡಿಕೊಳ್ಳುತ್ತಾನೆ. ನಂತರ ಜಾಗ ಖಾಲಿ ಮಾಡುತ್ತಾನೆ. ಜನರ ಭ್ರಮಾವೇಶದ ಸಾಮೂಹಿಕ ಸುಪ್ತ ಪ್ರಜ್ಞೆಯನ್ನು ಜಾಗೃತಗೊಳಿಸುವ ಕಲೆ ನಮ್ಮ ರಾಜಕೀಯ ನಾಯಕರಿಗೆ ಕರತಲಾಮಲಕ.

ಈ ಆಟ ಹೇಗೆಂದರೆ, ನಮ್ಮ ರಾಜಕಾರಣಿಗಳು ಜನರನ್ನು ಮರುಳುಗೊಳಿಸಿ (ಮಂಕುಬೂದಿ ಎರಚಿ) ಅಧಿಕಾರವನ್ನೇ ಬಂಡವಾಳ ಮಾಡಿಕೊಳ್ಳುತ್ತಾರೆ. ಅರಳಿದ ಕೆಂದಾವರೆಯ ಅರವಿಂದದಂತಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಬಿಜೆಪಿಯ ನೂತನ ರಾಜ್ಯಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುತ್ತಾ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡುತ್ತಾ "ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರದ ಹಲವಾರು ಹಗರಣಗಳು ಇನ್ನು ಒಂದು ತಿಂಗಳಲ್ಲಿ ಬಯಲಾಗಲಿದೆ. ಆನಂತರ ಅವರು ಮುಖ್ಯಮಂತ್ರಿಯಾಗಿ ಮುಂದುವರೆಯಲು ಕಷ್ಟವಾಗುತ್ತದೆ" ಎಂದಿದ್ದಾರೆ.

ಯಡ್ಡಿ ಮಾತಿಗೆ ತಿರುಗೇಟನಂತೆ ಹೈಕೋರ್ಟ್‌ನಲ್ಲಿ ಯಡಿಯೂರಪ್ಪನವರ ವಿರುದ್ಧ ದಾಖಲಾಗಿದ್ದ ಕೇಸುಗಳು ಖುಲಾಸೆಯಾದ ಹಿನ್ನೆಲೆಯಲ್ಲಿ ಉಳಿದಿರುವ ಕೇಸುಗಳನ್ನು ಸುಪ್ರೀಮ್ ಕೋರ್ಟ್‌ನಲ್ಲಿ ಪ್ರಶ್ನಿಸುತ್ತೇವೆ ಎಂದು ಕಾಂಗ್ರೆಸ್ಸಿನ ಕಾನೂನು ಪಂಡಿತರು ಹೇಳುತ್ತಾರೆ. ಡೀ ನೋಟಿಫಿಕೇಶನ್‌ಗಳು, ಅರ್ಕಾವತಿ ಹಗರಣಗಳು, ಬಳ್ಳಾರಿಯ ಧೂಳಿನ ಹಗರಣಗಳು ಇತ್ಯಾದಿಗಳಲ್ಲಿ ಅಧಿಕಾರ ಪ್ರಭಾವಳಿಗಳ ಪ್ರಬಲತೆ, ಸಬಲತೆ, ದುರ್ಬಲತೆ ಲೆಕ್ಕಾಚಾರದಲ್ಲಿ ಬುಟ್ಟಿಯಲ್ಲಿರುವ ಹಾವನ್ನು ಮುಂಗುಸಿಯ ಮೇಲಿನ ಜಗಳಕ್ಕೆ ಯಾವಾಗ ಬಿಡುತ್ತಾರೋ ಎಂದು ಕಾದು ನೋಡುವ ಮನರಂಜನೆಯ ಸ್ಥಿತಿ ಮಾತ್ರ ಪ್ರೇಕ್ಷಕರ ರೂಪದಲ್ಲಿರುವ ಜನರದ್ದು. ನಮ್ಮ ಹೆಮ್ಮೆಯ ಪ್ರಜಾಪ್ರಭುತ್ವದ ಚದುರಂಗದ ಆಟ ಹೇಗಿದೆ ನೋಡಿ.

- ಆರ್.ಎನ್. ಸತ್ಯನಾರಾಯಣರಾವ್, ಮೈಸೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ನೋಡಿದ್ರಾ ಸಾರ್ ಈ ಕಳ್ಳ ಬಡ್ಡೀಮಕ್ಳು ಸಾಬ್ರು



ಕಳೆದ ಎಂಬತ್ತರ ದಶಕದ ಮಾತು. ಇಂಜಿನಿಯರಿಂಗ್ ಉತ್ತರ ಪತ್ರಿಕೆಗಳ ಮೌಲ್ಯಮಾಪನ ನಡೆಯಬೇಕಿತ್ತು. ಆಗ ಕೇಂದ್ರ ಮೌಲ್ಯಮಾಪನ ವ್ಯವಸ್ಥೆ ಜಾರಿಯಲ್ಲಿತ್ತು. ಒಂದೊಂದು ವರ್ಷ ಒಂದೊಂದು ಕಾಲೇಜಿನವರು ಈ ಜವಾಬ್ದಾರಿಯನ್ನು ನಿರ್ವಹಿಸಬೇಕಿತ್ತು. ಆ ವರ್ಷ ಮೈಸೂರಿನ ಜೆಸಿಇ ಕಾಲೇಜು ಆ ಕರ್ತವ್ಯ ಮಾಡಬೇಕಿತ್ತು.

ಮೌಲ್ಯ ಮಾಪನದ ದಿನ ಬಂತು. ಪರೀಕ್ಷಕರು ತಂಡತಂಡವಾಗಿ ಕಾಲೇಜಿಗೆ ಬರುತ್ತಿದ್ದರು. ಕಾಲೇಜು ಆವರಣದಲ್ಲಿ ಹೆಬ್ಬಾಗಿಲಿನ ಬಳಿಯೇ ಹೊಸದಾಗಿ ಒಂದು ದೇವಸ್ಥಾನವನ್ನು ನಿರ್ಮಿಸಿದ್ದರು. ಅದರಲ್ಲಿ ವಿಘ್ನೇಶ್ವರನ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದರು. ಮೌಲ್ಯಮಾಪನಕ್ಕೆ ಬಂದ ಹಲವರು ದೇವಸ್ಥಾನವನ್ನು ಕಂಡು ಪುಳಕಿತರಾದಂತೆ ಕಂಡುಬಂದರು. ತಮ್ಮ ಪಾದರಕ್ಷೆಯನ್ನು ತೆಗೆದು ರಸ್ತೆಯಿಂದಲೇ ದೇವರಿಗೆ ಭಕ್ತಿಯಿಂದ ಕೈ ಮುಗಿಯುವುದು ಸಾಮಾನ್ಯ ಆಗಿತ್ತು. ಅವತ್ತೂ ಹಾಗೇ ಆಯಿತು. ಇಂತಹದ್ದೆಲ್ಲವನ್ನೂ ಮುಗಿಸಿ ಮೌಲ್ಯಮಾಪನಕ್ಕೆ ಕುಳಿತಾಗ ಸಹ ಮೌಲ್ಯಮಾಪಕರು 'ಸ್ವಾಮಿಗಳು ಒಳ್ಳೆಯ ಕೆಲಸ ಮಾಡಿದ್ದಾರೆ. ದೇವರ ದರ್ಶನ ಮಾಡಿದ ಮೇಲೆ ಮನಸ್ಸು ಪ್ರಶಾಂತ ಆಯಿತು. ಈಗ ನೆಮ್ಮದಿಯಿಂದ ಉತ್ತರ ಪತ್ರಿಕೆಗಳಿಗೆ ನ್ಯಾಯ ಒದಗಿಸಬಹುದು' ಎಂದು ಉದ್ಗರಿಸಿದರು.

ಇದಾದ ಸುಮಾರು ಒಂದು ತಿಂಗಳ ನಂತರ ನಾನೂ ಅವರೂ ರಾಮನಗರದಲ್ಲಿರುವ ಗೌಸಿಯಾ ಇಂಜಿನಿಯರಿಂಗ್ ಕಾಲೇಜಿಗೆ ಪ್ರಾಯೋಗಿಕ ಪರೀಕ್ಷೆ ನಡೆಸಲು ಹೋಗಿದ್ದೆವು. ಆಗಿನ್ನೂ ಆಡಳಿತ ಕಚೇರಿ ಕಟ್ಟಡ ಬಂದಿರಲಿಲ್ಲ. ರಸ್ತೆಯಿಂದ ಬಹುಹಿಂದೆ ಕಾರ್ಯಾಗಾರದ (workshop) ಕಟ್ಟಡಗಳಿದ್ದವು. ಅದಾದನಂತರ ಒಂದು ಮಸೀದಿ ಇತ್ತು. ನನ್ನ ಸಹಪರೀಕ್ಷಕರು ಪಿಸು ದನಿಯಲ್ಲಿ "ನೋಡಿದ್ರಾ ಸಾರ್, ಈ ಕಳ್ಳ ಬಡ್ಡಿ ಮಕ್ಳು ಸಾಬ್ರು. ಎಲ್ಲೋದ್ರು ಜಾತಿ ಬುದ್ಧಿ ಬಿಡಲ್ಲ. ಕಾಲೇಜಲ್ಲಿ ಮಸೀದಿ ಕಟ್ಟಿಸವ್ರಲ್ಲ ಸಾರ್" ಎಂದು ಉಸುರಿದರು!

ಗಣೇಶನ ಗುಡಿ ಮನಸ್ಸಿಗೆ ಶಾಂತಿ ದೊರಕಿಸುವ ಸ್ಥಳವಾಗಿ ಅವರಿಗೆ ಗೋಚರಿಸಿದ್ದರೆ ಮಸೀದಿ ಸಾಬರ ಇಕ್ಮತ್ತಾಗಿ ಕಂಡಿತ್ತು!

ಕಾಲೇಜು ಎಂದಮೇಲೆ ಹಲವು ಧರ್ಮೀಯರು ವ್ಯಾಸಂಗ ಮಾಡುವ ಸ್ಥಳ. ಅಲ್ಲಿ ಯಾವುದೇ ಒಂದು ಧರ್ಮದ ಸಂಕೇತ ಇರಬಾರದು. ನಾವು ಅಧಿಕ ಸಂಖ್ಯೆಯಲ್ಲಿದ್ದೇವೆ ಎಂದು ಯಾವುದೇ ಧರ್ಮೀಯರು ತಮ್ಮ ಧರ್ಮದ ಸಂಕೇತವನ್ನು ಪ್ರದರ್ಶಿಸುವುದು ಅಧರ್ಮ. ಜಗದ್ಗುರುಗಳಾಗಲಿ, ಮೌಲ್ವಿಗಳಾಗಲಿ, ಪಾದರಿಗಳಾಗಲಿ ತಮ್ಮ ಆಡಳಿತವಿರುವ ಕಾಲೇಜುಗಳಲ್ಲಿ ಹಾಗೆ ಮಾಡುವುದು ನನಗೆ ಒಪ್ಪಿಗೆಯಾಗದ ಸಂಗತಿ ಎಂದು ನನ್ನ ಅಭಿಪ್ರಾಯವನ್ನು ಅವರಿಗೆ ತಿಳಿಸಿದೆ.

ನನಗಾದ ಈ ಅನುಭವವನ್ನು ಅಂದಿನ ಲಂಕೇಶ್ ಪತ್ರಿಕೆಯಲ್ಲಿ ಹಂಚಿಕೊಂಡಿದ್ದೆ. ಮತ್ತೆ ಇದನ್ನು ಹೇಳಲು ಕಾರಣ ಇದೆ.

ಕಾಶ್ಮೀರದ ಎನ್‌ಐಟಿ (ರಾಷ್ಟ್ರೀಯ ತಾಂತ್ರಿಕ ಸಂಸ್ಥೆಯಲ್ಲಿ ಪ್ರಕ್ಷುಬ್ಧ ವಾತಾವರಣ ಇದೆ. ಇದನ್ನು ಉದ್ದೇಶಪೂರ್ವಕವಾಗಿ ಸೃಷ್ಟಿ ಮಾಡಿದ್ದರೂ ಮಾಡಿರಬಹುದು. ಇರಲಿ, ಆ ವಿದ್ಯಾಸಂಸ್ಥೆಯಲ್ಲಿ ಸ್ಥಳೀಯ ವಿದ್ಯಾರ್ಥಿಗಳು ಇರುವುದು ಶೇಕಡ 25 ಮಾತ್ರ. ಉಳಿದವರು ಹೊರಗಿನವರು. ಸಾಮಾನ್ಯವಾಗಿ ಇಂತಹ ಸಂದರ್ಭಗಳಲ್ಲಿ ಇವರಿಬ್ಬರಿಗೂ ವೈಮನಸ್ಸು ಇರಲು ನೂರೆಂಟು ಕಾರಣಗಳು ಇರುತ್ತವೆ. ಅಂತಹವುಗಳಲ್ಲಿ ಯಾವುದೋ ಇದಕ್ಕೆ ಕಾರಣ ಇರಬಹುದು. ನನಗೆ ನೋವನ್ನುಂಟು ಮಾಡಿದ್ದು ಹೊರ ರಾಜ್ಯಗಳ ವಿದ್ಯಾರ್ಥಿಗಳ ಬೇಡಿಕೆ. ಅವು ಯಾವುವು ಎಂದರೆ:

1. ಎನ್‌ಐಟಿಯನ್ನು ಜಮ್ಮುವಿಗೆ ಸ್ಥಳಾಂತರಿಸಬೇಕು. ವಿದ್ಯಾಸಂಸ್ಥೆಯನ್ನು ಯಾವುದೇ ಸ್ಥಳದಲ್ಲಿ ಪ್ರಾರಂಭಿಸಲು ಹಲವಾರು ವಿಷಯಗಳನ್ನು ಪರಿಶೀಲಿಸಲಾಗುತ್ತದೆ. ಪ್ರಾಯಶಃ ಇಲ್ಲೂ ಹಾಗೇ ಮಾಡಲಾಗಿರುತ್ತದೆ. ಇದನ್ನು ಪರಿಗಣಿಸದೆ ಏಕಾಏಕಿ ಸ್ಥಳಾಂತರಿಸುವಂತೆ ಮುಷ್ಕರ ನಿರತರಾಗುವುದು ಎಷ್ಟು ಸಾಧು?

2. ಕಾಲೇಜಿನ ಆವರಣದಲ್ಲಿ ದೇವಸ್ಥಾನ ನಿರ್ಮಿಸಬೇಕು!

ಇಂತಹ ಬೇಡಿಕೆಗಳಿಗೆ ಮಾನವ ಸಂಪನ್ಮೂಲ ಮಂತ್ರಿಯ ಬೆಂಬಲ ಇರುವಂತಿದೆ.

ಇದನ್ನೆಲ್ಲ ನೋಡಿದಾಗ 'ಎಲ್ಲಾ ವಿದ್ಯಾಸಂಸ್ಥೆಗಳಲ್ಲೂ ದೇವಾಲಯ ನಿರ್ಮಾಣ ಕಡ್ಡಾಯ' ಎಂಬ ಸುತ್ತೋಲೆ ಮಾನವ ಸಂಪನ್ಮೂಲ ಇಲಾಖೆಯಿಂದ ಬರುವುದು ದೂರ ಇಲ್ಲ ಅನ್ನಿಸುತ್ತಿದೆ.

ಇದು ದೇಶದ ದುರಂತ.

ಮುದ್ರಣ ಮಾಧ್ಯಮದ ಅಳಿಲುಸೇವೆ!

ಅಭಿನಂದಿಸಬೇಕು ಕಣ್ರೀ ಮುದ್ರಣ ಮಾಧ್ಯಮಾನ. ಯಾವುದಕ್ಕೆ ಅಂದ್ರಾ! ಹಿಂದೂ ಧರ್ಮ ಉಳಿಸೋಕೆ ಅವರು ಮಾಡಿರೋ ಅಳಿಲುಸೇವೆಗೆ ಕಣ್ರಿ! ಅದ ಮಾಡಾಕೆ ಶಾನೆ ಕಷ್ಟ ಪಟ್ಟದೆ ಅದು. ಅದೇನಂತಹ ಕಷ್ಟ ಅಂದ್ರಾ? ಯುವಪ್ರೇಮಿಗಳು ರಿಜಿಸ್ಟರ್ ಮದುವೆ ಆಗಬೇಕು ಅಂದ್ರೆ ಮೊದ್ಲೇ ಅರ್ಜಿ ಬರೀಬೇಕು. ನಾವು ಇಂತಿಂತೋರು ಹಿಂಗಿಂಗೆ ಮದ್ವೆ ಆಗಬೇಕು ಅಂತಿದೀವಿ ಅಂತೆಲ್ಲ ಅದ್ರಲ್ಲಿ ತಿಳಿಸಬೇಕು. ಆಗ ಆಫೀಸರು ಏನು ಮಾಡ್ತಾನೆ ಅಂದ್ರೇ ಹಿಂಗಿಂಗೆ ಇಂತೋರಿಂತೋರು ಮದ್ವೆ ಆಯ್ತಾ ಅವ್ರೆ. ಯಾರ್ದಾದ್ರೂ ಆಕ್ಷೇಪಣೆ ಇದ್ದರೆ ಇಂತಹ ದಿನದೊಳಗೆ ತಿಳಿಸಬೇಕು ಅಂತಾವ ಬರ್ದು ನೋಟಿಸ್ ಬೋರ್ಡ್‌ಗೆ ಹಾಕ್ತಾನೆ. ಇಂತೋವ್ರ ಹತ್ತಾರು ಮದ್ವೆಗಳು ಆಗ್ತಾನೆ ಇರ್ತವಾದ್ದರಿಂದ ಯಾವ್ನೋನೂ ಆ ಕಡೆ ಕುಡಿನೋಟಾನೂ ಬೀರಲ್ಲ. ಅದು ಎಲ್ಲೂ ಸುದ್ದೀನೂ ಆಗಲ್ಲ. ಇದು ನಡೆದುಕೊಂಡು ಬಂದಿರೋ ರೀತಿ.

ಮದ್ದೂರಲ್ಲೂ ಹಂಗೇ ಆಗದೆ. ಯಾವುದೋ ಯುವಜೋಡಿ. ಒಂದೇ ಬೀದೀಲಿ ಇದ್ದರಂತೆ. ಹಲವಾರು ವರ್ಷಗಳಿಂದ ಪ್ರೀತಿಸುತ್ತಿದ್ದರಂತೆ. ಮದುವೆ ಆಗಬೇಕೂಂತ ಅರ್ಜಿ ಹಾಕವ್ರೆ. ಆದೇನಾಗದೆ ಹುಡುಗಿ ಒಕ್ಕಲಿಗರೋಳಂತೆ. ಹುಡುಗ ಮುಸಲ್ಮಾನನಂತೆ. ಸಾಹೇಬ್ರು ಇದನ್ನೂ ನೋಟಿಸ್ ಬೋರ್ಡ್‌ಗೆ ಹಾಕವ್ರೆ. ಅದ ನೋಡಿ ಹಿಂದೂ ಹೃದಯ ಹಂಗೇ ಒದ್ದಾಡಿರಬೇಕು. ಇದೇನಯ್ಯಾ ಇದು ಹಿಂದೂ ಹೆಣ್ಣು ಮಗಾನ ಯಾರೋ ಸಾಬಿ ಹೊಡ್ಕೊಂಡೋಯ್ತಾ ಅವ್ನಲ್ಲ ಅಂತೆಲ್ಲ ಅವನ ಜೀವ ವಿಲವಿಲಾಂತ ಒದ್ದಾಡಿರಬೇಕು. ಅದ್ಕೇನು ಮಾಡವ್ನೆ ಈ ತರಕ್ಕೆ ಈ ತರ ಮದುವೆ ಆಯ್ತಾ ಅವ್ರೆ ಅಂತ ಪತ್ರಿಕಾ ವರದಿಗಾರನಿಗೆ ಸುದ್ದಿ ಮುಟ್ಟಿಸಿರಬೇಕು. ಅವುದ್ದೂ ಹಿಂದೂ ಜಾಯಮಾನವೇ ಅಲ್ವಾ. ಅರೆ ಇವನಮ್ಮನ್ ಹಿಂಗೆಲ್ಲ ಮಾಡ್ತಾ ಅವ್ರೆ ಅಂತ ಪತ್ರಿಕೆಗಳಲ್ಲಿ ಸುದ್ದಿ ಬರದವ್ರೆ. ಸುದ್ದಿ ಮಾಡೋದು ನಮ್ಮ ಕರ್ತವ್ಯ ಅನ್ನೊ ಗುರಾಣಿ ಹಿಡ್ದೇ ಹಿಂಗೆ ಮಾಡವ್ರೆ ಅನ್ನಿ. ಪತ್ರಿಕೆಗಳು ಇಂತಹವುಗಳನ್ನೂ ಮಾಡುವುದಕ್ಕೇ ನಾವಿರೋದು ಅನ್ನೋ ಹಂಗೆ ಪ್ರಕಟಗೊಳಿಸಿವೆ ಅನ್ನಿ. ಅದಕ್ಕೇ ಅವರಿಗೆ ಅಭಿನಂದನೆ ಸಲ್ಲಿಸಿದ್ದು!

ಆಮೇಲೇನಾಯ್ತು ಅಂತೀರಿ. ಬೆಳಗ್ಗೆ ಇದು ಸುದ್ದಿ ಆಗದೆ. ಸಂಜೆ ಹೊತ್ತಿಗೆ ಆ ಹುಡುಗ ಹುಡುಗಿಗೆ ಜ್ಞಾನೋದಯ ಆಗದೆ. ಯಾರೂ ಒತ್ತಾಯ ಮಾಡ್ತಿಲ್ಲ. ದೇವ್ರಾಣೆ ಸಂಘ ಪರಿವಾರದವರು ಹೆದರಿಸಿಲ್ಲ. ಇಂತಹ ನೀಚತನ ಅವರಿಗಿಲ್ಲ ಕಣ್ರೀ. ತಾವೇ ಸ್ವಯಂಪ್ರೇರಣೆಯಿಂದ ಮದುವೆಗಾಗಿ ಕೊಟ್ಟಿದ್ದ ಅರ್ಜಿಯ ಹಿಂಪಡೆದವ್ರೆ!

ಹುಡುಗಹುಡುಗಿ ಕತೆ ಏನಾರ ಆಗ್ಲಿ ಕಣ್ರೀ. ಅದು ಮುಖ್ಯ ಅಲ್ಲ. ಹಿಂದೂ ಧರ್ಮಕ್ಕೆ ಆಗುತ್ತಿದ್ದ ನಷ್ಟನ ತಪ್ಪಿಸಿದಲ್ಲ ಅದು ಮುಖ್ಯ. ಮುದ್ರಣ ಮಾಧ್ಯಮದ ಇಂತಹ ಮಹತ್ತರ ಕೊಡುಗೆಯನ್ನು ಮರೆಯುವಂತೆಯೇ ಇಲ್ಲ ಅಲ್ವಾ....!

■ ಎಚ್ಚೆಲ್ಕೆ

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 04-05-2016 RNI No. KARKAN



ಶಿವಣ್ಣನಿಗೆ ವರ್ಮಾ ಕೈಕೊಟ್ಟಿಲ್ಲವಂತೆ

ರಾಮ್‌ಗೋಪಾಲ್ ವರ್ಮಾ ನಿರ್ದೇಶನದ 'ಕಿಲ್ಲಿಂಗ್ ವೀರಪ್ಪನ್' ಸಿನಿಮಾ ಹಿಂದಿಯಲ್ಲೂ ರೆಡಿ ಆಗಿದೆ. ಕನ್ನಡದಲ್ಲಿ ತಯಾರಾಗಿದ್ದ ಈ ಚಿತ್ರದಲ್ಲಿ ಶಿವರಾಜ್‌ಕುಮಾರ್ ನಟಿಸಿದ್ದರು. ಹಿಂದಿಯಲ್ಲಿ ಇವರ ಪಾತ್ರವನ್ನು ಬೇರೊಬ್ಬರು ನಿರ್ವಹಿಸಿದ್ದಾರೆ. ಹೀಗಾಗಿ ಶಿವಣ್ಣನಿಗೆ ನಿರ್ದೇಶಕ ವರ್ಮಾ ಕೈಕೊಟ್ಟಿದ್ದಾರೆ ಅನ್ನುವ ಮಾತು ಎಲ್ಲಾ ಕಡೆ ಕೇಳಿಬರುತ್ತಿದೆ. ಸ್ವತಃ ಶಿವರಾಜ್‌ಕುಮಾರ್ ಕೂಡ ವರ್ಮಾ ಬಗ್ಗೆ ಬೇಸರಗೊಂಡವರಂತೆ ಮಾತಾಡಿದ್ದಾರೆ. ಎಲ್ಲದಕ್ಕೂ ಉತ್ತರ ಕೊಟ್ಟಿದ್ದಾರೆ ವರ್ಮಾ. ತಾವು ಹಿಂದಿಯಲ್ಲಿ ಈ ಚಿತ್ರ ಮಾಡಿದರೆ, ಶಿವರಾಜ್‌ಕುಮಾರ್ ನಟಿಸುತ್ತಾರೆ ಅಂತ ಯಾವತ್ತೂ ಹೇಳಿಲ್ಲ ಅಂದಿದ್ದಾರೆ.

"ಕಿಲ್ಲಿಂಗ್ ವೀರಪ್ಪನ್' ಸಿನಿಮಾ ಮಾಡುವಾಗಲೇ ನಾನು ಈ ಕುರಿತು ಮಾತಾಡಿದ್ದೇನೆ. ಇದು ಕನ್ನಡದಲ್ಲಿ ನಿರ್ಮಾಣ ಆಗುತ್ತದೆ. ತಮಿಳು ಮತ್ತು ತೆಲುಗಿಗೆ ಡಬ್ ಮಾಡುತ್ತೇನೆ. ಹೀಗಾಗಿ ಕನ್ನಡದಲ್ಲಿ ನಟಿಸಿದ ಕಲಾವಿದರೇ ಇರುತ್ತಾರೆ. ಹಿಂದಿಯಲ್ಲಿ ಚಿತ್ರ ಮಾಡುವಾಗ ಬದಲಾವಣೆ ಮಾಡಿಕೊಳ್ಳುತ್ತೇನೆ. ಸ್ಕ್ರಿಪ್ಟ್‌ನಲ್ಲೂ ಸಾಕಷ್ಟು ಚೇಂಜ್ ಮಾಡಿರುತ್ತೇನೆ ಅಂತ ಹೇಳಿದ್ದೆ. ಕನ್‌ಫ್ಯೂಶನ್ ಮಾಡಿಕೊಂಡವರು ನನ್ನ ಮೇಲೆ ಗೂಬೆ ಕೂರಿಸಿದ್ದಾರೆ" ಅಂತಾರೆ ವರ್ಮಾ. ಕನ್‌ಫ್ಯೂಶನ್ ಮಾಡಿಕೊಂಡಿದ್ದು ಯಾರು ಅಂತ ವರ್ಮಾ ಬಾಯಿಬಿಟ್ಟಿಲ್ಲ. ಹಿಂದಿಯಲ್ಲಿ 'ವೀರಪ್ಪನ್' ರಿಲೀಸ್ ಆಗುವ ವೇಳೆಯಲ್ಲಿ ಹೆಸರು ಬಹಿರಂಗಗೊಳ್ಳಬಹುದು. ವರ್ಮಾಗೂ ಒಂಚೂರು ಪ್ರಚಾರ ಸಿಗಬಹುದು.

ಚಕ್ರವ್ಯೂಹದ ಅಸಲಿ ಹಕ್ಕೀಕತ್ತು

ಪುನೀತ್ ರಾಜ್‌ಕುಮಾರ್ ನಟನೆಯ 'ಚಕ್ರವ್ಯೂಹ' ಸಿನಿಮಾ ಏಪ್ರಿಲ್ ಮೊದಲ ವಾರದಲ್ಲೇ ರಿಲೀಸ್ ಆಗಬೇಕಿತ್ತು. ಅದಕ್ಕಾಗಿ ನಿರ್ಮಾಪಕರು ಸರ್ವಸಿದ್ಧತೆಯನ್ನೂ ಮಾಡಿಕೊಂಡಿದ್ದರು. ಆದರೆ ಅಂದುಕೊಂಡ ವೇಳೆಗೆ ಸಿನಿಮಾ ಬಿಡುಗಡೆ ಮಾಡಲು ನಿರ್ಮಾಪಕರಿಂದ ಆಗಲಿಲ್ಲ, ಕಾರಣ ಪುನೀತ್ ಕಡೆಯವರು ಒಪ್ಪಲಿಲ್ಲ ಅನ್ನುತ್ತಿದೆ ಗಾಂಧಿನಗರದ ಮೂಲಗಳು.

ಈಗಾಗಲೇ ಪುನೀತ್ ಅವರ ನಿರೀಕ್ಷಿತ ಚಿತ್ರಗಳು ನೆಲಕಚ್ಚುತ್ತಿವೆ. ಅದರಲ್ಲೂ 'ನಿನ್ನಿಂದಲೇ' ಚಿತ್ರ ಇವರ ಕೆರಿಯರ್‌ಗೆ ದೊಡ್ಡ ಪೆಟ್ಟು ನೀಡಿದೆ. 'ರಣವಿಕ್ರಮ' ಕೂಡ ಬಾಕ್ಸ್ ಆಫೀಸ್‌ನಲ್ಲಿ ಸೋತು ಹೈರಾಣ ಮಾಡಿದೆ. ಅಲ್ಲದೇ ಬಿಡುಗಡೆ ಆಗಬೇಕಿರುವ 'ಚಕ್ರವ್ಯೂಹ'ದ ಬಗ್ಗೆ ಅಷ್ಟೇನೂ ನಿರೀಕ್ಷೆ



ಇಲ್ಲವಂತೆ. ಹೀಗಾಗಿ ಮತ್ತೆ ಸೋಲಿನ ಭೀತಿ ಎದು
ಇದನ್ನು ತಪ್ಪಿಸಿಕೊಳ್ಳಲು ಡಾ.ರಾಜ್‌ಕುಮಾರ್‌ರ ಹುಟ
ಮೊರೆ ಹೋಗಲಾಗಿದೆಯಂತೆ. ಹೀಗಾಗಿ ಮುಂದಿನ
ಚಿತ್ರ ರಿಲೀಸ್ ಮಾಡಲಾಗುತ್ತಿದೆ. ಇಂತಹ ವೇ
ಸಿನಿಮಾ ಪ್ರಚಾರದಲ್ಲಿ ತೊಡಗಬೇಕಿದ್ದ ಪುನೀತ್,
ಶೂಟಿಂಗ್ ನೆಪದಲ್ಲಿ ಆಸ್ಟ್ರೇಲಿಯಾಕ್ಕೆ ಹಾರಿದ್ದಾರೆ



ರಾಧಿಕಾ ನಮಗಾ ನಷ್ಟ ಭರಿಸ್ತಾರಂ


ಕುಮಾರಸ್ವಾಮಿ ಪುತ್ರ ನಿಖಿಲ್
ಸಿನಿಮಾ ಲೋಕಕ್ಕೆ ಎಂಟ್ರಿ ಕ
ದ್ದಂತೆಯೇ, ರಾಧಿಕಾ ಕ
ಸ್ವಾಮಿ ಗೂಡು
ಕೊಂಡಿದ್ದಾರೆ. ಅವರ
ಸಿನಿಮಾರಂಗದಲ್ಲಿ
ಕೊಳ್ಳುತ್ತಿಲ್ಲ, ಅಲ್ಲದೇ
ನಿಂತಿರುವ 'ನಮಗಾಗಿ'
ಬಗ್ಗೆಯೂ ಅವರು ತಲೆ ಕೆಡಿಸಿಕೊ
ಸದ್ಯ ಸಿಕ್ಕಿರುವ ಮಾಹಿತಿಯ
ಆ ಸಿನಿಮಾ ಕಂಪ್ಲೀಟ್ ಆಗಲ್ವಂತೆ. ಮ
ಹಂತದ ಶೂಟಿಂಗ್‌ನಲ್ಲಿ ರಾಧಿಕಾ ನಟಿಸಲ್ಲವಂತೆ.
ಈವರೆಗೂ ಖರ್ಚಾಗಿರುವ ಹಣವನ್ನು ವ
ನೀಡುವ ಮಾತುಗಳನ್ನು ಅವರು ಆ
ಅನ್ನಲಾಗುತ್ತಿದೆ.

ತಿಂಗಳ ಹಿಂದೆಯಷ್ಟೇ ರಾಧಿಕಾ
ಕದ್ದುಮುಚ್ಚಿ 'ನಮಗಾಗಿ' ಚಿತ್ರದ ಶೂಟಿಂ
ಪಾಲ್ಗೊಳ್ಳುತ್ತಿದ್ದಾರೆ ಅನ್ನುವ ಸುದ್ದಿ ಹಬ್ಬಿತ್ತು. ಆ
ಅದು ಸುಳ್ಳು ಸುದ್ದಿಯೆಂದು ನಿರ್ದೇಶಕರು
ಕೊಟ್ಟಿದ್ದರು. ತಮ್ಮ ಸಿನಿಮಾ ನಿಂತಿದೆ
ಮಾತುಗಳನ್ನೂ ಆಡಿದ್ದರು. ಈ ಸುದ್ದಿಗೆ
ಪ್ರತಿಕ್ರಿಯೆ ಸಿಗುತ್ತೋ ಕಾದು ನೋಡಬೇಕು.

ಕಾಮಿಡಿ ನಟನಾದ ದರ್ಶನ್

ಸಾಹಸ ಪ್ರಧಾನ ಸಿನಿಮಾಗಳ ಮೂಲಕವೇ ಗುರುತಿಸಿಕೊಂಡಿರುವ ದರ್ಶನ್, ಇದೇ ಮೊದಲ ಬಾರಿಗೆ ಔಟ್ ಅಂಡ್ ಔಟ್ ಕಾಮಿಡಿ ಚಿತ್ರದಲ್ಲಿ ನಟಿಸಿದ್ದಾರೆ. ಈಗಷ್ಟೇ ಶೂಟಿಂಗ್ ಕಂಪ್ಲೀಟ್ ಮಾಡಿರುವ 'ಜಗ್ಗು ದಾದ' ಚಿತ್ರದಲ್ಲಿ ಇವರದ್ದು ಹಾಸ್ಯ ಪ್ರಧಾನ ಪಾತ್ರವಂತೆ. 'ಜಗ್ಗು ದಾದ' ಪಾತ್ರದ ಬಗ್ಗೆ ದರ್ಶನ್ ಈವರೆಗೂ ಮಾತಾಡಿರಲಿಲ್ಲ, ನಿರ್ದೇಶಕರೂ ಯಾವ ಗುಟ್ಟನ್ನೂ ಬಿಟ್ಟು ಕೊಟ್ಟಿರಲಿಲ್ಲ. ಪಾತ್ರವು ವಿಭಿನ್ನವಾಗಿರುವುದರಿಂದ ಸದ್ದಿಲ್ಲದೇ ಶೂಟಿಂಗ್ ಮಾಡಿದ್ದಾರೆ ನಿರ್ದೇಶಕರು. 'ಜಗ್ಗು ದಾದ'ನಿಗೆ ರೌಡಿಸಂ ಹಿನ್ನೆಲೆ ಇದ್ದರೂ ಅದನ್ನು ನವಿರಾದ ಹಾಸ್ಯದ ಮೂಲಕ ಕಟ್ಟಿಕೊಟ್ಟಿದ್ದಾರಂತೆ ನಿರ್ದೇಶಕರು. ಹೀಗಾಗಿ ನಗಿಸುತ್ತಲೇ ಹೊಸದೊಂದು ಕತೆಯನ್ನು ಹೇಳಲಿದ್ದಾರಂತೆ ದರ್ಶನ್. ಇದೇ ಮೊದಲ ಬಾರಿಗೆ ಇವರು ಇಂಥದ್ದೊಂದು ಪಾತ್ರವನ್ನು ಪೋಷಿಸಿದ್ದಾರೆ. ಹೀಗಾಗಿ ಚಿತ್ರದ ಬಗ್ಗೆ ದರ್ಶನ್‌ಗೆ ತುಂಬಾನೇ ನಿರೀಕ್ಷೆ ಇದೆಯಂತೆ. ಎಲ್ಲವೂ ಅಂದುಕೊಂಡಂತೆ ಆದರೆ, ಮೇ ತಿಂಗಳಲ್ಲಿ ಚಿತ್ರ ತೆರೆಗೆ ಬರಲಿದೆ. ಅಲ್ಲಿಂದ ದರ್ಶನ್‌ರನ್ನು ಅಭಿಮಾನಿಗಳು ನೋಡುವ ರೀತಿಯೇ ಬದಲಾಗಲಿದೆಯಂತೆ.

ಸೈನಿಕನಿಗೆ ಸುಖವಿಲ್ಲ



ಮತ್ತೆ ತಾವು ಹೀರೋ ಆಗುವುದಾಗಿ ಸಿ.ಪಿ.ಯೋಗೀಶ್ವರ್ ಘೋಷಿಸಿದ್ದಾರೆ. ತಮಗೆ ಸಾಕಷ್ಟು ಹೆಸರು ತಂದುಕೊಟ್ಟ 'ಸೈನಿಕ' ಸಿನಿಮಾದ ಮುಂದುವರೆದ ಭಾಗದಲ್ಲಿ ನಟಿಸುವುದಾಗಿ ಹೇಳಿಕೊಂಡಿದ್ದಾರೆ. ಆದರೆ ಈ ಚಿತ್ರದ ನಿರ್ದೇಶಕರ ಬಗ್ಗೆ ಗೊಂದಲ ಸೃಷ್ಟಿಯಾಗಿದೆ. 'ಸೈನಿಕ' ಚಿತ್ರಕ್ಕೆ ಮಹೇಶ್ ಸುಖಧರೆ ಡೈರೆಕ್ಟರ್ ಆಗಿದ್ದರು. ಸದ್ಯ ಇವರು 'ಹ್ಯಾಪಿ ಬರ್ತ್‌ಡೇ' ಸಿನಿಮಾಗೆ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಇದು ಮುಗಿಯುತ್ತಿದ್ದಂತೆಯೇ ಹೊಸ ಹುಡುಗನಿಗೆ ಸಿನಿಮಾ ಮಾಡಬೇಕಿದೆ. ಹೀಗಾಗಿ 'ಸೈನಿಕ-2' ಸಿನಿಮಾಗೆ ಇವರ ನಿರ್ದೇಶನ ಅನುಮಾನವಂತೆ. ಈ ಕುರಿತು ಸುಖಧರೆ ಕೂಡ ಸ್ಪಷ್ಟನೆ ನೀಡುತ್ತಾರೆ. "ಯೋಗೀಶ್ವರ ಅವರು ಸಿನಿಮಾ ಮಾಡುತ್ತಿರುವ ವಿಷಯ ನನಗೂ ಮಾಧ್ಯಮಗಳಿಂದ ತಿಳಿದಿದೆ. ಆದರೆ ನನ್ನವರೆಗೂ ಅದು ಬಂದಿಲ್ಲ. ಅಷ್ಟಕ್ಕೂ ಸದ್ಯ ನಾನು ಬಿಜಿ ಇದ್ದೇನೆ. ಹೀಗಾಗಿ ಸದ್ಯಕ್ಕೆ ಆ ಸಿನಿಮಾ ಮಾಡುವ ಯೋಚನೆ ನನಗಿಲ್ಲ" ಅಂದಿದ್ದಾರೆ. 'ಸೈನಿಕ' ಸಿನಿಮಾದ ಕತೆಯು ಆ ಸಿನಿಮಾದಲ್ಲೇ ಮುಕ್ತಾಯವಾಗಿದೆ. ಎಳೆಯುವಂತಹ ಯಾವ ಸನ್ನಿವೇಶಗಳೂ ಚಿತ್ರದಲ್ಲಿ ಇಲ್ಲ. ಹೀಗಾಗಿ ಸುಖಧರೆ ಮನಸು ಮಾಡುತ್ತಿಲ್ಲ ಅನ್ನುವ ಮಾತೂ ಇದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4. Phone :
Fax : 26604536, E-mail :lankesh70@rediffmail